UNIVERSAL
LIBRARY
OU_198399
UNIVERSAL
LIBRARY

# ಮಡಿ-ಮೈಲಿಗೆಯ ಗುಟ್ಟು.

(ಒಂದು ಸಾಮಾಜಿಕ ಪ್ರಬಂಧವು.)

—ಲೇಖಕ—

ರಾಮಚಂದ್ರ ತ್ರ್ಯಂಬಕ ಕರ್ಪೂರ,

ಆನಂದವನ.

—ಪ್ರಕಾಶಕ—

ವಾಯ್. ಜಿ. ಕುಲಕರ್ಣಿ,

ಆನಂದವನ.

1921.

ಬೆಲೆ ೨೪ ಆಣೆ.

## ಲೇಖಕನ ನಿವೇದನ.

ಈ ಉಪಯುಕ್ತ ವಿಷಯವನ್ನು ಬಾಲಬೋಧವಾಗುವಂತೆ ಸಮಾಜದ ಮುಂದಿರಿಸಿರುತ್ತದೆ. ಕೆಲವು ವರ್ಷಗಳ ಹಿಂದೆ ಹುಬ್ಬಳ್ಳಿಯಲ್ಲಿ ಪ್ರಕಟವಾಗುತ್ತಿದ್ದ "ಸಮಾಲೋಚಕ" ವೆಂಬ ಮಾಸಿಕ ಪುಸ್ತಕದಲ್ಲಿ ಪ್ರಸಿದ್ಧವಾದ "ಸೋವಳೆ, ಓವಳೆ ವ ವಿಟಾಳ" ವೆಂಬ ಲೇಖವು ಇದಕ್ಕೆ ಮೂಲಧನವಾಗಿರುತ್ತದೆ. ಇದರ ವಾಚನದಿಂದ ಸಮಾಜದಲ್ಲಿ ಮಡಿ-ಮೈಲಿಗೆಯ ವಿಷಯವಾಗಿ ತೋರಿಬರುವ ಔದಾಸೀನ್ಯವು ಕೆಲವು ಸಹೃದಯ ಜನರಿಗಾದರೂ ಅಸಹ್ಯವಾಗಿ ತೋರೀತೆಂದು ದೃಢವಾದ ನಂಬಿಕೆಯಿದೆ. ಆರ್ಯಸಂಸ್ಕೃತಿಗಳನ್ನು ಹಳಿಯುವ ನಮ್ಮ ಸುಧಾರಕರು ಮಡಿ-ಮೈಲಿಗೆಯ ನಿರ್ಬಂಧವನ್ನು ಒಮ್ಮೆ ಮನಃಪೂರ್ವಕವಾಗಿ ಪಾಲಿಸಿ ಅನುಭವ ಪಡೆಯಬೇಕೆಂದು ಪ್ರಾರ್ಥನೆಯಿರುವದು; ಪ್ರಿಯ ಸುಧಾರಕ ಬಂಧುಗಳೇ, ಇಷ್ಟೊಂದು ಗಟ್ಟಿ ಮನಸ್ಸು ಮಾಡುವಿರೇನು?

ಆನಂದವನ, ವಿಧೇಯ,

೧೪-೮-೨೧. ರಾ. ತ್ರ್ಯಂ. ಕರ್ಪೂರ.

# ಮಡಿ-ಮೈಲಿಗೆಗಳ ಗುಟ್ಟು.

## ಲೇಖಾಂಕ ೧.

ಸುಧಾರಕ—ಏನು, ಆಚಾರ್ಯರೇ, ಮುಟ್ಟೇ ಪುಟ್ಟೇ ಎಂದು ಒಟಗುಟ್ಟುತ್ತ ಎತ್ತ ಹೊರಟಿರಿ? ಎಲ್ಲಿಯಾದರೂ ಬೇಟಿ ಸಿಕ್ಕಿರುವದೇನು? ಅಹಾ! ನಿಮ್ಮ ಥಾಲಿಯೊಳಗಿನ ಸವಟು ನಿಮಗಿಂತ ಹೆಚ್ಚು ಗಡಬಿಡಿ ಮಾಡುತ್ತದಲ್ಲ! ಅದರ ಕುಣಿತವು ಬಹಳ ಮಾಡಿ ನಿಮ್ಮ ಹಾರಿಕೆಯ ತಾಳವನ್ನೇ ಅನುಸರಿಸಿದಂತೆ ತೋರುತ್ತದೆ. ಈಗಿನ ಸುಧಾರಣೆಯ ಕಾಲದಲ್ಲಿ ಯಾರು ಕೇಳಬೇಕರೀ ಆಚಾರ್ಯರೇ, ನಿಮ್ಮ ಈ ಒಣ ಮಡಿಯನ್ನು?

ಆಚಾರ್ಯ—ಇದೆಲ್ಲ ಉಸಾಬರಿಯು ನಿನಗೇತಕ್ಕೆ? ನೀನು ಹೇಳಿ-ಕೇಳಿ ಸುಧಾರಕನು, ನಿನ್ನ ಧರ್ಮಲಂಡತನವನ್ನು ನಿನ್ನ ವೇಷವೇ ಹೇಳಿಕೊಡುತ್ತದೆ. ಧರ್ಮಲಂಡರಿಗೆ ಮಡಿ-ಮೈಲಿಗೆಗಳ ವಿಚಾರವು ತಿಳಿಯುವದುಂಟೇ!

ಸುಧಾರಕ—(ಚೇಷ್ಟೆ ಮಾಡುತ್ತ) ಅಹಾ! ಇವರು ಬಲು ತಿಳುವಳಿಕೆಯುಳ್ಳವರು! ನಿಮ್ಮ ಮರುಳತನಕ್ಕೆ ಪರದೇಶದವರು ಬಿದ್ದು, ಬಿದ್ದು ನಗುತ್ತಿರುವರು.

ಆಚಾರ್ಯ—ನಾವು ಮರುಳರೋ, ನಗುವವರು ಮರುಳರೋ? ನೆಟ್ಟಗೆ ಮಾತಾಡು.

ಸುಧಾರಕ—ನೆಟ್ಟಗೆ ಜೋರಿ ಮಾತಾಡಬೇಕೆ? ನಿಮ್ಮ ಮರುಳತನವು ನಿಮಗಿನ್ನೂ ತಿಳಿದಿಲ್ಲವೋ? ಸರ್ವದಾ ಪರಾನ್ನವನ್ನುಂಡು ತೇಗುವ ನಿಮಗೆ ಈ ಬಗೆಯ ವಿಚಾರಕ್ಕೆ ಹೊತ್ತಾದರೂ ಹ್ಯಾಗೆ ಸಾಗಬೇಕು? ಒಳ್ಳೇದು ನಾನು ಹೇಳುತ್ತೇನೆ ಕೇಳಿರಿ. ಆಚಾರ್ಯರೇ, ನಿಮ್ಮ ಮಡಿ-ಮೈಲಿಗೆಗಳ ವಿಲಕ್ಷಣ ಪದ್ಧತಿಯನ್ನಷ್ಟು ನೋಡಿರಿ. ನಿಮ್ಮಲ್ಲಿಯ ಗಂಡಸರಿಗೆ ಶೂದ್ರ ಸ್ಪರ್ಶದಿಂದ ಮೈಲಿಗೆ ಇರಲಿ, ಹೆಂಗಸರಿಗೆ ಮಾತ್ರ ಉಂಟಷ್ಟೇ; ಆದರೆ ಅವರು ಹೊಸ ಬಟ್ಟೆಗಳನ್ನುಟ್ಟುಕೊಂಡಾಗ ಇಲ್ಲವೆ ಶುದ್ಧ ಬಿಳೇ ಬಣ್ಣದ ಇಲ್ಲವೆ ಹಳದೀ ಬಣ್ಣದ ಬಟ್ಟೆಗಳನ್ನುಟ್ಟುಕೊಂಡಾಗ, ಅವರಿಗೂ ಶೂದ್ರ ಸ್ಪರ್ಶದಿಂದ ಮೈಲಿಗೆಯಾಗುವದಿಲ್ಲ. ರೇಶಿಮೆಯ ವಸ್ತ್ರಗಳ

ಬಟ್ಟೆಗಳಿಗಿಂತ, ಸರಿಯನ್ನು ಬಡೆದುಕೊಂಡಿದ್ದ ಹೊಸ ಬಟ್ಟೆಗಳು ನಿಮಗೆ ಶುಚಿಯಾಗಿರುವದನ್ನು ನೋಡಿದರೆ ಸಾಧಾರಣ ಹುಚ್ಚನು ಕೂಡಾ ನಿಮ್ಮ ಮೂರ್ಖತನಕ್ಕೆ ನಗದೆ ಇರಲಾರನು. ಪಾಪ! ನಮ್ಮ ದೇಶದ ಜಾಡರು ನೇದ ಕರೇ ಬಟ್ಟೆಗಳನ್ನು (ಶೀರೆಗಳನ್ನು) ಉಟ್ಟುಕೊಂಡಾಗ ನಿಮ್ಮ ಹೆಂಗಸರು ಶೂದ್ರರನ್ನು ಮುಟ್ಟಬಾರದಂತೆ! ಆದರೆ ಪರದೇಶದ ಬಿಳೀ ತೊಗಲಿನವರು ನೇದ ಕರೀ ಬಟ್ಟೆ(ಚೀಟು-ಅಲವಾನ) ಯನ್ನುಟ್ಟುಕೊಂಡಿದ್ದರೆ ಅಡ್ಡಿಯಿಲ್ಲವಂತೆ! ಅಹಹ! ಎಷ್ಟು ಬುದ್ಧಿವಂತಿಕೆಯ ವಿಚಾರವಿದು! ಇಂಥ ಬೆಲೆಯುಳ್ಳ ತತ್ವಗಳು ಅನ್ಯರಿಗೆ ತಿಳಿಯಬಹುದೆ? ಇರಲಿ; ಈ ಮರುಳರ ಮರುಳುತನವನ್ನು ಇನ್ನಿಷ್ಟು ನೋಡೋಣ!

ಜಳಕಮಾಡಿ ಒಗೆದ ಬಟ್ಟೆಯನ್ನುಟ್ಟ ಅಮ್ಮನವರಿಗೆ ಜಳಕಮಾಡದೆ ಇದ್ದವರ ಒಲ್ಲಿಯ ಸೆರಗು ತಾಕಿದರೂ ಮೈಲಿಗೆಯಾಗುವದಂತೆ; ಹಿಟ್ಟನ್ನು ಹುರಿದು ಅದರಲ್ಲಿ ನೀರುಹಾಕಿ ರೊಟ್ಟಿಗಳನ್ನು ಮಾಡಿದರೆ ಅದಕ್ಕೆ ದಶಮಿ ಎಂಬ ಸಂಜ್ಞೆಯು ಬಂದು, ಅವು ಮಡಿ ಮೈಲಿಗೆಗಳ ಎಳತಕ್ಕೆ ಒಳಗಾಗುವದಿಲ್ಲವಂತೆ; ಆದರೆ ಹಸೀ ಹಿಟ್ಟಿನಲ್ಲಿ ನೀರುಸುರವಿ ಮಾಡಿದ ರೊಟ್ಟಿಗಳು ಮೈಲಿಗೆಯವರಿಂದ ಮುಟ್ಟಲ್ಪಟ್ಟರೆ ಮಡಿಗೆ ಅಯೋಗ್ಯವಾಗುವವಂತೆ! ಏನು ವಿಲಕ್ಷಣ ಮಡಿ-ಮೈಲಿಗೆಯ ವಿಚಾರವಿದು? ಬ್ರಾಹ್ಮಣಾ, ಇಂಥ ಉದಾಹರಣೆಗಳು ಸಾವಿರಾರು ಸಿಗವವು. ಯಾಕೆ, ನನ್ನ ಮಾತಿನಲ್ಲಿ ಏನಾದರೂ ಅರ್ಥವಿದೆಯೋ ಇಲ್ಲವೋ ಮಾತಾಡು-ಮಾತಾಡು.

ಆಚಾರ್ಯ—ಏನುಮಾತಾಡಲೆಪ್ಪಾ, ನಿನ್ನಂಥ ಬಾಯ್ಬಡಕನೆದುರಿಗೆ! ನೀನು ಕಡ್ಡಿಯನ್ನೊಯ್ದು ಗುಡ್ಡವನ್ನಾಗಿ ಮಾಡಿತೋರಿಸುತ್ತೀ; ನಮ್ಮ ಪ್ರಾಚೀನರೇನು ದಡ್ಡರೇ? ದೊಡ್ಡದೊಡ್ಡ ಶಾಸ್ತ್ರಗಳನ್ನು ರಚಿಸಿದ ಋಷಿಗಳು ಅಜ್ಞರೇ; ಈಗಿನವರಾದ ನೀವು ಮನಬಂದಂತೆ ಮಾತಾಡುತ್ತೀರಿ. ಅದು ಸುಳ್ಳು, ಇದುಸುಳ್ಳು, ಅದರಲ್ಲೇನಿದೆ? ಇದರಲ್ಲೇನಿದೆ? ಮಡಿಯಿಲ್ಲ-ಮೈಲಿಗೆಯಿಲ್ಲ, ದೇವರಿಲ್ಲ-ದಿಂಡರಿಲ್ಲವೆಂದು ಲಂಡತನದಿಂದ ನುಡಿಯುವ ನಿಮಗೆ ಯಾರೂ ಶಿಕ್ಷಿಸುವವರಿಲ್ಲದಾಗಿದೆ. ಅಂತೇ ನೀವು ಹಿರಿಯರು ಹಾಕಿದ ನಿಯಮಗಳನ್ನು ಮುರಿದು ಸ್ವಚ್ಛಂದವಾಗಿ ಆಚರಿಸಹತ್ತಿದ್ದೀರಿ. ಇಷ್ಟೇ ಅಲ್ಲ; ನಾವೇ ಪಂಡಿತರೆಂದು ಹಿಂದಿನವರ ಆಚರಣೆಗಳನ್ನು ಹಳಿಯಹತ್ತಿದ್ದೀರಿ. ಸುಧಾರಕರಾದ ನಿಮ್ಮ ಪಾಂಡಿತ್ಯಕ್ಕೆ ಅರಣ್ಯ ಉಪಸರ್ಗವನ್ನು ಹಚ್ಚುವದು ಯುಕ್ತವಾಗಿದೆ.

ಸುಧಾರಕ—(ಸಿಟ್ಟಿನಿಂದ) ಯಾಕೆ ಆಚಾರ್ಯರೇ, ಬರಬರುತ್ತ ನಾಲಿ

ಗೆಯು ಉದ್ಧವಾಗತೊಡಗಿತು? ಯಾರಸಂಗಡ ಮಾತಾಡುತ್ತೀರೆಂಬದರ ಸ್ಮರಣ ವಿರಲಿ; ನಾನು ಬಿ. ಎ. ಪಾಸು ಮಾಡಿದ್ದೇನೆ; ನನ್ನಮುಂದೆ ನೀವು ಓಡುವಿರಾ? ಏನೋ ಆಚಾರಿಯು ಮುದುಕನೆಂದು ಮರ್ಯಾದೆಕೊಟ್ಟು ಮಾತಾಡಿದರೆ ಮೆಲ್ಲಗೆ ಮೈಮೇಲೆಯೇ ಏರಿ ಬರಹತ್ತಿದಿರಿ? ಜೋಕೆ.

ಆಚಾರ್ಯ(ಸ್ವಗತ)—ಇದೇನು ಒಣಉಸಾಬರಿಯು; ಇವನಕೂಡ ನಾನು ಮಾತಾಡಿದ್ದೇ ತಪ್ಪಾಯಿತು. ಈ ಗೊಂದಲದಲ್ಲಿ ಒಂದು ತಾಸು ಪುಕ್ಕಟೆಯಾಗಿ ಹೋಯಿತು; ಹಾಗೇ ಹೋಗಿದ್ದರೆ ಒಂದೆರಡು ಮನೆಗಳಲ್ಲಿ ಗಜಗೌರಿಯ ಪೂಜೆಯನ್ನಾದರೂ ಮಾಡಿಸಿ ಕೈತುಂಬದಕ್ಷಿಣೆಯನ್ನು ಸಂಪಾದಿಸುತ್ತಿದ್ದೆನು. ಅತ್ತಲಾಭವೂ ಹೋಯಿತು; ಇತ್ತ ಇವನಿಂದ ಮಾನಭಂಗಮಾಡಿಸಿಕೊಳ್ಳುವ ಪ್ರಸಂಗವೂ ಬಂತು. ಈಗಿನ ಹುಡುಗರು ಸುಧಾರಣೆ-ಸುಧಾರಣೆಯೆಂದು ಒಣಹೆಮ್ಮೆಗೆ ಬಿದ್ದು ಶೀಘ್ರ ಕೋಪಿಗಳಾಗಿರುವರು. ಇವನ ಕೈಯೊಳಗಿಂದ ಮಾನದಿಂದ ಪಾರಾಗುವದೇ ನನಗೆ ಕಠಿಣವಾಗಿದೆ. (ಪ್ರಕಟವಾಗಿ) ಅಪ್ಪಾ, ಸುಧಾರಕಾ, ನೀನು ದೊಡ್ಡ ಪಂಡಿತನಿರುತ್ತೀ; ನೀನು ಇಷ್ಟುದೊಡ್ಡ ಯೋಗ್ಯತೆಯವನಿರುವಿಯೆಂಬದು ನನಗೆ ಮೊದಲೇ ತಿಳದಿದ್ದರೆ, ನಾನು ನಿನ್ನೊಡನೆ ಮಾತನ್ನೇ ಆಡುತ್ತಿರಲಿಲ್ಲ. ಈಗ ನಮ್ಮಿಬ್ಬರ ವೇಳೆಯು ಸುಮ್ಮನೆ ಗತಿಸಿಹೋಯಿತು. ಇನ್ನು ನಾನು ನನ್ನ ಕೆಲಸಕ್ಕೆ ಹೋಗುತ್ತೇನೆ; ನೀನು ನಿನ್ನಕೆಲಸಕ್ಕೆ ಹೋಗಬಹುದು.

ಸುಧಾರಕ—ಹಾ! ಇದೇನು ಡೋಕಾರಿತನವನ್ನು ತೆಗೆದಿರಿ? ಹ್ಯಾಗಾದರೂ ಮಾಡಿ ಸರಿಪಿದ್ದು ಹೋಗಬೇಕೆನ್ನುತ್ತೀರೇನು? ನಾನು ನಿಮ್ಮನ್ನು ಹೋಗಗೊಡುವದಿಲ್ಲ; ನೀವು ನಿಮ್ಮ ವಿಚಾರಗಳನ್ನಾದರೂ ಸಿದ್ಧಮಾಡಿತೋರಿಸಿರಿ; ಇಲ್ಲವೆ ನಾನಾದರೂ ನನ್ನ ವಿಚಾರಗಳನ್ನು ಸಿದ್ಧಮಾಡಿತೋರಿಸುತ್ತೇನೆ. ನಮ್ಮಿಬ್ಬರ ಮಾತಿನಲ್ಲಿ ಯಾವದಾದರೊಂದು ನಿರ್ಣಯವಾಗಲಿಕ್ಕೇಬೇಕು. ವೇಳೆಯು ಪುಕ್ಕಟೆಯಾಗಿ ಹೋಯಿತೆಂದು ತಿಳಿಯಲಿಕ್ಕೆ ಇದೇನು ಗೊಡ್ಡ ಹರಟೆಯೆಂದು ತಿಳದಿರುವಿರೇನು? ಆಚಾರ್ಯರೇ, ನಿಮ್ಮ ಮಡಿ ಮೈಲಿಗೆಯ ವಿಚಾರವು ನಮ್ಮ ದೇಶದಲ್ಲಿ ಬಹು ಅನರ್ಥಕ್ಕೆ ಕಾರಣವಾಗಿರುವದು. ಈ ಅನರ್ಥವನ್ನು ಹೋಗಲಾಡಿಸುವದೇ ಸುಧಾರಕರಾದ ನಮ್ಮ ಕೆಲಸವಾಗಿರುತ್ತದೆ.

ಆಚಾರ್ಯ(ತನ್ನಲ್ಲಿ)—ಇದೇನು ಪೇಚಾಟವಪ್ಪಾ? ಈ ದಿವಸ ನನ್ನ ದಕ್ಷಿಣೆಗೆ ಕೇರು ಬೀಳುವಂತೆ ತೋರುತ್ತದೆ. ಬೀಳಲಿ, ಸುಧಾರಕರ ವಿಚಾರಗಳಾದರೂ ಹ್ಯಾಗಿರುವವೆಂಬದನ್ನು ತಿಳಿದುಕೊಳ್ಳೋಣ; (ಪ್ರಕಾಶ) ನಮ್ಮ ಮಡಿ-ಮೈಲಿಗೆ

ಗಳಿಂದ ಏನು ಅನರ್ಥವಾಗಿರುತ್ತದೆ?

ಸುಧಾರಕ—ನಮ್ಮ ದೇಶವು ಬಹು ದಿವಸಗಳಿಂದ ಪಾರತಂತ್ರ್ಯವನ್ನು ಅನುಭವಿಸಹತ್ತಿದ್ದು ಸಾಕಾಗದೇ? ಇದಕ್ಕೂ ಹೆಚ್ಚಿನ ಅನರ್ಥವು ಇನ್ನೇನಾಗಬೇಕು?

ಆಚಾರ್ಯ—ಒಳ್ಳೇ ಉದಾಹರಣೆಯನ್ನು ಹೇಳಿದೆ; ದೇಶವು ಪಾರತಂತ್ರ್ಯದಲ್ಲಿ ಸಿಗುವದಕ್ಕೂ ನಮ್ಮ ಮಡಿ-ಮೈಲಿಗೆಗಳಿಗೂ ಸಂಬಂಧವೇನು?

ಸುಧಾರಕ—ನಿಮ್ಮ ಈ ಹಾಳು ಗೊಂದಲವಿಲ್ಲದಿದ್ದರೆ ನಮ್ಮ ದೇಶವು ಬಹು ಸುಖಿಯಾಗಿರುತ್ತಿತ್ತು; ಅಂತೇ ನಮ್ಮ ಸುಧಾರಕರು ಜಾತಿಭೇದವನ್ನು ಮುರಿದೊಗಿದು ಜಗತ್ತಿನಲ್ಲಿ ಅಖಂಡಸೌಖ್ಯವನ್ನುಂಟು ಮಾಡಬೇಕೆಂದು ನಿಶ್ಚಯಿಸಿನ್ನಾರೆ.

ಆಚಾರ್ಯ—ನಾನು ಕೇಳಿದ್ದನ್ನು ಬಿಟ್ಟು ಬರೇ ನಿಮ್ಮ ಸುಧಾರಕರ ಪೌರುಷವನ್ನೇಕೊಚ್ಚಹತ್ತಿದೆಯಲ್ಲ?

ಸುಧಾರಕ—ಜಾತಿಭೇದಕ್ಕೂ ನಿಮ್ಮ ಮಡಿ-ಮೈಲಿಗೆಗಳಿಗೂ ಬಹಳ ಸಂಬಂಧವಿರುತ್ತದೆ. ಹ್ಯಾಗಂದರೆ ನೀವು ಪಂಚಮರನ್ನು (ಅತಿಶೂದ್ರ) ಮುಟ್ಟಿಸಿಕೊಳ್ಳುವದಿಲ್ಲ. ಇದು ನಿಮ್ಮ ಮಡಿ-ಮೈಲಿಗೆಯ ಗೊಂದಲದ ಪರಿಣಾಮವಲ್ಲವೇ? ಒಬ್ಬ ಅತಿ ಶೂದ್ರನ ದೇಹದ ಒಂದು ತುಣುಕು ಸಾವಿರಾರು ಜನ ಬ್ರಾಹ್ಮಣರನ್ನು ಮೈಲಿಗೆ ಮಾಡಿಬಿಡುತ್ತದೆ. ಅಷ್ಟು ಮೈಲಿಗೆಯ ರಾಶಿಗೆ-ರಾಶಿಯೇ ಆ ತುಣುಕಿನಲ್ಲಿ ಅಡಕವಾಗಿರುವದಲ್ಲವೇ? ಇದರಿಂದ ಆ ಅತಿಶೂದ್ರರ ಸಮಾಜದಲ್ಲಿ ಎಷ್ಟು ವಿತುಷ್ಟತೆಯುಂಟಾಗಿದೆ ಎಂಬದರ ಕಲ್ಪನೆಯು ನಿಮಗೇನಾದರೂ ಉಂಟೋ? ನಮ್ಮ ಅಂತ್ಯಜೋದ್ಧಾರವೆಂಬ ಸಾಪ್ತಾಹಿಕ ಪತ್ರವನ್ನು ಓದಿ ನೋಡಿರಿ; ಅಂದರೆ ನಿಮ್ಮ ಕಣ್ಣುಗಳು ನಿಚ್ಚಳವಾಗಿ ತೆರೆಯುವವು. ಈ ಅತಿಶೂದ್ರರ ಮಾತು ಒತ್ತಟ್ಟಿಗಿರಲಿ, ನಿಮ್ಮ ಜಾತಿಯಲ್ಲಿ ಹುಟ್ಟಿ ನಿಮ್ಮ ವಂಶವನ್ನು ಬೆಳಿಸುವದಕ್ಕೆ ಬದ್ಧರಾದ ಸ್ತ್ರೀಯರ ವಿಷಯವಾಗಿಯಾದರೂ ಯಾವಾಗಲೂ ನೀವೆಲ್ಲಿ ಕೃತಜ್ಞತೆಯನ್ನು ತಾಳುತ್ತೀರಿ? ವಿಧಿವಶಾತ್ ಅವರಿಗೆ ವೈಧವ್ಯವು ಬರಲು, ಅವರು ಕೂದಲು ತೆಗೆಯಿಸದಿದ್ದರೆ, ಅವರನ್ನು ಮಡಿ-ಮೈಲಿಗೆಯ ಶುಷ್ಕಕಾಷ್ಠವು ಬೆನ್ನಟ್ಟುವದು. ಅದರಕಾಟವನ್ನು ತಾಳಲಾರದೆ ಎಷ್ಟೋಜನ ಕೋಮಲೆಯರು ಗೋಳಾಡುತ್ತ ತಮ್ಮ ಮನೋಹರವಾದ ಕೂದಲುಗಳ ಭಾರವನ್ನಿಳಿಸಿ ಸೌಂದರ್ಯ ವಿಹೀನರಾಗುವರು. ಹಾಯ್! ಹಾಯ್!! ಈ ದುಷ್ಟಪದ್ಧತಿಗಾಗಿ ಅವರು ನಿಮ್ಮನ್ನೆಷ್ಟು ಶಪಿಸುತ್ತಿರುವರೆಂಬದನ್ನು ಯಾರುಹೇಳಬೇಕು? ಇವೆಲ್ಲಸಮಾಜದಲ್ಲಿ ನಡೆದ ಅನರ್ಥಗಳಲ್ಲವೇ? ಇಂಥ ಅನರ್ಥಗಳನ್ನು ನಾಶಗೊಳಿಸುವದಕ್ಕೆ ನಾವು(ಸುಧಾರಕರು) ಪುನರ್ವಿವಾಹವನ್ನು ಬಳಿಕೆಯ

ಲ್ಲಿ ತಂದಿರುತ್ತೇವೆ. ಅಂತ್ಯಜರ ಕೂಡ ವ್ಯವಹಾರಮಾಡಹತ್ತಿದ್ದೇವೆ. ಮೊನ್ನೆ ನಮ್ಮ ಮಾಜೀ ಸಾ. ಪಟೀಲರವರು ಕೌನ್ಸಿಲದಲ್ಲಿ ತಂದ ಬಿಲ್ಲು ಪಾಸಾಗಿದ್ದರೆ, ನಿಮ್ಮ ವೈದಿಕ ಧರ್ಮವು ಇಷ್ಟೊತ್ತಿಗೆ ಗುಡಿಚಾಪೆ ಕಟ್ಟುತ್ತಿತ್ತು. ಇರಲಿ, ಈಗಾದರೂ ಏನಾಯಿತು? ಮುಂದಾದರೂ ಆ ಪ್ರಸಂಗವು ಬಂದೀತು.

ಆಚಾರ್ಯ—ಸುಧಾರಕರಾದ ನಿಮ್ಮ ಆಕ್ಷೇಪಣೆಗಳು ಇಲ್ಲಿಗೇ ತೀರಿದವೋ, ಅಥವಾ ಇನ್ನೂ ಇರುವವೋ?

ಸುಧಾರಕ—ಎಲೈ ಬ್ರಾಹ್ಮಣ, ತಿಂಗಳಗಟ್ಟಲೆ ಕೇಳು, ನಿಮ್ಮ ಹುಳುಕುಗಳನ್ನು ಬೇಸರಿಯದೆ ಹೇಳುತ್ತೇನೆ. ಆದರೆ ಎಷ್ಟು ಹೇಳಿದರೂ ಅವೇನೂ ಮುಗಿಯುವ ಹಾಗಿಲ್ಲ. ಹೀಗೆ ಯಾಕೆ ಮಾಡಬೇಕೆಂದು ಕೇಳಿದರೆ, ಸಮರ್ಪಕವಾಗಿ ಉತ್ತರವನ್ನು ಕೂಡಾ ಹೇಳಲಿಕ್ಕೆ ನಿಮಗೆ ಬರುವದಿಲ್ಲ.

ಆಚಾರ್ಯ(ಅಭಿಮಾನದಿಂದ)—ಯಾಕೆ ಉತ್ತರವನ್ನು ಹೇಳಲಿಕ್ಕೆ ಬರುವದಿಲ್ಲ?

ಸುಧಾರಕ—ಹಾಗಾದರೆ ಹೇಳಿರಿ ನೋಡೋಣ.

ಆಚಾರ್ಯ—ಏನು ಹೇಳಬೇಕು?

ಸುಧಾರಕ—ಮಡಿ-ಮೈಲಿಗೆಗಳ ಪ್ರತ್ಯಕ್ಷ ಕಾರಣಗಳನ್ನು?

ಆಚಾರ್ಯ—ಇದಕ್ಕೇ ನಿಮಗೆ ನಾಸ್ತಿಕರೆಂದೆನ್ನಬೇಕಾಗುತ್ತದೆ. ಯಾಕಂದರೆ ನೀವು ಎಲ್ಲ ಸಂಗತಿಗಳಿಗೂ ಪ್ರತ್ಯಕ್ಷ ಪ್ರಮಾಣಗಳನ್ನೇ ಬೇಡುವಿರಿ. ಮಹಾರಾಷ್ಟ್ರ ಭಾಷೆಯನ್ನು ಅಧ್ಯಯನ ಮಾಡುವ ಅನ್ಯ ಭಾಷೆಯ ಮನುಷ್ಯನಿಗೆ ಪದಾರ್ಥ ಮಾತ್ರಗಳ ನಾಮ-ಲಿಂಗಗಳನ್ನು ಗೊತ್ತು ಹಚ್ಚುವದು ಕಠಿಣವಾಗುವಂತೆಯೂ, ಮತ್ತು ಆ ಆ ವಸ್ತುಗಳಲ್ಲಿ ಸ್ತ್ರೀತ್ವ-ದರ್ಶಕ ಇಲ್ಲವೆ ಪುರುಷತ್ವ-ದರ್ಶಕ ಸೂಕ್ಷ್ಮ ಚಿಹ್ನ-ಕಣಿಮೆಯು ಲಕ್ಷ್ಯದಲ್ಲಿ ಬಾರದ್ದರಿಂದ ಲಿಂಗಗಳನ್ನು ಗೊತ್ತು ಹಚ್ಚುವದರಲ್ಲಿ ಆವನು ಮೋಸಹೋಗುವಂತೆಯೂ ಮಡಿ-ಮೈಲಿಗೆಗಳ ವಿಷಯದಲ್ಲಿ ನಿಮ್ಮ ಅವಸ್ಥೆಯಾಗುತ್ತದೆ. ನೀವು ಮಡಿ-ಮೈಲಿಗೆಗಳನ್ನು ಮನಮುಟ್ಟಿ ಪಾಲಿಸಿದ ಹೊರತು ನಿಮಗೆ ಅದರ ಸೂಕ್ಷ್ಮ ಕಾರಣಗಳು ತಿಳಿಯಲಾರವು. ಅವು ತಿಳಿಯುವ ವರೆಗೆ ಋಷಿವಚನದ ಮೇಲೆ ನಂಬಿಗೆಯನ್ನಿಟ್ಟು ಸುಮ್ಮನೆ ಆಚರಿಸುತ್ತ ಹೋಗಬೇಕು. ಅದರಲ್ಲಿ ತಪ್ಪಿ ನಡೆದರೆ ಮನುಷ್ಯನಿಗೆ ಪಾಪವು ತಟ್ಟುತ್ತದೆ.

ಸುಧಾರಕ—ನಿಮ್ಮ ಶಾಸ್ತ್ರಗಳೆಲ್ಲ ಬಹುಶಃ ಪಾಪಪುಣ್ಯಗಳ ಮೇಲೆಯೇ ಅವಲಂಬಿಸಿಕೊಂಡಿರುವಂತೆ ಕಾಣುತ್ತವೆ. ಯಾಕಂದರೆ ಒಂದಕ್ಕೂ ಭೌತಿಕಶಾಸ್ತ್ರೀ

ಯ ಆಧಾರದ ಉತ್ತರವಿಲ್ಲ. ಇಂಥ ಅತಂತ್ರ ಉತ್ತರಗಳನ್ನು ನಿಮ್ಮಂಥ ಇನ್ನೊಬ್ಬ ವೈದಿಕ ಮರುಳನ ಮುಂದೆ ಹೇಳಿರಿ. ಸಾವಿರಾರು ಮಂದಿ ಅಂತ್ಯಜರು ಮುಟ್ಟಿದ ಒಂದು ವಸ್ತ್ರದಲ್ಲಿಯ ಮೈಲಿಗೆಯನ್ನೂ ಸಾವಿರಾರು ಮಂದಿ ಬ್ರಾಹ್ಮಣರು ಮುಟ್ಟಿದ ವಸ್ತ್ರದಲ್ಲಿಯ ಪವಿತ್ರತೆಯನ್ನೂ ಯಾವ ಬ್ರಾಹ್ಮಣನು ಸೂಕ್ಷ್ಮದರ್ಶಕ ಯಂತ್ರದಲ್ಲಿ ತೋರಿಸುವನು? ಹೀಗೆ ತೋರಿಸಲಿಕ್ಕೆ ಬಾರದಿದ್ದ ಮೇಲೆ ಮಡಿ-ಮೈಲಿಗೆಗಳು ನಿರರ್ಥಕವೆಂದು ಯಾಕೆ ಅನ್ನಬಾರದು? ಬರಿಯ ಅಂಧಶ್ರದ್ಧೆಯ ಮೇಲೆ ಯಾರ ವಿಶ್ವಾಸವೂ ಕೂಡದು. ಇಂಥ ಅಂಧಶ್ರದ್ಧೆಯನ್ನು ಜನರಿಗೆ ಬೋಧಿಸಿ-ಬೋಧಿಸಿಯೇ ನೀವು ಅವರನ್ನು ಇಷ್ಟು ವಿಚಾರಶೂನ್ಯರನ್ನಾಗಿ ಮಾಡಿರುತ್ತೀರಿ. ಈ ಹಾಳು ಮಡಿ-ಮೈಲಿಗೆಗಳು ಎಂದು ನಮ್ಮ ದೇಶಬಿಟ್ಟು ಹೋಗುವವೋ ಅಂದೇ ನಮ್ಮ ಸುಖಕ್ಕೆ ಪ್ರಾರಂಭವಾಗುವದು.

ಆಚಾರ್ಯ—ಮೂರ್ಖಾ, ಏನು ಮಾತಾಡುವಿ? ಮಡಿ-ಮೈಲಿಗೆಗಳ ವಿಚಾರವಿಲ್ಲದಿದ್ದರೆ ಧರ್ಮವೇ ಉಳಿಯುವಹಾಗಿಲ್ಲ. ಧರ್ಮವು ಮುಣುಗಿದ ಮೇಲೆ ಸುಖವೆಂತಹದು! ವಸ್ತುಸ್ಥಿತಿಯು ಹೀಗಿದ್ದು ಇದಕ್ಕೆ ವಿಪರೀತವಾಗಿ ಮಾತಾಡುವ ನಿನ್ನ ಪಾಂಡಿತ್ಯಕ್ಕೆ ಧಿಃಕಾರವಿರಲಿ.

ಸುಧಾರಕ(ಸಿಟ್ಟಿನಿಂದ)—ಸುಟ್ಟಿತು ನಿಮ್ಮ ಧರ್ಮವು; ಧರ್ಮ-ಧರ್ಮವೆಂದೇ ದೇಶದ ಸ್ಥಿತಿಯನ್ನು ಇಲ್ಲಿಗೆ ತಂದಿರುವಿರಿ!

ಆಚಾರ್ಯ(ಶಾಂತನಾಗಿ)—ಸುಧಾರಕ, ನಾನು ಶುದ್ಧ ವೈದಿಕನು; ನನಗೆ ಅಷ್ಟೊಂದು ವ್ಯವಹಾರಿಕ ವಿಷಯಗಳು ತಿಳಿಯುವದಿಲ್ಲ. ನೀನು ಶುದ್ಧ ಲೌಕಿಕನಿದ್ದು, ಬರಿಯ ಇಂಗ್ರೇಜಿಯನ್ನೋದಿ ನಮ್ಮ ಧರ್ಮದ ವಿಷಯವಾಗಿ ಕೇವಲ ಅಜ್ಞಾನಿಯಿರುತ್ತೀ. ಆದ್ದರಿಂದ ನಾವಿಬ್ಬರೂ ಹೀಗೆ ಸುಮ್ಮನೆ ಬಡದಾಡುವದರಿಂದ ಯಾವದೊಂದರ ನಿರ್ಣಯವಾಗುವದಿಲ್ಲ. ಅಗೋ, ಅಲ್ಲಿ ಶಾಮರಾಯರು ಬರುತ್ತಿರುವರು. ಅವರು ಸಂಸ್ಕೃತದಲ್ಲಿ ದೊಡ್ಡ ಪಂಡಿತರೂ ಧರ್ಮಜ್ಞರೂ ಇದ್ದು, ಇಂಗ್ರೇಜಿಯನ್ನು ಓದಿ ಎಮ್. ಏ. ಪ್ಯಾಸಾದವರೂ ಇರುತ್ತಾರೆ; ದೊಡ್ಡ ದೊಡ್ಡ ವೈದಿಕರೂ ಕೂಡಾ ಧರ್ಮ ಶಾಸ್ತ್ರದಲ್ಲಿ ಸಂಶಯ ಬಂದರೆ ಅವರನ್ನು ಕೇಳುತ್ತಾರೆ. ಓಹೋ! ಅವರು ಇಲ್ಲಿಗೇ ಬಂದುಬಿಟ್ಟರು; ನಮಸ್ಕಾರ, ರಾಯರೇ ನಮಸ್ಕಾರ!!

ಶಾಮರಾಯ—ಇದೇನು ಆಚಾರ್ಯರೇ, ಇಲ್ಲಿ ನಿಂತುಕೊಂಡಿರುವಿರಿ?

ಆಚಾರ್ಯ—ನನಗೂ ಈ ಸುಧಾರಕ ಮಹಾಶಯರಿಗೂ, ವಾದ ಬಿದ್ದಿ

ರುವದು.

ಶಾಮರಾಯ—ಯಾವ ವಿಷಯದಲ್ಲಿ?

ಆಚಾರ್ಯ—ಮಡಿ-ಮೈಲಿಗೆಯ ವಿಷಯವಾಗಿ.

ಶಾಮರಾಯ—ಏನಿರಿ ಸುಧಾರಕರೇ, ಆಚಾರ್ಯರವರಿಗೆ ಹ್ಯಾಟ್‌ಹಾಕಬೇಕೆಂದು ಮಾಡಿದ್ದೀರೇನು?

ಸುಧಾರಕ(ಸ್ವಲ್ಪ ಕುಗ್ಗುತ್ತ)—ಅಂಥ ಪ್ರಸಂಗ ಬಂದರೆ ತಾವೇ ಹಾಕಿಕೊಳ್ಳುವರು.

ಆಚಾರ್ಯ—ರಾಯರೇ, ನಾವು ಮಾಡುವ ಮಡಿ-ಮೈಲಿಗೆಗಳ ವಿಷಯವಾಗಿ ಈ ಸುಧಾರಕರು ಬಹಳ ಆಕ್ಷೇಪಣೆಗಳನ್ನು ತಕ್ಕೊಳ್ಳುತ್ತಾರೆ. ಅವರ ಮಾತನ್ನು ಖಂಡಿಸುವದಕ್ಕೆ ನನ್ನಿಂದಾಗಲಿಲ್ಲ. ನೀವು ಈ ವಿಷಯವನ್ನು ನಮಗೂ ಅವರಿಗೂ ತಿಳಿಸಿ ಹೇಳಬೇಕೆಂದು ಪ್ರಾರ್ಥಿಸುವೆನು.

ಶಾಮರಾಯ—ಆಗಲಿ; ಈ ದಿನ ಸಂಜೆಯ ಮುಂದೆ ಬಂದರೆ ತಿಳಿದಷ್ಟು ಹೇಳುವೆನು. ಸುಧಾರಕರೇ, ನೀವೂ ಬರುವಿರೇನು?

ಸುಧಾರಕ—ಅವಶ್ಯವಾಗಿ ಬರುವೆನು.

---

## ಲೇಖಾಂಕ ೨.

---

ಶಾಮರಾಯ—ಆಚಾರ್ಯರೇ, ಹೀಗೆ ಬನ್ನಿರಿ; ಓಹೋ! ಸುಧಾರಕಸಾಹೇಬರೂ ಬಂದೇಬಿಟ್ಟರು. ನೀವಿಬ್ಬರೂ ಇತ್ತ ಬನ್ನಿರಿ, ಇಲ್ಲಿ ಕುಳಿತುಕೊಳ್ಳಿರಿ.

ಆಚಾರ್ಯ—ನಾವು ಬಂದದ್ದರಿಂದ ತಮ್ಮ ಕೆಲಸಕ್ಕೆ ತೊಂದರೆಯಾಯಿತೇನು?

ಶಾಮರಾಯ—ಇದಕ್ಕಿಂತಲೂ ಹೆಚ್ಚಿನಕೆಲಸ ಇನ್ನಾವುದಿರುವದು? ಪಾಶ್ಚಾತ್ಯ ಸಂಸ್ಕೃತಿಯಿಂದ ನಮ್ಮಲ್ಲಿಯ ಕೆಲವು ತರುಣರು ತಮ್ಮ ಹಿಂದೂ ಧರ್ಮದಲ್ಲಿಯ ಪದ್ಧತಿಗಳನ್ನು ತಿಳಿಯಲಸಮರ್ಥರಾಗಿ ಸುಮ್ಮನೆ ದೂಷಿಸುತ್ತ ಕೂಡ್ರಹತ್ತಿರುವರು. ಇಂಥವರಿಗೆ ಸ್ವಧರ್ಮದಲ್ಲಿ ಪ್ರೀತಿಯನ್ನು ಹುಟ್ಟಿಸಿದರೆ ನಾನು ಬಹು ದೊಡ್ಡ ಕೆಲಸಮಾಡಿದ ಹಾಗಾಗುವದು. ಇದೇ ಪ್ರತಿಯೊಬ್ಬ ಧಾರ್ಮಿಕನ ಮುಖ್ಯಕರ್ತವ್ಯವು; ನನ್ನ ಕರ್ತವ್ಯಕ್ಕೆ ನೀವು ಪ್ರಸಂಗ ತಂದುಕೊಟ್ಟದ್ದಕ್ಕೆ ನಾನು ನಿಮಗೆ ತುಂಬಾ ಋಣಿಯಾಗಿರುವೆನು, ಕೇಳತಕ್ಕದ್ದನ್ನು ಕೇಳಬೇಕು.

ಆಚಾರ್ಯ—ರಾಮರಾಯರೇ ನೀವು ನನಗೆ ಋಣಿಯಾಗುವದಕ್ಕೆ ಕಾರಣವೇನು? ನಾನೂ ನನ್ನ ಕರ್ತವ್ಯವನ್ನೇ ಮಾಡಿರುವೆನಲ್ಲವೆ? (ಸುಧಾರಕನಕಡೆಗೆ ತಿರುಗಿ) ಸುಧಾರಕರೇ, ಯಾಕೆ ಸುಮ್ಮನೆಕುಳಿತಿರಿ? ರಾಯರಮುಂದೆ ನಿಮ್ಮ ಆಕ್ಷೇಪಣೆಗಳನ್ನು ತಿಳಿಸಿರಿ.

ಸುಧಾರಕ—ನಿಮಗೆ ತಿಳಕೊಳ್ಳುವ ಇಚ್ಛೆಯಿದ್ದರೆ ನೀವೇ ಕೇಳಿರಿ; ಇಲ್ಲದಿದ್ದರೆ ಬಿಡಿರಿ; ನಾನು ಸುಮ್ಮನೆ ಕುಳಿತುಕೇಳತಕ್ಕವನು. ಮಧ್ಯದಲ್ಲಿ ಏನಾದರೂ ಕೇಳುವಪ್ರಸಂಗಬಂದರೆ ಮಾತ್ರ ಮಾತಾಡುವೆನು.

ಆಚಾರ್ಯ—ರಾಯರೇ, ಈ ಸುಧಾರಕರು ನಾವು ಮಾಡುವ ಮಡಿಮೈಲಿಗೆಗಳಿಗೆ ಅಲ್ಲಗಳೆಯುತ್ತಾರೆ. ವಿಧವೆಯರಾದ ಸಕೇಶಿ ಸ್ತ್ರೀಯರನ್ನು ವಿಧಿನಿಷೇಧವಿಲ್ಲದೆ ಮುಟ್ಟಬೇಕಂತೆ! ಅಂತ್ಯಜರನ್ನು ಪಙ್ಕ್ತಿಗೆ ಕರಕೊಳ್ಳಬೇಕಂತೆ! ಅಂತೂ ಧರ್ಮ ಸಂಕರಕ್ಕೆ ಎಷ್ಟು ಬೇಕೋ ಅಷ್ಟನ್ನು ಗಂಟಿಕ್ಕಿ ಬಾಯ್ಬಿಡುತ್ತಲಿದ್ದಾರೆ. ಅವರ ಪ್ರಶ್ನಗಳ ರಭಸಕ್ಕೆ ಕೇವಲ ವೈದಿಕರಾದ ನಮ್ಮಿಂದ ನಿಲ್ಲುವದಾಗುವದಿಲ್ಲ. ಈಗ ನಾವು ಆಚರಿಸುತ್ತಿರುವ ಮಡಿ-ಮೈಲಿಗೆಯ ಪದ್ಧತಿಯಲ್ಲಿ ಗುಣವೇನು? ದೋಷವೇನು? ಎಂಬದನ್ನು ನೀವು ಸುಧಾರಕರ ಮನಸ್ಸು ಸಮಾಧಾನವಾಗುವ ಹಾಗೆ ಹೇಳಬೇಕು.

ರಾಮರಾಯ—ಆಚಾರ್ಯರೇ, ನಮ್ಮ ಪೂರ್ವಜರು ಬಹು ದೂರ ಲಕ್ಷ್ಯಗೊಟ್ಟು ಧರ್ಮಶಾಸ್ತ್ರವನ್ನು ರಚಿಸಿರುತ್ತಾರೆ. ಅವರಷ್ಟು ಸೂಕ್ಷ್ಮ ಸಂಗತಿಗಳ ಜ್ಞಾನವು ನಮ್ಮಲ್ಲಿ ಇಲ್ಲದಂತಾದ್ದರಿಂದ ಅಜ್ಞಾನದಮೂಲಕ ನಾವು ಬಾಯಿಗೆ ಬಂದಂತೆ ಬಡಬಡಿಸಬೇಕಾಗುತ್ತದೆ. ಇರಲಿ; ಈಗ ನಾವು ಪಾಲಿಸುತ್ತಿದ್ದ ಮಡಿಮೈಲಿಗೆಗಳಲ್ಲಿ ಕೆಲವು ಪದ್ಧತಿಗಳು ಸಶಾಸ್ತ್ರವಿರುತ್ತವೆ; ಕೆಲವು ರೂಢಿಯಮೇಲಿಂದ ಉಂಟಾಗಿರುತ್ತವೆ. ಶಾಸ್ತ್ರ ಸಮ್ಮತವಾದ ಪರಿಶುದ್ಧ ಮಡಿ-ಮೈಲಿಗೆಗಳ ಪದ್ಧತಿಯಲ್ಲಿ ನಾವೀಗ ಎಷ್ಟೋ ಶಿಥಿಲ ಮಾಡಿಕೊಂಡಿರುತ್ತೇವೆ; ಮತ್ತು ಕೆಲವನ್ನು ಅತಿ ಪ್ರಸಂಗರೂಪದಿಂದ ಬರಮಾಡಿಕೊಂಡಿರುತ್ತೇವೆ. ಮಡಿ-ಮೈಲಿಗೆಗಳ ವಿಷಯದಲ್ಲಿ ಧರ್ಮಶಾಸ್ತ್ರವು ಮುಖ್ಯವಾಗಿ ಎರಡು ಉದ್ದೇಶಗಳನ್ನಿಟ್ಟುಕೊಂಡಿರುತ್ತದೆ. ಒಂದನೆಯದು ಜಡಶರೀರಕ್ಕೆ ಯಾವಬಗೆಯ ಸಾಂಸರ್ಗಿಕ ರೋಗಗಳಿಂದ ಮತ್ತು ರೋಗದ ಸೂಕ್ಷ್ಮ ಜಂತುಗಳಿಂದ ತೊಂದರೆಯಾಗದೆ, ಅದು ಸರ್ವದಾ ನಿರೋಗಿಯಾಗಿರಬೇಕೆಂಬದು; ಎರಡನೆಯದು ಕಾರಣ ದೇಹವು ಅಂದರೆ ಲಿಂಗಶರೀರ ಅಥವಾ ಮನಸ್ಸು ಬಹಿರುಪಾಧಿಗಳ ಸಂಸರ್ಗದಿಂದ ಚಾಂಚಲ್ಯವನ್ನು ಹೊಂದದೆ, ಪ್ರಶಾಂತವಾಗಿರ

ಬೇಕೆಂಬದು. ಈ ಎರಡು ಉದ್ದೇಶಗಳು ಸಫಲವಾಗಬೇಕೆಂದೇ ಧರ್ಮಶಾಸ್ತ್ರವು ವಿಧಿನಿಷೇಧಗಳನ್ನು ಕಲ್ಪಿಸಿರುತ್ತದೆ. ಮತ್ತು ಅನಂತ ನಿಯಮಗಳನ್ನು ಹಾಕಿಕೊಟ್ಟಿರುತ್ತದೆ. ದೇಹದಾರ್ಢ್ಯವನ್ನೂ ಮನಸ್ಸಿನ ಪ್ರಸನ್ನತೆಯನ್ನೂ ಬಯಸುವ ನಾವು ಆ ನಿಯಮಗಳನ್ನು ಪಾಲಿಸಲಿಕ್ಕೇ ಬೇಕು. ನೀತಿ ಶಾಸ್ತ್ರವು ಮಡಿ-ಮೈಲಿಗೆಗಳ ಕೆಲವಂಶವನ್ನು ರೂಪಾಂತರದಿಂದ ಒಳಕೊಂಡಿರುತ್ತದೆ, ಧರ್ಮಶಾಸ್ತ್ರವಾಗಲಿ-ನೀತಿಶಾಸ್ತ್ರವಾಗಲಿ, ಮುಖ್ಯವಾಗಿ ಜನಾಂಗದ ಹಿತವನ್ನೇ ಮುಂದಿಟ್ಟುಕೊಂಡಿರುವವಾದ್ದರಿಂದ ಅವು ಸರಪಣಿಯ ಕೊಂಡಿಗಳಂತೆ ಪರಸ್ಪರಸಂಬಂಧದಿಂದಬದ್ಧಿಸಲ್ಪಟ್ಟಿರುತ್ತವೆ. ಮನುಷ್ಯನ ಕೊನೆಯ ಉದ್ದೇಶವು ಶುದ್ಧ ಸತ್ವವನ್ನು ಕಾಯ್ದುಕೊಳ್ಳುವದಿರುವದರಿಂದ, ಆ ಶುದ್ಧ ಸತ್ವವನ್ನು ಸಂಪಾದಿಸುವ ಹಂಬಲವುಳ್ಳವನು ಅಂತ್ಯಜರನ್ನಷ್ಟೇ ಯಾಕೆ ತಮೋಗುಣಿಯಾದ ಬ್ರಾಹ್ಮಣನನ್ನು ಸಹ ಮುಟ್ಟಿಸಿಕೊಳ್ಳಲಾರನು. ಕ್ರೋಧವು ಚಾಂಡಾಲ ಸ್ವರೂಪವೆಂಬದು ಸರ್ವರಿಗೂ ವಿದಿತವಿದ್ದ ಸಂಗತಿಯಷ್ಟೇ; ಆದ್ದರಿಂದ ಕ್ರೋಧವುಳ್ಳವನು ಅರ್ಥಾತ್ ಕಠೋರನು ಅಂದರೆ ತಾವು ಸಪ್ರಿಯನು ಚಾಂಡಾಲ ಸ್ವರೂಪನೆಂದೇ ತಿಳಿಯಬೇಕಾಗುತ್ತದೆ.

ಆಚಾರ್ಯರೇ, ಸ್ಪರ್ಶಾಸ್ಪರ್ಶತೆಯ ವಿಷಯವು ಬಹು ಮಹತ್ವದ್ದಿರುತ್ತದೆ. ಮಡಿ-ಮೈಲಿಗೆಗಳ ವಿಚಾರಕ್ಕೆ ಇದೇ ತಳಹದಿಯು; ಇದರ ಪೂರ್ಣರಹಸ್ಯವನ್ನು ತಿಳಿಯದೆ ಜನರು ಸುಮ್ಮನೆ ದುರಭಿಮಾನಕ್ಕೆ ಬಿದ್ದು ಬಡಿದಾಡುತ್ತಾರೆ; ಇದು ಸರಿಯಲ್ಲ. ಉಚ್ಚವರ್ಣದವರು ಅಂತ್ಯಜರನ್ನು ಮುಟ್ಟಿಸಿಕೊಳ್ಳದ್ದರಿಂದ ಅವರು ಅತಿಶೂದ್ರರನ್ನು ದ್ವೇಷಿಸುತ್ತಾರೆಂತಲ್ಲ; ಇದನ್ನು ನಮ್ಮ ಸುಧಾರಕ ಬಂಧುಗಳು ಲಕ್ಷ್ಯದಲ್ಲಿಯೇ ತರುವದಿಲ್ಲ.

ಆಚಾರ್ಯ—ಸುಧಾರಕರು ಅಂತ್ಯಜರನ್ನು ಪಂಕ್ತಿಯಲ್ಲಿ ತಕ್ಕೊಳ್ಳಲೇಬೇಕೆಂದು ಯಾಕೆ ಆಗ್ರಹ ಪಡುತ್ತಾರೆ?

ಶಾಮರಾಯರು—ಒಂದು ವಿಶಿಷ್ಟ ಪದ್ಧತಿಯಿಂದ ನಡೆಯುವದು ಬೇಸರ ಬಂದದ್ದರಿಂದ ಅವರು ಹೀಗೆ ಕುಣಿದಾಡುತ್ತಾರೆ. ಇದರಲ್ಲೇನೂ ತಥ್ಯಾಂಶವಿಲ್ಲ. ಸ್ಪರ್ಶಾಸ್ಪರ್ಶತೆಯಗೊಂದಲವು ಬರಿಯ ನಮ್ಮ ಹಿಂದೂ ಜನದಲ್ಲಿಯೇ ಇರುತ್ತದೆಂತಲ್ಲ; ಸುಧಾರಿಸಿದ ಎಲ್ಲ ಜನಾಂಗಗಳಲ್ಲಿ ಒಂದಿಲ್ಲೊಂದು ಪರ್ಯಾಯದಿಂದ ಇದ್ದೇ ಇರುತ್ತದೆ. ಸಕೃದ್ದರ್ಶನಕ್ಕೆ ಹಿಂದೂ ಜನರ ಹೊರತು ಮಿಕ್ಕ ಜನರಲ್ಲಿ ಈ ತೊಂದರೆಯಿಲ್ಲೆಂದು ಕಂಡರೂ ಅದು ಭ್ರಮವೆಂದು ವಿಚಾರಾಂತದಲ್ಲಿ ತಿಳಿಯದೆ ಇರದು! ಅತಿ ಶೂದ್ರರನ್ನೂ ಕೂಡಾ ತಮ್ಮ ಜಾತಿಯಲ್ಲಿ ಸಮಾವೇಶ ಮಾಡಿ

ಕೊಳ್ಳುವ ಮುಸಲ್ಮಾನರಲ್ಲಿಯೂ ಮಡಿ-ಮೈಲಿಗೆಗಳ ಗೊಂದಲವಿರುತ್ತದೆ. ಅದರಂತೆ ಪಾಶ್ಚಾತ್ಯರನ್ನೂ ಈ ರೂಢಿಯು ಬಿಟ್ಟಿರುವದಿಲ್ಲ.

ಪಾಶ್ಚಾತ್ಯರಲ್ಲಿ ಯಾವದೊಂದು ಶ್ವಾಪದ ಪ್ರಾಣಿಯನ್ನು ಮುಟ್ಟಿದರೆ ಮೈಲಿಗೆಯಾಗುವನೆಂಬ ಕಲ್ಪನೆಯು ಇರದಿದ್ದರೂ ಪೂರ್ವಪರಂಪರೆಯಿಂದ ನಡೆದು ಬಂದ ಬ್ರಿಟಿಶ ಮನೆತ ... ನದ ಹೊರತು ಅವರು ಎರಡನೆಯ ಯಾವ ಮನುಷ್ಯನ ಸಂಗಡವೂ ಒಂದೇ ಪಂಕ್ತಿಯಲ್ಲಿ ಭೋಜನ ಮಾಡುವದಿಲ್ಲ. ಇಷ್ಟೇ ಅಲ್ಲ; ಕಪ್ಪುಜನರು ಅಪವಿತ್ರರೂ ಅಸ್ಪರ್ಶರೂ ಎಂದು ತಿಳಿದು ಅವರೊಡನೆ ಯಾವ ಬಗೆಯಿಂದ ವರ್ತಿಸುವರೆಂಬದು ಟ್ರಾನ್ಸವಾಲದಲ್ಲಿಯ ಬ್ರಿಟಿಶ ಜನಾಂಗದವರ ಉದಾಹರಣೆಯಿಂದ ಸ್ಪಷ್ಟವಾಗಿ ಕಂಡು ಬರುವದು. ಇಂಗ್ಲಂಡದಲ್ಲಿ ಹುಟ್ಟಿದ ಬ್ರಿಟಿಶ ಮನುಷ್ಯನಿಗೆ ಹಿಂದುಸ್ಥಾನದಲ್ಲಿ ಹುಟ್ಟಿರುವ ಬ್ರಿಟಿಶ ಮನುಷ್ಯನೊಡನೆ ಸಹ ಭೋಜನ ಮಾಡುವದು ಕಡಿಮೆಯ ಯೋಗ್ಯತೆಯದೆಂದೆನಿಸುವದರಿಂದ ಅವನು ಒಂದೇಟೇಬಲ್ಲಿನ ಮೇಲೆ ಕುಳಿತು ಅವನೊಡನೆ ಭೋಜನ ಮಾಡಲಾರನು. ಇದೊಂದು ಬಗೆಯ ಸ್ಪರ್ಶಾಸ್ಪರ್ಶತೆಯು ಪಾಶ್ಚಾತ್ಯರಲ್ಲಿ ರೂಢವಿರುವದೆಂಬದು ನಮ್ಮ ಸುಧಾರಕರಿಗೇನು ಅರಿಯದ ಸಂಗತಿಯಲ್ಲ; ಇರಲಿ.

ಹಿಂದೂ ಸ್ತ್ರೀಯರಿಗೆ ರಜೋದರ್ಶನವಾದರೆ ಅವರು ಮೂರು ದಿವಸಗಳ ವರೆಗೆ ಸರ್ವಕಾರ್ಯಗಳಿಗೆ ಅಸ್ಪರ್ಶರೆಂದು ತಿಳಿಯಲ್ಪಡುವರಷ್ಟೇ; ಆದರೆ ಮುಸಲ್ಮಾನರಲ್ಲಿ ಕೆಲವು ವಿಶಿಷ್ಟಕಾರ್ಯಗಳಿಗಷ್ಟೇ ಅವರನ್ನು ಅಸ್ಪರ್ಶರೆಂದು ಭಾವಿಸುವರು. ಪ್ರಸೂತಳಾದ ಸ್ತ್ರೀಯು, ೧೦ ದಿನಸಗಳನಂತರ ಸ್ಪರ್ಶಕ್ಕೆ ಯೋಗ್ಯಳೆಂದು ಹಿಂದೂ ಜನರು ತಿಳಿಯುವರು, ಮುಸಲ್ಮಾನರು ೪೦ ದಿವಸಗಳ ವರೆಗೆ ಆ ಸ್ತ್ರೀಯನ್ನು ಮುಟ್ಟಿಸಿಕೊಳ್ಳುವದಿಲ್ಲ. ಫಾರಸೀ ಜನರು ಈ ವಿಷಯದಲ್ಲಿ ೧೪ ದಿವಸಗಳ ಅವಧಿಯನ್ನಿಟ್ಟುಕೊಂಡಿರುವರು.

ಹಿಂದುಗಳಲ್ಲಿ ಮಡಿಯಿಂದಿದ್ದ ಬ್ರಾಹ್ಮಣನನ್ನು ಸ್ನಾನಮಾಡದಿದ್ದ ಮೈಲಿಗೆಯ ಮನುಷ್ಯನು ಮುಟ್ಟಿದರೆ ಆತನಿಗೆ ಮೈಲಿಗೆಯಾಗುವಂತೆ ನಿಮಾಜ ಮಾಡುವದಕ್ಕಾಗಿ ಸಜ್ಜಾದ ಮುಸಲ್ಮಾನನನ್ನು ಬೇರೆಯವನು ಮುಟ್ಟಿದರೆ ಆ ನಿಮಾಜ ಮಾಡುವ ಮುಸಲ್ಮಾನನಿಗೆ ಅಶುಚಿ ಸ್ಥಿತಿಯು ಪ್ರಾಪ್ತವಾಗುತ್ತದೆ. ನಾಯಿಯನ್ನು ಮುಟ್ಟಿದರೆ ಬ್ರಾಹ್ಮಣನು ಮೈಲಿಗೆಯಾಯಿತೆಂದು ತಿಳಿಯುವಂತೆ ಶುಚಿಯಾದ ಮುಸಲ್ಮಾನನೂ ನಾಯಿಯನ್ನೇ ಯಾಕೆ, ಅದರ ಕೂದಲವನ್ನು ಮುಟ್ಟಿದರೂ ಸಹ ಮೈಲಿಗೆಯಾಯಿತೆಂದು ತಿಳಿಯುವನು. ಹೇಳತಕ್ಕ ತಾತ್ಪರ್ಯವಿಷ್ಟೇ;

ಸ್ಪರ್ಶಾಸ್ಪರ್ಶದ ಪದ್ಧತಿಯು ಹೆಚ್ಚು ಕಡಿಮೆ ಪ್ರಮಾಣದಿಂದ ಎಲ್ಲ ಜನಾಂಗಗಳಲ್ಲಿ ಇದ್ದೇ ಇರುತ್ತದೆಂಬದು ಈ ಉದಾಹರಣೆಗಳಿಂದ ತಿಳಿದು ಬರುತ್ತದೆ.

ಈ ಪದ್ಧತಿಯಲ್ಲಿ ಈಶ್ವರೋಪಾಸನೆಗೆ ಸಂಬಂಧಿಸಿದ ಭಾಗವು ನಿರ್ದೋಷವಿರುತ್ತದೆ. ದುರಭಿಮಾನಕ್ಕೆ ಸಂಬಂಧಿಸಿದ್ದು ಮಾತ್ರ ಸದೋಷವಿರುತ್ತದೆ. ಉಪಾಸನೆಯ ದೃಷ್ಟಿಯಿಂದ ಈ ನಿಯಮವನ್ನು ಪಾಲಿಸತಕ್ಕ ಮನುಷ್ಯನು ತಾನು ಸ್ಪರ್ಶಮಾಡದೆ ಇದ್ದವರನ್ನು ತುಚ್ಛರೆಂದು ತಿಳಿಯಲಾರನು. ಕೇವಲ ತನ್ನ ವಿಶಿಷ್ಟ ಸ್ಥಿತಿಯನ್ನು ಕಾಯ್ದುಕೊಳ್ಳುವದಕ್ಕೂ ಆ ಸ್ಥಿತಿಯಲ್ಲಿ ಅನಿಷ್ಟ ಉಂಟಾಗದೆ ಇರುವದಕ್ಕೂ ಅವನು ಹೆಣಗುವನು. ಆ ವಿಶಿಷ್ಟ ಸ್ಥಿತಿಯಲ್ಲಿ ನಾನು ಮಡಿಯಿಂದಿರುವೆನೆಂಬ ಭಾವನೆಯು ಅವನಲ್ಲಿ ದೃಢವಾಗಿರುತ್ತದೆ, ಪವಿತ್ರತೆಯೆಂಬವದು ಧರ್ಮದ ಒಂದು ಮುಖ್ಯ ಅಂಗವಿರುತ್ತದೆ. ಈ ಪವಿತ್ರತೆಯ ಹೊರತು ಯಾವ ಧಾರ್ಮಿಕ ವಿಧಿಗಳಲ್ಲಿಯೂ ಈಶ್ವರನನ್ನು ಪ್ರಾರ್ಥಿಸುವದಕ್ಕೆ ಮನುಷ್ಯನಿಗೆ ಅಧಿಕಾರವು ಪ್ರಾಪ್ತವಾಗುವದಿಲ್ಲ. ಇದರಿಂದಲೇ ನಮ್ಮ ಬ್ರಾಹ್ಮಣರಲ್ಲಿ ಪವಿತ್ರತೆಯ ಅರ್ಥಾತ್ ಮಡಿ-ಮೈಲಿಗೆಗಳ ನಿಯಮಗಳು ವಿಶೇಷವಾಗಿರುತ್ತವೆ. ಯಾಕೆಂದರೆ- ಇವರ ಮುಖ್ಯ ಕೆಲಸವು ಈಶ್ವರೋಪಾಸನೆಯು; ಈಶ್ವರೋಪಾಸನೆಯ ಹೊರತು ಇವರಿಗೆ ಅನ್ಯಕೆಲಸಗಳ ಅವಶ್ಯಕತೆಯಿರುವದಿಲ್ಲ. ಆದರೆ ಈಗಿನ ಪರಿಸ್ಥಿತಿಯಲ್ಲಿ ಬ್ರಾಹ್ಮಣರ ಈ ಕರ್ತವ್ಯವನ್ನು ಕಾಣುವದೇ ಅಪರೂಪವಾಗಿರುತ್ತದೆ. ಸದಾ ಪವಿತ್ರತೆಯನ್ನು ಕಾಯ್ದುಕೊಂಡು ಅಧ್ಯಾತ್ಮ ಚಿಂತನದಿಂದ ರಾಷ್ಟ್ರಕ್ಕೆ ಕಲ್ಯಾಣವನ್ನೂ ಜ್ಞಾನವನ್ನೂ ಒದಗಿಸಿಕೊಡುವ ಬ್ರಾಹ್ಮಣರ ತೇಜಸ್ಸಿಗೂ ಸಿಕ್ಕ ಸಿಕ್ಕ ವ್ಯವಸಾಯಗಳಲ್ಲಿ ತೊಡಗಿ ಈಶ್ವರೋಪಾಸನೆಗೆ ವಿಮುಖರಾಗಿ, ಪವಿತ್ರತೆಯ ಗುರುತು ಸಹ ಇಲ್ಲದೆ ತೇಜೋಹೀನರಂತೆ ತೋರುವ ಈಗಿನ ಬ್ರಾಹ್ಮಣರಾದ ನಮ್ಮ ತೇಜಸ್ಸಿಗೂ ಯಾವ ಸಂಬಂಧವು? ಬ್ರಹ್ಮಕರ್ಮವೇ ಲುಪ್ತಪ್ರಾಯವಾದ ಬಳಿಕ ನಮ್ಮಲ್ಲಿ ಪವಿತ್ರತೆಯಾದರೂ ಹ್ಯಾಗೆ ನಿಲ್ಲಬೇಕು? ನಿಜವಾಗಿನೋಡಿದರೆ, ಈಗಿನ ನಮ್ಮ ಮಡಿ-ಮೈಲಿಗೆಗಳೆಲ್ಲ ಡಂಭಾಚಾರಕ್ಕೀಡಾಗಿರುತ್ತವೆ. ಅವುಗಳಲ್ಲಿ ನಿಜವಾದ ಸತ್ವವಿರುವದಿಲ್ಲ. ಆಚಾರ್ಯರೇ, ನಾನು ನಮ್ಮ ಜನರನ್ನು ನಿಂದಿಸುತ್ತೇನೆಂದು ತಿಳಿಯ ಬೇಡಿರಿ. ನಮ್ಮಲ್ಲಿ ಸತ್ವವಿದ್ದರೆ, ಬ್ರಾಹ್ಮಣ ಧರ್ಮವು ಕಠಿಣತರವಿದ್ದರೂ ಜನರಲ್ಲಿ ತಿಳುವಳಿಕೆಯಿದ್ದರೆ ಇಷ್ಟು ಅಧಿಕ ಪ್ರಸಂಗಕ್ಕೆ ಯಾರೂ ಹೋಗುತ್ತಿರಲಿಲ್ಲ. ಇರಲಿ; ಪ್ರಸ್ತುತ ವಿಷಯವನ್ನು ಅನುಸರಿಸೋಣ, ನಾನು ಈ ಮೊದಲು ಹೇಳಿದಂತೆ ಮಾನಸಿಕ ಉನ್ನತಿ ಹಾಗು ಶಾರೀರಿಕ ಸುಸ್ಥಿತಿಗಳಬಗ್ಗೆ ಮಡಿ-ಮೈಲಿಗೆಗಳಯೋಜನೆ

ಇರುತ್ತದೆಂಬದು ತಿಳಿಯದಿದ್ದರೆ ಮತ್ತೇನಾದರೂ ಶಂಕೆ-ಪ್ರತಿಶಂಕೆಗಳಿದ್ದರೆ ಕೇಳಿರಿ.

ಆಚಾರ್ಯ—ನೀವು ಹೇಳಿದ್ದು ನಿಜ; ಈಶ್ವರೋಪಾಸನೆಯಮೂಲಕ ಬ್ರಾಹ್ಮಣರಲ್ಲಿ ಇಷ್ಟು ಮಡಿಮೈಲಿಗೆಯ ಪ್ರಸ್ಥವು ಬೆಳೆದದ್ದನ್ನು ಒಪ್ಪುತ್ತೇನೆ. ಆದರೆ ಈಗ ಕಾಲಮಾನವೇ ಬದಲಾಯಿಸಿ ಹೋಗಿರುವದರಿಂದ ಆ ಒಣ ಮಡಿಮೈಲಿಗೆಯನ್ನು ಯಾಕೆ ಮಾಡುತ್ತ ಕೊಡ್ರಬೇಕು?

ರಾಮರಾಯ—ಆಚಾರ್ಯರೇ, ಹೀಗೆ ಕೇಳಿದರೆ ಇದಕ್ಕೆ ಏನು ಉತ್ತರ ಕೇಳಬೇಕು? ಯಾರಿಗೆ ಬ್ರಾಹ್ಮಣಧರ್ಮವು ಬೇಕಾಗಿದೆಯೋ, ಮತ್ತು ವರ್ಣವ್ಯವಸ್ಥೆಯು ಸರಿಯಾಗಿ ಉಳಿಯಲೆಂದು ಯಾರು ಇಚ್ಛಿಸುವರೋ ಅವರುಮಾತ್ರ ಧರ್ಮಶಾಸ್ತ್ರಾಜ್ಞೆಯನ್ನು ಸರಿಯಾಗಿ ಪಾಲಿಸಬೇಕು. ಮೂಲತಃ ಧರ್ಮದಲ್ಲಿ ಶ್ರದ್ಧೆಯೇ ಇರದಿದ್ದರೆ ಅಂಥವರಿಗೆ ಹೇಳುವದಾದರೂ ಏನು?

ಸುಧಾರಕ—(ನಡುವೇ ಬಾಯಿಹಾಕಿ) ಸರಿ! ಸರಿ! ರಾಯರೇ, ನೀವೂ ಅಂಥ ಶ್ರದ್ಧೆಯ ಮನೆಗೇ ಬಂದಿರಿ, ಇನ್ನುಮುಂದೆ ನಿಮ್ಮ ಪ್ರವಚನವು ಸಾಕು!

ರಾಮರಾಯ—ಸುಧಾರಕಸಾಹೇಬರೇ, ನಿಮ್ಮ ಮೌನವ್ರತವನ್ನು ಭಂಗಪಡಿಸುವದಕ್ಕೆಂದೇ ಈ ಅಂಥ ಶ್ರದ್ಧೆಯ ಮನೆಗೆ ಬಂದೆನು. ಮೊದಲು ಈ ಮನೆಯಲ್ಲಿ ವಿಶ್ರಮಿಸಿದಹೊರತು ನಿಮಗೆ ಧರ್ಮರಹಸ್ಯವೇ ತಿಳಿಯದು! ಋಷಿಗಳು ಮಾಡಿದ್ದೆಲ್ಲ ನಮ್ಮ ಕಲ್ಯಾಣಕ್ಕಾಗಿಯೇ, ಹೇಳಿದ್ದೆಲ್ಲ ನಮ್ಮ ಹಿತಕ್ಕಾಗಿಯೇ ಎಂದು ಮೊದಲು ಮನಸ್ಸಿನಲ್ಲಿ ದೃಢವಾಗಿ ನಂಬಿಗೆಯನಿಟ್ಟುಕೊಳ್ಳಿರಿ; ಆನಂತರಅದರ ವಿಚಾರಮಾಡಿರಿ.

ಸುಧಾರಕ—ರಾಯರೇ, ನೀವು ಹಿರಿಯರಿದ್ದು ಹೀಗೆ ಹೇಳುತ್ತೀರೆಂದಬಳಿಕ ಕ್ಷಣಹೊತ್ತು ನಿಮ್ಮಂತೆ ಇರುತ್ತೇನೆ. ಆದರೆ ನನ್ನ ಮನಸ್ಸಿನಲ್ಲಿ ಉದ್ಭವಿಸುವ ಶಂಕೆಗಳ ನಿವಾರಣೆಯು ಹ್ಯಾಗಾಗಬೇಕು?

ರಾಮರಾಯ—ಯಾವ ಶಂಕೆಗಳೆಂಬದನ್ನು ಹೇಳಿರಿ ನೋಡೋಣ;

ಸುಧಾರಕ—ಅನಂತ ಆಕ್ಷೇಪಣೆಗಳಿವೆ. ಅವುಗಳಲ್ಲಿ ಒಂದನೇಯದು, ಸಕೇಶಿಸ್ತ್ರೀಯರೊಡನೆ ಯಾಕೆ ಬಳಿಕೆಮಾಡಬಾರದೆಂಬದು; ಎರಡನೇಯದು, ಅಂತ್ಯಜರನ್ನು ಯಾಕೆ ನಿರಾಕರಿಸಬೇಕೆಂಬದು; ಮೂರನೇಯದು ಮನೆಯೊಳಗಿನ ದುಷ್ಟರೂಢಿಗಳು ಅಂದರೆ ಮಡಿಯನ್ನುಟ್ಟುಕೊಂಡೇ ಉಣ್ಣಬೇಕು. ಬ್ರಾಹ್ಮಣರಹೊರತು ಅನ್ಯರೊಡನೆ ಪಂಗ್ತಿಭೋಜನಮಾಡಬಾರದು, ನಾಯಿ ಹಂದಿಮೊದಲಾದವುಗಳು ಮುಟ್ಟಿದ ಅನ್ನವನ್ನು ಉಣ್ಣಬಾರದು. ಎಂಬಿವೇ ಮೊದಲಾದ ಅನಂತ ಸಂಗತಿಗಳು ಇ

ವನ್ನು ನೀವು ಸಮಂಜಸವಾಗಿ ತಿಳಿಸಿದರೆ ಮುಂದಿನ ಆಕ್ಷೇಪಣೆಗಳನ್ನು ಹೇಳುವೆನು.

ಶಾಮರಾಯ—ನೀನು ಯಾವ ಆಕ್ಷೇಪಣೆಯನ್ನು ತಕ್ಕೊಳ್ಳುತ್ತೀಯೆಂಬದು ನನಗೆ ಗೊತ್ತಿರುವದು. ನಿನ್ನ ಬಾಯಿಂದಲೇ ಬರಲೆಂದು ಕೇಳಿರುವೆನು. ಇವೆಲ್ಲಕ್ಕೆ ಕ್ರಮವಾಗಿ ಉತ್ತರವನ್ನು ಕೊಡುತ್ತೇನೆ. ಲಕ್ಷ್ಯಗೊಟ್ಟು ಕೇಳು ; ನಿನ್ನ ಒಂದನೆಯ ಆಕ್ಷೇಪಣೆಯು ಸಕೇಶಿಗಳೊಡನೆ ಯಾಕೆ ಬಳಿಕೆಮಾಡಬಾರದೆಂಬದಷ್ಟೇ; ಈ ಪ್ರಶ್ನೆಯನ್ನು ನೀನು ಒಳ್ಳೇ ಕನಿಕರಭಾವದಿಂದ ಮಾಡಿರುವೆಯಲ್ಲವೇ? ಯಾಕಂದರೆ ವಿಧವೆಯರ ವಿಷಯವಾಗಿ ನಿಮ್ಮ ಜನರ ಭೂತದಯಾಪರ ಬುದ್ಧಿಯು ಉಕ್ಕೇರುತ್ತಲಿದೆ. ಮೊದಲು ನಿಮ್ಮ ಈ ಬುದ್ಧಿಯೇ ದುಃಖೋತ್ಪಾದಕವಿರುತ್ತದೆ. ಇದರಿಂದ ಸಮಾಜವು ಎಷ್ಟು ನಿಕೃಷ್ಟಸ್ಥಿತಿಗೆ ಬರುವದೆಂಬದನ್ನು ನೀವು ಲಕ್ಷ್ಯದಲ್ಲಿ ತರುವದಿಲ್ಲ; ಇರಲಿ. ವಿಧವೆಯರು ನೀತಿಭ್ರಷ್ಟರಾಗಬಾರದೆಂದು ಧರ್ಮಶಾಸ್ತ್ರವು ಅವರನ್ನು ವಿದ್ರೂಪಗೊಳಿಸುತ್ತದೆ. ಅವರು ವೈರಾಗ್ಯಶೀಲರಾಗಿ ದೇಹದ ಹಾಗು ಮನಸ್ಸಿನ ಪವಿತ್ರತೆಯನ್ನು ಕಾಯ್ದುಕೊಳ್ಳಬೇಕೆಂಬದೇ ಧರ್ಮಶಾಸ್ತ್ರದ ಇಚ್ಛೆಯು; ಇಂದಿನ ವರೆಗೆ ಕೋಟ್ಯಂತರ ವಿಧವೆಯರು ಧರ್ಮಶಾಸ್ತ್ರಾಜ್ಞೆಯಂತೆ ವರ್ತಿಸಿ ತಮ್ಮ ಪರಿಶುದ್ಧಕೀರ್ತಿಯನ್ನು ಕಾಯ್ದುಕೊಂಡದ್ದರಿಂದ ಶುದ್ಧರಕ್ತಾಂಶದಿಂದಾದರೂ ನಾವು ಬ್ರಾಹ್ಮಣರೆನಿಸಿಕೊಳ್ಳಲಿಕ್ಕೆ ಅರ್ಹರಾಗಿರುತ್ತೇವೆ. ಒಂದುವೇಳೆ ಅವರು ವಿಷಯಲೋಲುಪರಾಗಿ ವೈರಾಗ್ಯಭ್ರಷ್ಟರಾಗಿದ್ದರೆ, ನಾವು ನಮ್ಮ ಪೂರ್ವಜರ ವಂಶಾವಳಿಯನ್ನು ಹೇಳುವದೇ ಕಠಿಣವಾಗುತ್ತಿತ್ತು; ಸ್ತ್ರೀಯು ಪ್ರಜೋತ್ಪಾದನಕ್ಕೆ ಕ್ಷೇತ್ರಸ್ವರೂಪಳಾದ್ದರಿಂದ ಆಕೆಯ ಪವಿತ್ರತೆಯನ್ನ ಕಾಯುವದಕ್ಕಾಗಿ ಧರ್ಮಶಾಸ್ತ್ರವು ಇಷ್ಟು ದಕ್ಷತೆಯನ್ನು ವಹಿಸಿರುತ್ತದೆ. ವಿಧವೆಯಾದ ಸ್ತ್ರೀಯು ಶೃಂಗಾರವನ್ನು ಹೆಚ್ಚಿಸುವ ಸಾಧನಗಳನ್ನು ವರ್ಜ ಮಾಡಬೇಕಾಗಿರುವದರಿಂದ ಸಕೇಶಿಯಾದವಳು ಧರ್ಮಶಾಸ್ತ್ರಾಜ್ಞೆಗೆ ತಪ್ಪಿನಡೆದಂತಾಗುತ್ತದೆ. ಈ ಅಪರಾಧಕ್ಕಾಗಿ ಅವಳೊಡನೆ ಬಳಿಕೆಯನ್ನು ಬಿಡಬೇಕಾಗುವದು. ಬರಿಯ ಧಾರ್ಮಿಕಬಾಬಿನಲ್ಲಿಯೇ ಯಾಕೆ ಈಗಿನ ರಾಜಕೀಯ ಬಾಬಿನಲ್ಲಿಯೂ ಈ ತತ್ವವು ಭರದಿಂದ ಬೆಳೆಯ ಹತ್ತಿದ್ದು ನಿನಗೆ ಗೊತ್ತಿಲ್ಲವೇನು? ಅದೇನಂದರೆ "ನಾನ್‌ಕೋ ಅಪರೇಶನ್ನವು!" ಅಧರ್ಮವಂತರ ಕೂಡ ಸಹಕಾರದಿಂದ ನಡೆಯಬಾರದೆಂದು ಮಹಾತ್ಮಾಗಾಂಧಿಯು ಉಪದೇಶಿಸುವದಿಲ್ಲವೇ? ಅಧರ್ಮದಿಂದ ನಡೆಯುವವರನ್ನು ಹಾದಿಗೆ ತರಬೇಕಾದರೆ ಅಸಹಕಾರವೇ ಮಹಾಮಂತ್ರವು; ಇದೇ ತತ್ವವನ್ನು ಸ್ವಲ್ಪ ಶಿಥಿಲವಾಗಿ ವಿಧವೆಯರಾದ ಸಕೇಶಿ ಸ್ತ್ರೀಯರ ವಿಷಯವಾಗಿಯೂ ಧರ್ಮಶಾಸ್ತ್ರಕಾರರು ಉಪಯೋಗಿಸಿರುತ್ತಾರೆ.

ಹ್ಯಾಗಂದರೆ—"ವಿಧವೆಯುಧರ್ಮಶಾಸ್ತ್ರಾಜ್ಞೆಯಂತೆ ಕೂದಲನ್ನು ತೆಗೆಯಿಸಿ ವೈರಾ
ಗ್ಯಶೀಲಳಾಗದಿದ್ದರೆ ಅವಳು ಅಪವಿತ್ರಳೆಂದು ತಿಳಿದು ಅವಳನ್ನು ಮುಟ್ಟಿಸಿಕೊಳ್ಳ
ಬಾರದು. ಅವಳು ಮಾಡಿದ ಅಡಿಗೆಯನ್ನು ಉಣ್ಣಬಾರದು. ಬಹಳ ಹೇಳುವ
ದೇನು? ಅವಳೊಡನೆ ಯಾವತರದ ಬಳಿಕೆಯನ್ನೂ ಮಾಡಬಾರದು.'' ಈ ಬಗೆಯ
ನಿರ್ಬಂಧವನ್ನಿಟ್ಟಿದ್ದರಿಂದ ವಿಧವೆಯರು ವೈರಾಗ್ಯ ಲಕ್ಷಣವನ್ನು ತೋರಿಸುವ ಕೆಂಪು
ಬಟ್ಟೆಯನ್ನುಟ್ಟುಕೊಳ್ಳಲಿಕ್ಕೆ ಒಪ್ಪುವರು. ಇಷ್ಟೇ ಅಲ್ಲ ಕೇಶಭಾರವನ್ನಿಳಿಸಿ ಕಠಿಣ
ತರವಾದ ನಿಯಮದಿಂದ ತಮ್ಮ ಪಾತಿವ್ರತ್ಯವನ್ನು ಕಾಯ್ದುಕೊಳ್ಳುವರು. ಈ
ಗಿನ ಕಾಲದಲ್ಲಿ ವಿಷಯತೃಷ್ಣೆಯು ಹೆಚ್ಚಾದ್ದರಿಂದ ಜನರು ಮೋಹಕ್ಕೆ ಬಿದ್ದು ವಿಧ
ವೆಯರ ಪರಾಮರಿಕೆಯನ್ನು ಬಹಳವಾಗಿ ತಕ್ಕೊಳ್ಳುತ್ತ ಅವರ ವಿಷಯವಾಸನೆ
ಯನ್ನು ಹೆಚ್ಚಿಸುವರು. ಇದರಿಂದ ನಿವೃತ್ತಿಪರವಾದ ಬ್ರಾಹ್ಮಣ ಸಮಾಜವು ಪ್ರ
ವೃತ್ತಿಪರವಾಗಿ ವಿಷಯಲಂಪಟತ್ವದಿಂದ ಮಿಕ್ಕ ವರ್ಣಗಳ ಸಮಾನಸ್ಕಂಧತೆಯ
ನ್ನು ಪಡೆದಿರುವದು. ಇದು ಬ್ರಾಹ್ಮಣರ ಅವನತಿಯಲ್ಲದೆ ಮತ್ತೇನು? ಬ್ರಾಹ್ಮಣ
ರು ವೈಭವಶೂನ್ಯರಾದದ್ದು ದುಃಖದ ಸಂಗತಿಯಲ್ಲ; ಆದರೆ ಬ್ರಹ್ಮಕರ್ಮವಿಹೀ
ನರಾದದ್ದು ಮಾತ್ರ ಅತ್ಯಂತ ದುಃಖದ ಸಂಗತಿಯು! ಇದರಿಂದಲೇ ನಮ್ಮ ಯೋ
ಗ್ಯತೆಯು ಇಷ್ಟು ಕೆಳಗಿಳಿದಿರುತ್ತದೆ. ಅಂತೇ ಸಕೇಶಿಯರನ್ನು ಯಾಕೆ ಮುಟ್ಟಿ
ಸಿಕೊಳ್ಳಬಾರದು; ರಜಸ್ವಲೆಯಾದ ಸ್ತ್ರೀಯಿಂದ ಯಾಕೆ ಉಣ್ಣಬಾರದು, ಎಂದು
ಪ್ರಶ್ನೆಮಾಡುವ ಬುದ್ಧಿವಂತರು ನಮ್ಮಲ್ಲಿ ಹುಟ್ಟತೊಡಗಿದ್ದಾರೆ. ಅಪ್ಪಾ, ಸುಧಾ
ರಕಾ, ನಿನ್ನಸ್ಥಿತಿಯನ್ನು ನೀನೇ ವಿಚಾರ ಮಾಡಿ ನೋಡು; ನೀನು ಜಾತಿಯಿಂದ ಬ್ರಾ
ಹ್ಮಣನಿರುವಿಯಲ್ಲವೇ? ನಿನ್ನ ತಲೆಯಮೇಲಿನ ಕ್ರಾಪು, ಕಾಲೊಳಗಿನ ಬೂಟು, ನಿ
ರ್ಗಂಧ ಹಣೆ ಇವುಗಳನ್ನು ನೋಡಿದರೆ ಯಾರು ನಿನಗೆ ಬ್ರಾಹ್ಮಣನೆಂದಾರು? ಬ್ರ
ಹ್ಮಕರ್ಮವಿಲ್ಲದೆ-ಬ್ರಾಹ್ಮಣನ ಆಚರಣೆಯಿಲ್ಲದೆ, ಬ್ರಾಹ್ಮಣನ ಲಕ್ಷಣಗಳಿಲ್ಲದೆ ನಿ
ನಗೆ ಬ್ರಾಹ್ಮಣನೆನ್ನುವದು ಶುದ್ಧ ತಪ್ಪೇ ಸರಿ! ಈಗ ನಿನ್ನ ಮನಸ್ಸು ಹ್ಯಾಗಿರುವ
ವದು? ತಮೋರೂಪಿಯಾಗಿರುವದಲ್ಲವೇ? ಮನಸ್ಸು ತಮೋಮಯ; ಮಾಡುವ ಕೆಲ
ಸ ತಮೋಮಯ; ಆಡುವ ಮಾತುಗಳು ತಮೋಮಯವು; ಅಂದ ಬಳಿಕ ಈಗ
ನೀವು ಯಾರೊಡನೆ ಪಂಕ್ತಿಲಾಭವನ್ನು ಹೊಂದಬೇಕೆಂದು ಹಾತೊರೆಯುವಿರೋ
ಗುಣಸಾಮ್ಯದಿಂದ ಅವರೇ ನೀವಿರುತ್ತೀರೆಂದು ಯಾಕೆ ಅನ್ನಬಾರದು? ಅಂತ್ಯಜರನ್ನು
ಕೂಡಿಕೊಳ್ಳಬೇಕೆಂಬ ಬುದ್ಧಿಯು ನಿಮ್ಮಲ್ಲಿ ಹುಟ್ಟಬೇಕಾದರೆ ಅಂತ್ಯಜರೂ ನೀವೂ
ಸಹಧರ್ಮಿಗಳಾಗಬೇಕಾಗುತ್ತದಷ್ಟೇ; ಸುಧಾರಕಾ, ಇದರ ವಿಚಾರವನ್ನು ನೀನೇ

ಮಾಡು; ವಿಧವೆಯರಾದ ಸಕೇಶಿಗಳನ್ನು ಮುಟ್ಟಿಸಿಕೊಳ್ಳಬೇಕೋ ಮತ್ತು ಅಂತ್ಯಜರನ್ನು ಪಂಗ್ತಿಯಲ್ಲಿ ಕರೆದುಕೊಳ್ಳಬೇಕೋ ಕರಕೊಳ್ಳಬಾರದೋ ಎಂಬದನ್ನು ನೀನೇ ಹೇಳು.

ಸುಧಾರಕ—(ವಿಚಾರ ಮಾಡಿ) ರಾಯರೇ; ನಿಮ್ಮ ಮಾತು ಒಂದು ರೀತಿಯಿಂದ ಯೋಗ್ಯವೆಂದು ತೋರುತ್ತದೆ. ಯಾಕಂದರೆ ''ಸಮಾನಶೀಲವ್ಯಸನೇಷು ಸಖ್ಯಂ'' ಎಂಬ ಸುಭಾಷಿತಕಾರನಮತದಂತೆ ಸಮಾನಗುಣಧರ್ಮಗಳು ಉಂಟಾದ ಹೊರತು ಒಬ್ಬರ ಮೈತ್ರಿಯನ್ನು ಇನ್ನೊಬ್ಬರು ಇಚ್ಛಿಸುವದಿಲ್ಲ. ಒಬ್ಬ ಬ್ರಹ್ಮನಿಷ್ಠನಿಗೂ ಒಬ್ಬ ಕಟುಕನಿಗೂ ಮೈತ್ರಿಯು ಎಂದಿಗೂ ಕೂಡದು. ಅದರಂತೆ ಒಬ್ಬ ಸಾತ್ವಿಕನಿಗೂ ಇನ್ನೊಬ್ಬ ದುರ್ಜನಶಿರೋಮಣಿಗೂ ಸಖ್ಯವು ಎಂದಿಗೂ ಬೆಳೆಯಲಾರದು. ಇದು ತ್ರಿಕಾಲಾಬಾಧಿತಸಿದ್ಧಾಂತವು. ಹೀಗಿದ್ದು ನಮ್ಮ ಮನಸ್ಸು ನಿಃಶಂಕೆಯಿಂದ ಅತಿಶೂದ್ರರನ್ನು ಮುಟ್ಟಿ ಮುಟ್ಟಿ ಬರುವದರಿಂದ ಮತ್ತು ಅವರ ಮೈತ್ರಿಯನ್ನಿಚ್ಛಿಸುವದರಿಂದ ಅವರ ಸ್ವರೂಪವೇ ನಮಗೆ ಬಂದಿರುತ್ತದೇನೆಂಬ ಅನುಮಾನವು ನನ್ನಲ್ಲಿ ಹುಟ್ಟಿಹತ್ತಿದೆ.

ಶಾಮರಾಯ—ತಮ್ಮಾ, ಇನ್ನೂ ಚನ್ನಾಗಿ ಯೋಜನೆಮಾಡು; ಮತ್ತೇನಾದರೂ ಅನುಮಾನಗಳಿದ್ದರೆ ಹೇಳು. ಮುಖ್ಯವಾಗಿ ನೀನು ಲಕ್ಷ್ಯದಲ್ಲಿಡತಕ್ಕದ್ದಿಷ್ಟೇ; ಯಾವ ಜನರು ವ್ಯವಹಾರಸಂಗತಿಗಳನ್ನು ಧರ್ಮಕ್ಕೆ ಜೋಡಿಸಿದರೋ ಆಜನರಲ್ಲಿ ಮಡಿಮೈಲಿಗೆಯ ಪರಿಪಾಠವು ಬಿದ್ದಿತು ಮತ್ತು ಯಾರು ಈಶ್ವರ ಹಾಗು ಧರ್ಮ ಇವುಗಳೊಡನೆ ಯಾವ ವ್ಯಾವಹಾರಿಕ ಸಂಬಂಧವನ್ನಿಟ್ಟುಕೊಳ್ಳಲಿಲ್ಲಿವೋ ಅವರಲ್ಲಿ ಈ ಮಡಿಮೈಲಿಗೆಯ—ಸ್ಪರ್ಶಾಸ್ಪರ್ಶತೆಯ ಸಂಬಂಧವು ತಪ್ಪಿಹೋಯಿತು. ಇದರಮೇಲಿಂದ ವಿಚಾರಮಾಡಿದರೆ ಮನುಷ್ಯಜಾತಿಯ ಉನ್ನತಿಯಸಲುವಾಗಿ ಆದ್ಯ ಶೋಧಕರು ಮಡಿಮೈಲಿಗೆಗಳ ವ್ಯವಸ್ಥೆಯನ್ನಿಟ್ಟಿರುತ್ತಾರೆಂದು ಕಂಡುಬರುತ್ತದೆ. ಈ ವಿಷಯವಾಗಿ ನಿನಗೆ ಕೆಲವು ಸಂಗತಿಗಳನ್ನು ಹೇಳುತ್ತೇನೆ—

ಧರ್ಮವು ಆತ್ಮೋನ್ನತಿಗೆ ಅವಶ್ಯವಿರುತ್ತದೆ. ಮತ್ತು ಅದರ ಜೊತೆಗೆ ಈಶ್ವರೋಪಾಸನೆಯು ಶರೀರ ಹಾಗು ಮನಸ್ಸಿನ ಉನ್ನತಿಗೆ ಸಾಧನೀಭೂತವಾಗಿರುತ್ತದೆ. ಉಪಾಸನೆಯು ಸರಿಯಾಗಿ ಸಾಗಲಿಕ್ಕೆ ಶರೀರವು ನಿರೋಗಿಯೂ, ಸಶಕ್ತವೂ, ಪುಷ್ಟವೂ ಮತ್ತು ಪವಿತ್ರವೂ ಇರಬೇಕಾಗುತ್ತದೆ. ಈ ಸರ್ವ ಮಾನ್ಯ ನಿಯಮವನ್ನು ಅಲ್ಲಗಳೆಯಲಿಕ್ಕೆ ಯಾವ ಧರ್ಮದವರಿಗೂ—ಪಂಥದವರಿಗೂ ಬರಲಾರದು. ಹೀಗಿದ್ದರೂ ಒಂದುವೇಳೆ ಪವಿತ್ರತೆಗೂ—ನಾಯಿನರಿ ಮೊದಲಾದವುಗಳ

ಗೂ ಸಂಬಂಧವೇನು? ಅವುಗಳ ಸ್ಪರ್ಶದಿಂದ ಪವಿತ್ರತೆಯು ಯಾಕೆ ನಷ್ಟವಾಗ ಬೇಕು? ಅದರಂತೆ ಉಪಾಸನೆಯ ಕಾಲವನ್ನು ಹೊರತುಪಡಿಸಿ ಉಳಿದವೇಳೆಯಲ್ಲಿ ಮಡಿಮೈಲಿಗೆಯ ನಿರ್ಬಂಧವನ್ನು ಯಾಕೆ ಪಾಲಿಸಬೇಕು? ಇವೇ ಮೊದಲಾದ ಪಶ್ನೆಗಳು ಚಿಕಿತ್ಸಕರಮನಸ್ಸಿನಲ್ಲಿ ಸಹಜವಾಗಿ ಉದ್ಭವಿಸಬಹುದು; ಈ ಪ್ರಶ್ನಮಾಲಿಕೆಗೆ ಕಾರ್ಯ-ಕಾರಣಯುಕ್ತ ಸಮಾಧಾನವು ಸಿಗದ್ದರಿಂದ ಎಷ್ಟೋ ಜನರು ಮೆಲ್ಲಗೆ ಮಡಿಮೈಲಿಗೆಯ ಸ್ಪರ್ಶಾಸ್ಪರ್ಶತೆಯ ವಿಷಯದಲ್ಲಿ ಅನಾದರಬುದ್ಧಿಯನ್ನು ತಾಳುವರು, ಇಲ್ಲವೇ ಅಂಧಶ್ರದ್ಧೆಯಿಂದ ಅದನ್ನು ಪಾಲಿಸುವರು. ಆದರೆ ಅದರ ಮರ್ಮವು ತಿಳಿಯದ್ದರಿಂದ ನಿಜವಾದ ಉನ್ನತಿಯು ಆಗತಕ್ಕಷ್ಟು ಅವರಿಂದಾಗುವದಿಲ್ಲ. ಈ ಅತಂತ್ರಸ್ಥಿತಿಯಿಂದ ಎಷ್ಟೋಸಾರೆ ಅವರ ಅವನತಿಯಾದರೂ ಆಗುತ್ತದೆ. ಆದ್ದರಿಂದ ಇದರಲ್ಲಿಯ ಮರ್ಮವೇನಿರಬಹುದೆಂಬದನ್ನೂ ಸಂಬಂಧವೇನೆಂಬದನ್ನು ನಾವು ತಿಳಿಯಲಿಕ್ಕೇ ಬೇಕು. ಈ ವಿಷಯವನ್ನು ನಾಳೆಗೆ ಚರ್ಚಿಸೋಣವಂತೆ? ಬಹಳಹೊತ್ತಾಯಿತು. ಇನ್ನು ನಡೆಯಿರಿ.

ಸುಧಾರಕ—ಆಚಾರ್ಯ—ನಮಸ್ಕಾರ ರಾಯರೇ, ಅಪ್ಪಣೆಯ ಪ್ರಕಾರ ನಾಳೆಗೆ ಬರುವೆವು. ಮುಂದಿನ ಮಹತ್ವದ ವಿಷಯವನ್ನು ಕೇಳುವ ಇಚ್ಛೆಯು ಬಹಳಿರುತ್ತದೆ.

## ಲೇಖಾಂಕ ೩.

ಶಾಮರಾಯ—ಆಚಾರ್ಯರೇ, ಹಾಗು ಸುಧಾರಕಬಂಧುಗಳೇ, ನಿನ್ನೆಯ ದಿವಸ ಅಪೂರ್ಣವಾದ ವಿಷಯವನ್ನು ಈದಿವಸ ಹೇಳುವೆನು ಕೇಳಿರಿ. ನಮ್ಮಲ್ಲಿ ಪವಿತ್ರಾಪವಿತ್ರಗಳ ಪರಿಣಾಮವಾಗುವಂಥ ಎರಡುಸ್ಥಾನಗಳಿರುತ್ತವೆ. ಒಂದನೆಯದು ಮನಸ್ಸು; ಎರಡನೆಯದು ಶರೀರ. ಇವುಗಳಲ್ಲಿ ಶರೀರದಮೇಲೆ ಹಿತ ಅಥವಾ ಅಹಿತಗಳನ್ನು ಮಾಡುವಂಥ ಪದಾರ್ಥಗಳ ವಿಷಯವಾಗಿ ಮಡಿ-ಮೈಲಿಗೆಯನಿಯಮವನ್ನು ಪಾಲಿಸುವದು ವ್ಯವಹಾರಿಕ ಅಥವಾ ಸ್ಥೂಲವಿಚಾರವೆನಿಸುವದು. ಮತ್ತು ಮನಸ್ಸಿನಮೇಲೆ ಹಿತ ಅಥವಾ ಅಹಿತವನ್ನುಂಟುಮಾಡುವಂಥ ಪದಾರ್ಥಗಳ ವಿಷಯವಾಗಿ ವಿಚಾರಮಾಡುವದು ಆತ್ಮಿಕ ಇಲ್ಲವೆ ಪಾರಮಾರ್ಥಿಕವೆನಿಸುವದು, ಈ ಎರಡುಬಗೆಯ ವಿಚಾರಗಳಲ್ಲಿ ಮೊದಲು ಸ್ಥೂಲವಿಚಾರವನ್ನು ಅಂದರೆ ವ್ಯಾವಹಾರಿಕ ವಿಚಾರವನ್ನು ಹೇಳುವೆನು; ಯಾಕಂದರೆ ಈ ವಿಚಾರದಸಹಾಯದಿಂದ ಮನಸ್ಸಿಗೆ ಸಂಬಂಧಿಸಿದ ವಿಷಯವು ಸುಲಭವಾಗಿ ತಿಳಿಯುವದು. ಶಾರೀರಿಕ ಮಡಿಮೈಲಿಗೆಯ ವಿಚಾರವನ್ನು ಪ್ರಾರಂಭಿಸುವಮೊದಲು ನಮ್ಮ ಶರೀರದಲ್ಲಿ ಹುಟ್ಟುವ ಆದರೆ ಶರೀರದ ಮೇಲೆ ಅಹಿತಪರಿಣಾಮವನ್ನುಂಟುಮಾಡುವಂಥ ಮೈಲಿಗೆಯ ಪದಾರ್ಥವನ್ನು ಕುರಿತು ವಿಚಾರಿಸೋಣ.

ದೇಹದೊಳಗಿಂದ ಅಂತರ್ಬಾಹ್ಯ ತ್ವಚೆಯ ಮೇಲೆ ಬರುವ ಮಲವು ಆ ಸ್ಥಳದಲ್ಲಿ ಬಹಳ ಹೊತ್ತಿನ ವರೆಗೆ ಉಳಿದರೆ ಶರೀರಕ್ಕೆ ಅಪಾಯ ಮಾಡುವದೆಂಬದು ಅನುಭವ ಸಿದ್ಧವಾದ ಸಂಗತಿಯಷ್ಟೇ? ಆ ಮಲವು ಶರೀರಕ್ಕೆ ಬೇಡಾದ್ದರಿಂದಲೇ ಅದನ್ನು ಅಂತಃಪ್ರಕೃತಿಯು ಹೊರದೂಡಿರುತ್ತದೆ. ಆದ್ದರಿಂದ ಆ ಮಲವನ್ನು ಶರೀರದಿಂದ ಹೊರಗೆ ಹಾಕುವದು ಮೊದಲನೆಯ ಕೆಲಸವು. ಬಹಿರ್ದಿಶೆಗೆ ಹೋಗಿ ಬರುವದು, ಮುಖಮಾರ್ಜನ ಮಾಡಿಕೊಳ್ಳುವದು, ಹಲ್ಲು ನಾಲಿಗೆಗಳನ್ನು ಸ್ವಚ್ಛವಾಗಿ ತಿಕ್ಕಿಕೊಳ್ಳುವದು ಇವೆಲ್ಲ ಕ್ರಿಯೆಗಳು ಅಂತರ್ಯ ತ್ವಚೆಯ ಸ್ವಚ್ಛತೆಗೆ ಸಂಬಂಧಿಸುತ್ತವೆ. ಕಣ್ಣುಗಳನ್ನು ಚನ್ನಾಗಿ ತೊಳೆದುಕೊಂಡು ಸರ್ವಾಂಗದಲ್ಲಿಯೂ ಬೆವರಿನಿಂದುಂಟಾದ ವಿಷಯುಕ್ತ ಮಲವನ್ನು ಸ್ನಾನದಿಂದ ಹೋಗಲಾಡಿಸಿ ಮೈಯನ್ನು ಜಳಜಳ ಇಟ್ಟುಕೊಳ್ಳಬೇಕು; ಇದರಿಂದ ಬಾಹ್ಯತ್ವಚೆಯು ಸಂಪೂರ್ಣವಾಗಿ ನಿರ್ಮಲವಾಗುವದು. ಈ ಪ್ರಕಾರ ತ್ವಚೆಯನ್ನು ಶುಚಿಗೊಳಿಸಿದ ಮೇಲೆ ಜಳಜಳ ಒಗೆದ ಬಟ್ಟೆಗಳನ್ನು ಪರಿಧಾನ ಮಾಡಬೇಕು. ಇಷ್ಟಾದ ಬಳಿಕ

ಯಾವನು ತನ್ನ ಶರೀರವನ್ನು ನಿರ್ಮಲವಾಗಿ ಮಾಡಿಕೊಂಡಿಲ್ಲವೋ ಅಂಥವನ ಸಂಸರ್ಗದಿಂದ ಅಥವಾ ಅವನ ಸ್ಪರ್ಶದಿಂದ ಅವನ ಹೊಲಸು ತಮಗೆ ಹತ್ತದಂತೆ ಎಚ್ಚರಪಡುವದು ಚಾಣಾಕ್ಷ ಹಾಗು ದಕ್ಷ ಮನುಷ್ಯನ ಕರ್ತವ್ಯವಿರುತ್ತದೆ.

ಈ ಮೇರೆಗೆ ತಾನು ಶುಚಿಯಾದ ನಂತರ ಅನ್ಯರ ಸ್ಪರ್ಶವನ್ನು ಮಾಡದಿರುವದಕ್ಕೆ ಇನ್ನೊಂದು ದೊಡ್ಡ ಕಾರಣವಿರುತ್ತದೆ. ಅದು ಏನಂದರೆ—ಆಧುನಿಕ ಶೋಧದಿಂದ ತಿಳಿದು ಬಂದ ಕ್ರಿಮಿರಾಶಿಯು; ಇವುಗಳಿಗೆ ವ್ಯಾಸಿಲಸ, ವ್ಯಾಕ್‌ಟ್ರಿಯಾ, ಎಂಬ ಹೆಸರುಗಳಿರುತ್ತವೆ.

ರೋಗವಿಕಾರವನ್ನುಂಟುಮಾಡುವ ಈ ಕ್ರಿಮಿಗಳು ತೀರ ಸ್ವಲ್ಪ ಕಶ್ಮಲದಲ್ಲಿ ಕೂಡಾ ಹುಟ್ಟುತ್ತಿದ್ದು, ಅಸ್ವಚ್ಛತೆಯ ಅರಿವೆಗಳಿಗೆ ಅಂಟಿಕೊಂಡಿರುತ್ತವೆ. ಅವುಗಳ ಬೆಳವಣಿಗೆಯಾದರೂ ಬಹು ತೀವ್ರದಿಂದಾಗುತ್ತದೆ. ಆದ್ದರಿಂದ ನಿರ್ಮಲನಾದ ಮನುಷ್ಯನು ಮಾಲಿನ್ಯವುಳ್ಳ ಮನುಷ್ಯನನ್ನು ಮುಟ್ಟಿದರೆ ಇಲ್ಲವೆ ಅಶುದ್ಧ ಪದಾರ್ಥಗಳನ್ನು ಮುಟ್ಟಿದರೆ ತಾತ್ಕಾಲದಲ್ಲಿ ಸ್ನಾನಮಾಡಿ ಬಟ್ಟೆಗಳನ್ನು ಒಗೆದು ಪುನಃ ಪವಿತ್ರ ಸ್ಥಿತಿಯನ್ನು ತಂದುಕೊಳ್ಳುವದೇ ಸುರಕ್ಷಿತ ಮಾರ್ಗವಿರುತ್ತದೆ! ಅಂತೇ ಧರ್ಮಶಾಸ್ತ್ರಕಾರರು ಸ್ನಾನಮಾಡಿದ ಮೇಲೆ ಅಶುಚಿಯಾದ ಯಾವ ಪದಾರ್ಥಗಳನ್ನೂ ಸ್ಪರ್ಶಮಾಡಬಾರದೆಂದು ನಿರ್ಬಂಧ ಮಾಡಿರುತ್ತಾರೆ. ಯಾಕೆಂದರೆ ನಿಯಮಪಾಲನವು ಅತ್ಯಂತ ಕಠಿಣವಿರುತ್ತದೆ. ಸ್ವಲ್ಪ ಅನುಕೂಲವು ಸಿಕ್ಕರೆ ಅದನ್ನು ಅಷ್ಟು ದಕ್ಷತೆಯಿಂದ ಪಾಲಿಸಲಿಕ್ಕಾಗುವದಿಲ್ಲ. ಆದ್ದರಿಂದ ಆ ನಿಯಮವು ಪೂರ್ಣ ಭದ್ರವಾಗಿದ್ದರೇ ಅದರ ಮಹತ್ವವು. ಇಲ್ಲದಿದ್ದರೆ ಅದಕ್ಕೆ ಏನೂ ಮಹತ್ವವು ಬರಲಾರದು. ಉದಾಹರಣಾರ್ಥವಾಗಿ ಸ್ನಾನ ಮಾಡಿದ ಮನುಷ್ಯನನ್ನೇ ತಕ್ಕೊಳ್ಳುವಾ; ಆತನು ಅಶುಚಿ ಪದಾರ್ಥಗಳನ್ನು ಇಲ್ಲವೆ ಅಶುಚಿ ಪದಾರ್ಥಗಳಿಗೆ ತಗಲಿದ ಬಟ್ಟೆ ಮೊದಲಾದವುಗಳನ್ನು, ಅವುಗಳಲ್ಲಿಯ ಮಲವು ತಗಲದಂತೆ ಸ್ಪರ್ಶಮಾಡಬಹುದೆಂದು ಧರ್ಮಶಾಸ್ತ್ರವು ಸಮ್ಮತಿಯನ್ನು ಕೊಟ್ಟಿದ್ದರೆ, ಸಂಪೂರ್ಣ ನಿಯಮವೇ ಮೂಲಿಗೆ ಬಿದ್ದುಹೋಗುತ್ತಿತ್ತು. ಸ್ನಾನ ಮಾಡಿದವನು ಅಶುಚಿ ಜನರ ಸ್ಪರ್ಶವಷ್ಟೇ ಯಾಕೆ ಅವರ ಮುಖದರ್ಶನವನ್ನು ಕೂಡಾ ತಕ್ಕೊಳ್ಳಬಾರದೆಂದು ನಿರ್ಬಂಧವಿದ್ದದರಿಂದ ಅದು ಇಲ್ಲಿಯ ವರೆಗೆ ಕುಂಟುತ್ತ ನಡೆದು ಬಂದಿದೆ. ಇಲ್ಲದಿದ್ದರೆ ಅದು ಇಷ್ಟೊತ್ತಿಗೆ ಹೇಳಹೆಸರಿಲ್ಲದೆ ಹೋಗುತ್ತಿತ್ತು. ಇರಲಿ.

ಈ ರೋಗ ಬೀಜರೂಪೀ ಸೂಕ್ಷ್ಮ ಜಂತುಗಳ ವಿಷಯವಾಗಿ ಯಾವಾಗ

ಲೂ ಎಚ್ಚರಪಡತಕ್ಕ ಸಂಗತಿಯೆಂದರೆ ನಾವು ಯಾರ ಹಾಗು ಯಾವ ವಸ್ತ್ರಗಳನ್ನೂ ಚನ್ನಾಗಿ ಒಗೆದ ಹೊರತು ನಮ್ಮ ಮೈಮೇಲೆ ಧರಿಸಬಾರದು. ಅಂದರೆ ದುಷ್ಟ ಪದಾರ್ಥದ ಸಂಸರ್ಗವಾಗುವದಿಲ್ಲ. ಜಾತಿಜಾತಿಯೊಳಗಿನ ಮಾತು ಒತ್ತಟ್ಟಿಗಿರಲಿ; ತಮ್ಮ ಕುಟುಂಬದೊಳಗಿನ ಜನರ ವಸ್ತ್ರಗಳನ್ನು ಕೂಡಾ ಉಪಯೋಗಿಸುವದು (ಧರಿಸುವದು) ಹಿತಕರವಾಗಿರುವದಿಲ್ಲ. ಗಜಕರ್ಣ ಮೊದಲಾದ ಚರ್ಮರೋಗಗಳು, ಈ ನಿಯಮವನ್ನು ಪಾಲಿಸದೆ ಇರುವದರಿಂದ ಪ್ರಾಪ್ತವಾಗುತ್ತವೆ. ಇಷ್ಟೇ ಅಲ್ಲ; ಇದರಿಂದ ದೊಡ್ಡ ದೊಡ್ಡ ರೋಗಗಳು ಪ್ರಸಾರವಾಗುವದನ್ನಾದರೂ ಬಹು ಜನರು ಬಲ್ಲರು.

ಒಬ್ಬನು ಸ್ನಾನ ಮಾಡಿ ಮೈ ಒರೆಯಿಸಿಕೊಂಡ ವಸ್ತ್ರವನ್ನೇ ಇನ್ನೊಬ್ಬನು ಸ್ನಾನಮಾಡಿ ಮೈ ಒರೆಸಿಕೊಳ್ಳಲಿಕ್ಕೆ ಮಡಿ ವಸ್ತ್ರವೆಂದು ಉಪಯೋಗಿಸಿಕೊಳ್ಳುತ್ತಾನೆ. ಮೊದಲು ಮೈಯೊರಸಿಕೊಂಡವನ ಮೈಯೊಳಗಿನ ಬೆವರು ಮೊದಲಾದ ದುಷ್ಟ ರಸಿಗೆಯು ಆ ವಸ್ತ್ರಕ್ಕೆ ಅಂಟಿಕೊಂಡಿರುವದರಿಂದ ಹಿಂದುಗಡೆ ಒರೆಸಿಕೊಂಡವನ ಮೈಮೇಲೆ ಅದು ಅನಾಯಾಸವಾಗಿ ಕೂತುಕೊಳ್ಳುತ್ತದೆ. ಮತ್ತು ನಿರೋಗಿಯಾದ ಅವನ ಶರೀರದಲ್ಲಿ ರೋಗವನ್ನುಂಟುಮಾಡುತ್ತದೆ. ಉಷ್ಣ ಮೊದಲಾದ ಭಯಂಕರ ರಸಿಕೆಯಿಂದ ದೂಷಿತವಾದ ವಸ್ತ್ರಗಳನ್ನು ಚನ್ನಾಗಿ ಒಗೆಯದ್ದರಿಂದ ಅಂಥವನ್ನು ಧರಿಸಿ ಆ ದುಷ್ಟ ವಿಕಾರಕ್ಕೆ ಒಳಪಡುವ ಪ್ರಸಂಗವು ಎಷ್ಟೋ ಜನರಿಗೆ ಬಂದಿರುತ್ತದೆ. ಆದ್ದರಿಂದ ಸ್ನಾನ ಮಾಡಿದ ಮೇಲೆ ಉಪಯೋಗಿಸತಕ್ಕ ಬಟ್ಟೆಯು ತನ್ನದೇ ಆಗಿದ್ದು, ಮೊದಲು ಚನ್ನಾಗಿ ಒಗೆದು ಒಣಗಿಸಿದ್ದಿರಬೇಕು; ಕದಾಚಿತ್, ಮಂದಿಯ ಬಟ್ಟೆಯನ್ನು ಉಪಯೋಗಿಸುವ ಪ್ರಸಂಗಬಂದಲ್ಲಿ ಮೊದಲು ಅವನ್ನು ಸ್ವಚ್ಛವಾಗಿ ಒಗೆದು ನಿರ್ದುಷ್ಟವಾದ ಬಳಿಕ ಧರಿಸಬೇಕು. ಒಟ್ಟಿನ ಮೇಲೆ ತನ್ನ ಸರ್ವಪದಾರ್ಥಗಳು ಅನ್ಯರ ಸ್ಪರ್ಶದಿಂದ ಮತ್ತು ಅಶುದ್ಧ ಪದಾರ್ಥಗಳ ಸ್ಪರ್ಶದಿಂದ ಸ್ವಲ್ಪಾದರೂ ದೂಷಿತವಾಗದಂತೆ ಎಚ್ಚರಪಡುವದು ಬುದ್ಧಿವಂತಿಕೆಯ ಕೆಲಸವಾಗಿರುವದು. ಇದರಲ್ಲಿಯೇ ಆರೋಗ್ಯವೆಂಬ ಬೆಲೆಯುಳ್ಳ ವಸ್ತುವು ಅಡಗಿಕೊಂಡಿರುವದು.

ಈರೀತಿಯಾಗಿ ಶರೀರವನ್ನು ನಿರ್ಮಲವಾಗಿಡುವ ಬಾಹ್ಯೋಪಾಯವಿರುವದು. ಇದಕ್ಕೇಶಾರೀರಕ ಮಡಿಯೆಂಬಸಂಜ್ಞೆಯು, ಯಾರುಯಾರು ಎಷ್ಟೆಷ್ಟು ಶುದ್ಧತೆಯನ್ನು ಪಾಲಿಸುತ್ತಹೋಗುವರೋ ಅವರವರಿಗೆ ಅಷ್ಟಷ್ಟು ಸೂಕ್ಷ್ಮ ಅಶುದ್ಧತೆಯು ಕೂಡ ಪರಿಣಾಮವಾಗುವ ಪಾತ್ರತೆಯು ಬರುತ್ತದೆ. ಆದರೆ ಯಾರಿಗೆ ಯಾವಾಗಲೂ

ಮಲದಲ್ಲಿದ್ದು ದಡ್ಡುಬಿದ್ದುಹೋಗಿರುವದೋ ಅಂಥವರಿಗೆ ಅದರ ಅನಿಷ್ಟಪರಿಣಾಮವು ಲಕ್ಷ್ಯದಲ್ಲಿ ಬರುವದಿಲ್ಲ.

ಯಾವವಾದರೂ ಎರಡು ಪದಾರ್ಥಗಳು ಪರಸ್ಪರ ಸ್ಪರ್ಶವನ್ನು ಹೊಂದಿದರೆ ಅವುಗಳೊಳಗೆ ಉಷ್ಣತೆ ಮತ್ತು ವಿದ್ಯುಲ್ಲತೆಯ ಅಭಿಸರಣವಾಗ ತೊಡಗುತ್ತದೆ. ಅಂದರೆ ಸ್ಪರ್ಶದಯೋಗದಿಂದ ಮೂಲಸ್ಥಿತಿಯಲ್ಲಿ ಹೆಚ್ಚುಕಡಿಮೆಯಾಗಲಿಕ್ಕೆ ಪ್ರಾರಂಭವಾಗುತ್ತದೆ. ಈ ಹೆಚ್ಚು ಕಡಿಮೆಯು ಇಷ್ಟ ಅಥವಾ ಅನಿಷ್ಟವಾಗಿರುವದು. ಜಡಪದಾರ್ಥಗಳಿಗಿಂತ ಚೈತನ್ಯವುಳ್ಳವುಗಳ ಸ್ಪರ್ಶ ಕ್ರಿಯೆಯಲ್ಲಿ ಮತ್ತಿಷ್ಟು ಚೈತನ್ಯ ವಿದ್ಯುತ್ತಿನ (ಇದಕ್ಕೆ ಹಿರಣ್ಯಗರ್ಭತೇಜವೆಂಬ ಸಂಜ್ಞೆಯು ನಮ್ಮ ಪ್ರಾಚೀನರಿಂದ ಕೊಡಲ್ಪಟ್ಟಿದೆ.) ಅಭಿಸರಣವಾಗುವದು. ಇದಾದರೂ ಮೇಲಿನಂತೆ ಹಿತಕರ ಅಥವಾ ಅಹಿತಕರವಾಗಿ ಪರಿಣಮಿಸುತ್ತದೆ. ಇದು ಆ ಆ ಶಾಸ್ತ್ರಗಳಿಂದಲೂ ಅನುಭವದಿಂದಲೂ ಸಿದ್ಧವಾಗಿರುತ್ತದೆ.

ಈ ಮೇಲಿನ ನಿಯಮದಂತೆ ಯಾರೊಬ್ಬರ ಹಸ್ತಸ್ಪರ್ಶವಾದರೆ ಅಹಿತಕಾರಕ ಸ್ಥಿತಿಯುಂಟಾಗುವ ಸಂಭವವಿರುತ್ತದೆ. ಯಾಕಂದರೆ ಸ್ಪರ್ಶದ ಸಂಗಡ ವಿದ್ಯುತ್ ಪ್ರವಾಹವು ಪ್ರವಹಿಸ ಹತ್ತುವದು. ಎಲ್ಲ ಜನರ ರಕ್ತದಲ್ಲಿಯ ಊಷ್ಣತೆಯು ಸಮಾನಾಗಿರುವದಿಲ್ಲ. ಆದ್ದರಿಂದ ಅದು ಸ್ಪರ್ಶದಿಂದ ಸಮಾನವಾಗಲಿಕ್ಕೆ ಯತ್ನಿಸುತ್ತದೆ. ಈ ಊಷ್ಣತೆಯ ಯತ್ನದಲ್ಲಿ ನಮಗೆ ಹಲವು ಸಾರೆ ಅಹಿತವಾಗುವ ಪ್ರಸಂಗ ಬರುತ್ತದೆ. ಇದಲ್ಲದೆ ಸ್ಪರ್ಶದಿಂದ ಜ್ಞಾನತಂತುಗಳೊಳಗಿನ ವಿದ್ಯುಚ್ಛಕ್ತಿಯು ಸಮಾನತ್ವವನ್ನು ಸ್ವೀಕರಿಸುತ್ತದೆ. ಇದರಿಂದಲೂ ನಮಗೆ ಅಪಾಯಗಳು ಒದಗುತ್ತವೆ.

ವಿದ್ಯುಲ್ಲತೆಯು ರಕ್ತದ ಜೀವನವಿರುತ್ತದೆ. ಅದು ರಕ್ತದಲ್ಲಿ ಕಡಿಮೆ ಕಾರ್ಯಕತೃಕವಾದರೆ ನಮಗೆ ಅಹಿತವಾಗುತ್ತದೆ. ಆದ್ದರಿಂದ ವಿದ್ಯುತ್‌ಪ್ರವಹಣ ಪ್ರತಿಬಂಧಕ ವಸ್ತ್ರಗಳಿಗೆ ಮಡಿಯೆಂದು ತಿಳಿಯುವದುಂಟು; ಉಣ್ಣೆ ಹಾಗು ರೇಶಿಮೆಯ ವಸ್ತ್ರಗಳು ಮಡಿಯಲ್ಲಿ ಶ್ರೇಷ್ಠವಾದವುಗಳೆಂದು ತಿಳಿಯಲ್ಪಡುವವು. ಇವುಗಳಿಗೆ ಮಹಾವಸ್ತ್ರಗಳೆಂಬ ಸಂಜ್ಞೆಯಿರುತ್ತದೆ. ನೂಲಿನ ವಸ್ತ್ರಗಳು ಒಗೆದರೆ ಮಡಿಯೆನಿಸಿಕೊಳ್ಳುತ್ತವೆ. ಯಾಕಂದರೆ ಅವುಗಳ ಮೇಲೆ ಅನ್ಯರ ಶರೀರದೊಳಗಿನ ವಿದ್ಯುತ್ತಿನ ಯೋಗದಿಂದ ಅಹಿತಕಾರಕ ಪರಿಣಾಮವುಂಟಾಗಿದ್ದರೆ ಅದು ನಮಗೆ ಬಾಧಿಸಬಾರದೆಂದು ನೀರಿಗೂ-ವಿದ್ಯುತ್ತಿಗೂ ಪರಮ ಸಖ್ಯವಿರುವದರಿಂದ ನೀರಲ್ಲಿ ಚನ್ನಾಗಿ ಒಗೆದು ಆ ಅಹಿತಕಾರಕ ಪರಿಣಾಮದಿಂದ ಆ ಬಟ್ಟೆಯನ್ನು ಶುದ್ಧ

ವಾಗಮಾಡಬೇಕಾಗುತ್ತದೆ. ಹೀಗೆ ಶುದ್ಧವಾದ ಬಟ್ಟೆಯನ್ನು ಸ್ನಾನಮಾಡದೆ ಇದ್ದವರು ಮುಟ್ಟದಿದ್ದರೆ ಅದು ಶುದ್ಧ ಮಡಿಯೆನಿಸುವದು. ಮಡಿಬಟ್ಟೆಗಳಿಗೂ ಮೈಲಿಗೆಯ ಬಟ್ಟೆಗಳಿಗೂ ಇಷ್ಟು ಅಭ್ಯಂತರವಿರುವದು. ಅನ್ಯರ ಸಾಂಸರ್ಗಿಕ ದೋಷದಿಂದ ತಮ್ಮ ಶರೀರವನ್ನು ಕಾಪಾಡಿಕೊಳ್ಳುವದಕ್ಕಾಗಿಯೇ ಈ ಮಡಿಬಟ್ಟೆಗಳನ್ನು ಉಪಯೋಗಿಸಬೇಕು. ಇದೇ ಮಡಿಯ ಸ್ಥೂಲಕಾರಣವು.

ಸುಧಾರಕ, ನಮ್ಮ ಪೂರ್ವಜರು ರೇಶಿಮೆಯ ಇಲ್ಲವೆ ಉಣ್ಣೆಯ ಅಥವಾ ಒಗೆದ ಶುದ್ಧ ನೂಲಿನ ಬಟ್ಟೆಗಳನ್ನು ಉಪಯೋಗಿಸಬೇಕೆಂದು ಹೇಳಿದ್ದು ಭೌತಿಕ ಶಾಸ್ತ್ರೀಯ ತತ್ವಗಳಿಗೆಸರಿಯಾಗಿದೆಯೋಎಂಬದನ್ನುಚನ್ನಾಗಿನೋಡು; ಯಾವಾಗಲೂ ಈಬಟ್ಟೆಗಳನ್ನು ಉಪಯೋಗಿಸುವದು ಅಶಕ್ಯವಾದರೆಈಶ್ವರೋಪಾಸನೆಯ ಕಾಲದಲ್ಲಿ ಭೋಜನ ಕಾಲಗಳಲ್ಲಿಯಾದರೂ ಉಪಯೋಗಿಸಬೇಕೆಂದು ನಮ್ಮ ಹಿತವನ್ನು ಬಯಸುವ ಋಷಿಗಳು ಬರೆದಿಟ್ಟಿರುವರು; ಊಟವು ನಮ್ಮ ಇಡೀ ಆಯುಷ್ಯಕ್ಕೆ ಶುದ್ಧ ಹಾಗು ಪವಿತ್ರ ರಕ್ತವನ್ನು ಒದಗಿಸಿಕೊಡುವ ಮಹತ್ವದ ಸಾಧನವಿದ್ದದರಿಂದ ಆ ಕಾಲದಲ್ಲಿ ಮನಸ್ಸು ಶರೀರಗಳು ಪ್ರಸನ್ನವೂ-ಪವಿತ್ರವೂ ಆಗಿರಬೇಕು. ವಸ್ತು ಸ್ಥಿತಿಯು ಹೀಗಿದ್ದು, ಈಗ ಅದರ ವಿಪರೀತ ಸ್ಥಿತಿಯು ದೃಷ್ಟಿಗೆ ಬೀಳುತ್ತದೆ. ಊಟಕ್ಕೆ ಮಹತ್ವವಿಲ್ಲದಾಗಿದೆ. ಪವಿತ್ರಾಪವಿತ್ರತೆಗಳ ತಾರತಮ್ಯವಿಲ್ಲದಾಗಿದೆ. ಭಿನ್ನಭಿನ್ನಪ್ರಕೃತಿಯ-ಭಿನ್ನಭಿನ್ನ ಆಚಾರವಿಚಾರಗಳ ಮತ್ತು ಹಲವು ಬಗೆಯ ಅಪವಿತ್ರ (ಅಶುದ್ಧ) ಸ್ಥಿತಿಯ ಅಸಂಖ್ಯ ಜನರು ಕುಳಿತ ರೈಲಬಂಡಿ ಮೊದಲಾದವುಗಳಲ್ಲಿ ಕೂಡ ಈಗ ಊಟಕ್ಕೆ ಅಡ್ಡಿಯಿಲ್ಲದಾಗಿದೆ. ಖಾನಾವಳಿಗಳಲ್ಲಂತೂ ಊಟಕ್ಕೆ ಕೂಡ್ರುವವರ ಶ್ವಪಚತನವನ್ನು ಬಣ್ಣಿಸಲಾಸಲ್ಲ! ಎಷ್ಟೋ ಜನರು ಉಟ್ಟಬಟ್ಟೆಯನ್ನು ಬಿಡುವದಿಲ್ಲ; ಇಷ್ಟೇ ಅಲ್ಲ; ಮೈಮೇಲಿನ ಬಂಡಿಯನ್ನು ಕೂಡಾ ತೆಗೆಯುವದಿಲ್ಲ. ಬೆವರಿನಿಂದ ಆ ಬಟ್ಟೆಗಳು ದುರ್ಗಂಧವನ್ನು ಬೀರುತ್ತಿದ್ದರೂ ಅದರಿಂದ ಎಡಬಲಗಳಲ್ಲಿ ಕುಳಿತ ಜನರು ಚಡಪಡಿಸಿಚಾಟಿಹೊಡೆಯುತ್ತಿದ್ದರೂ ಅವರಿಗೆ ಅದರ ಪರಿವೆ ಇರುವದಿಲ್ಲ. ಇಂಥವರಿಗೆ ಉಂಡ ಅನ್ನವು ಹ್ಯಾಗೆ ಪವಿತ್ರ ರಕ್ತಪ್ರದವಾಗಬೇಕು. ಮನಸ್ಸಾದರೂ ಹ್ಯಾಗೆ ಸುಪ್ರಸನ್ನವಿರಬೇಕು? ಕೆಲಕೆಲವರಂತೂ ಬಹಿರ್ದಿಶೆಗೆ ಹೋಗಿ ಬಂದು ಕಾಲುಗಳನ್ನು ಕೂಡಾ ತೊಳೆದುಕೊಳ್ಳದೆ ಊಟಮಾಡುವರು. ಹಾಯ್! ಹಾಯ್! ಇಷ್ಟು ಸ್ವೇಚ್ಛೆಯಾಗಿ ನಡೆಯುವವರಿಗೆ-ಶ್ವಪಚಜನರಿಗೆ ಹಿತಕರವಾದ ಮಡಿ-ಮೈಲಿಗೆಯ ನಿರ್ಬಂಧವು ಒಗ್ಗದಿದ್ದರೆ ಆಶ್ಚರ್ಯವೇನು? ಇಂಥವರು ಸುಧಾರಕರೆಂದು ಹೆಸರನ್ನಿಟ್ಟುಕೊಂಡು ಜಗತ್ತನ್ನೇ ಭ್ರಷ್ಟವಾಗ ಮಾ

ಡಲಿಕ್ಕೆ ಪ್ರಯತ್ನಿಸಿದರೆ ಆಗುವದೇನು? ಇವರಿಂದ ಸನಾತನ ಧರ್ಮವು ಸುಳ್ಳಾಗ ವದೇ? ಮಡಿ-ಮೈಲಿಗೆಯ ತ್ರಿಕಾಲಾಬಾಧಿತ ತತ್ವವು ನಷ್ಟವಾಗುವದೇ? ಎಂದಿಗೂ ಆಗದು! ಧರ್ಮಶಾಸ್ತ್ರಾಜ್ಞೆಯನ್ನು ಪಾಲಿಸದವನೊಬ್ಬನೇ ಕೆಡುವನು!

ಸುಧಾರಕ—(ಸ್ವಲ್ಪ ಅಸಮಾಧಾನದಿಂದ)ರಾಯರೇ, ಎಲ್ಲ ಸುಧಾರಕರು ಶ್ವಪಚರಿರುತ್ತಾರೆಂದು ತಿಳಿಯಲಾಗದು. ಸುಧಾರಕರೆಲ್ಲ ಬಹುತರ ಸ್ವಚ್ಛತೆಯ ಪ್ರಿಯರೇ; ಈಗ ನಾನು ಸುಧಾರಕ ಪಂಥದವನಷ್ಟೇ; ನಾನು ಹೊಲಸು ಬಟ್ಟೆ ಗಳನ್ನುಟ್ಟುಕೊಂಡು ಎಂದೂ ಉಣ್ಣುವದಿಲ್ಲ. ಅಬೇ ಇಸ್ತ್ರೀ ಮಾಡಿಸಿತಂದ—ಕಣ್ಣು ಕುಕ್ಕುವಂಥ ಜಳಜಳ ಬಟ್ಟೆಯನ್ನುಟ್ಟುಕೊಂಡು ಊಟಮಾಡುತ್ತೇನೆ. ಊಟಕ್ಕೆ ಕುಳಿತಾಗ ಚಳಿಯಾಗಬಾರದೆಂದು ಇಲ್ಲವೆ ನೊಣ ಕಡಿಯಬಾರದೆಂದು ಶುಭ್ರವಾದ ಪೈರಣವನ್ನು ಹಾಕಿರುತ್ತೇನೆ. ಆದರೂ ನಮ್ಮ ತಂದೆಯು ನನ್ನ ನ್ನು ಬಯ್ಯುವನು. ಮೈಲಿಗೆಯಿಂದ ಕೂಳು ತಿನ್ನುತ್ತೀ ಎಂದು ಹಲ್ಲು ಕಡಿಯು ವನು. ನಾನು ಅವನ ಮೂರ್ಖತನಕ್ಕೆ ಮನಸಿನಲ್ಲಿಯೇ ನಕ್ಕು ಸುಮ್ಮನೇ ಉಂಡು ಹೊರಗೆ ಬರುತ್ತೇನೆ. ಸ್ವಚ್ಛವಾಗಿ ಒಗೆದ ಬಟ್ಟೆಗಳು ಶುಚಿಭೂತವಾದವುಗಳೆಂ ದು ನೀವು ಹ್ಯಾಗೂ ಈಗ ಹೇಳಿರುತ್ತೀರಿ. ಇನ್ನು ನಮ್ಮಪ್ಪನಿಗೆ ಚನ್ನಾಗಿ ಕೈಹಚ್ಚು ತ್ತೇನೆ. ಯಾಕೆ ಸುಮ್ಮನಿರುವಿರಿ? ನನ್ನ ಈ ಮಾತಿಗೆ ನಿಮ್ಮ ಅಂಬೋಣವೇನು?

ಶಾಮರಾಯ—ಛೇ, ಛೇ, ಹುಡುಗಾ ನನ್ನ ಮಾತನ್ನು ಅಪಾರ್ಥವಾಗಿ ತಿಳಿದುಕೊಂಡೆ. ಇಷ್ಟೊತ್ತಿನ ವರೆಗೆ ನಿನಗೆ ಹೇಳಿದ್ದೆಲ್ಲ ನಿರರ್ಥಕವಾಯಿತು. ಒಮ್ಮೆ ಒಗೆದ ಬಟ್ಟೆಗಳನ್ನು ಸ್ನಾನಮಾಡದಿರುವಾಗ ಮುಟ್ಟಿದರೇ, ಅದಕ್ಕೆ ಸ್ಪರ್ಶ ದೋಷವು ತಟ್ಟುತ್ತಿರಲು ಅಗಸರ ಮನೆಯಿಂದ ಬಂದ ಬಟ್ಟೆಗಳು ನಿರ್ದೋಷವುಳ್ಳ ವೆಂದು ಅಂದರೆ ಮಡಿಯವೆಂದು ನೀನು ಭಾವಿಸುತ್ತೀಯಲ್ಲ? ಹೀಗೆ ಅರ್ಥ ಮಾಡಿಕೊಳ್ಳುತ್ತಿರುವದರಿಂದಲೇ ನಿಮಗೆ ಸುಧಾರಕರೆಂಬ ಬಿರುದು ಬಂದಿದೆ. ಸ್ಪ ರ್ಶದಿಂದ ಎಷ್ಟೆಷ್ಟು ಅನರ್ಥಗಳಾಗುತ್ತವೆಂಬದನ್ನು ಹೇಳುತ್ತೇನೆ ಕೇಳು.

ಈ ಮೊದಲೇ ನಿನಗೆ ಸ್ಪರ್ಶನದ ಕೆಲವು ವಿಷಯಗಳನ್ನು ಹೇಳುವಾಗ ಸ್ಪ ರ್ಶದಿಂದ ಉಷ್ಣತೆಯಲ್ಲಾಗುವ ಹೆಚ್ಚು-ಕಡಿಮೆ ವಿದ್ಯುತ್‌ಸಂಚಾರ ಇವುಗಳ ನ್ನು ಹೇಳಿರುವೆನಷ್ಟೇ. ಈ ಉಷ್ಣತೆಯ ಹೆಚ್ಚು-ಕಡಿಮೆಯು ಸ್ಪಷ್ಟವಾಗಿ ತಿಳಿ ಯಲಿಕ್ಕೆ ಒಂದು ದೊಡ್ಡ ಉದಾಹರಣವಿರುವದು. ಅದೇನಂದರೆ—ಸ್ತ್ರೀಯರಿ ಗೆ ತಿಂಗಳಿಗೊಮ್ಮೆ ರಜೋದರ್ಶನವಾಗುವದಷ್ಟೇ; ಈ ಋತುಕಾಲವು ಪ್ರಾಪ್ತ ವಾದಾಗ ಅವರು ಅಸ್ಪರ್ಶರಾಗಿ ದೂರ ಇರುವರು. ಆದರೆ ನಾಲ್ಕನೆಯ ದಿವಸ

ಸ್ನಾನದಿಂದ ಅವರು ಶುದ್ಧವಾಗಿ ಒಳಗೆ ಬರುವರು. ಈ ದಿವಸ ಅವರಿಗೆ ಮನೆಯೊಳಗಿನ ಕೆಲಕೆಲವು ಪದಾರ್ಥಗಳನ್ನೂ, ಹುಡುಗರು ಹುಪ್ಪಡಿಗಳನ್ನೂ ಮುಟ್ಟಲಿಕ್ಕೆ ಅಧಿಕಾರವಿರುವದು. ಅವರ ಸ್ಪರ್ಶದಿಂದ ಜಡಪದಾರ್ಥಗಳ ಮೇಲೆ ಏನು ಪರಿಣಾಮವಾಗುವದೆಂಬದು ನಮ್ಮ ಅನುಭವಕ್ಕೆ ಬರುವದಿಲ್ಲ. ಆದರೆ ಅವರ ಸ್ಪರ್ಶದಿಂದ ಎಳೆಯ ಮಕ್ಕಳು ಎಳೆಯ ಗಿಡಗಳು ಒಣಗುವವೆಂಬದು ಸಮಸ್ತರ ಅನುಭವಕ್ಕೂ ಬಂದ ಮಾತಾಗಿರುವದು. ಎಲ್ಲ ಮುಟ್ಟಾದ ಹೆಂಗಸರ ಮುಟ್ಟಿನಿಂದ ಮಕ್ಕಳು ಒಣಗುತ್ತವೆಂಬಂತಿಲ್ಲ. ಕೆಲಕೆಲವು ವಿಕ್ಷಿಪ್ತ ಪ್ರಕೃತಿಯ ಜನರಿಂದ ಮಾತ್ರ ಹೀಗಾಗುವದು. ಆದರೆ ಮಂದಿಯ ಮಕ್ಕಳನ್ನು ಮುಟ್ಟಿ ಒಣಗಿಸುವ ಆ ಹೆಂಗಸರು ತಮ್ಮ ಹೊಟ್ಟೆಯ ಮಕ್ಕಳನ್ನು ಸರ್ವಕಾಲ ಎತ್ತಿಕೊಂಡರೂ ಅವಕ್ಕೆ ಏನೂ ಆಗುವದಿಲ್ಲ. ಇದಕ್ಕೆ ತಾಯಿ-ಮಕ್ಕಳ ರಕ್ತದಲ್ಲಿದ್ದ ಸಮಾನ ಗುಣಧರ್ಮವೇ ಕಾರಣ; ಮಂದಿಯ ಹುಡುಗರಲ್ಲಿ ರಕ್ತದ ಸಮಾನ ಗುಣಧರ್ಮವಿರದ್ದರಿಂದ ಅವು ಒಣಗುತ್ತವೆಂಬುವದು ಮೇಲೆಯೇ ತೋರುವದು. ಇದೊಂದೇ ಉದಾಹರಣದಿಂದ ಸ್ಪರ್ಶದಿಂದ ಪ್ರಕೃತಿಯ ಮೇಲೆ ಏನು ಏನು ಪರಿಣಾಮವಾಗುತ್ತದೆಂಬದು ಸ್ಪಷ್ಟವಾಗಿ ಕಂಡುಬರುವದು. ತಮ್ಮಾ ಸುಧಾರಕಾ, ಸ್ಪರ್ಶಾಸ್ಪರ್ಶತೆಯ ನಿಜವಾದ ಕಾರಣವು ಇನ್ನಾದರೂ ನಿನ್ನ ಮನಸ್ಸಿನಲ್ಲಿ ಬಿಂಬಿಸಿತೇ ಹ್ಯಾಗೆ? ಧರ್ಮಶಾಸ್ತ್ರಕಾರರು ಕಾರಣವ ಹೊರತು ಯಾಕೆ ನಿಯಮಗಳನ್ನು ಹಾಕುವರೆಂಬದನ್ನಾದರೂ ನಿಮ್ಮ ಜನರು ವಿಚಾರಿಸಬೇಕಾಗಿತ್ತು.

ಸುಧಾರಕ—ರಾಯರೇ, ಈಗೀಗ ನಿಮ್ಮ ಮಾತು ನನಗೆ ಸಮರ್ಪಕವೆಂದು ತೋರತೊಡಗಿತು. ಸಕೇಶಿಗಳ ವಿಷಯವಾಗಿ ಅವರ ನೀತಿ ಕೆಡಬಾರದೆಂದು ಧರ್ಮಶಾಸ್ತ್ರವು ಹೀಗೆ ಅವರನ್ನು ವಿದ್ರೂಪಗೊಳಿಸುತ್ತದೆಂದು ಹೇಳಿದಿರಿ. ಆದರೆ ವಿದ್ರೂಪ ಸ್ಥಿತಿಯನ್ನು ಹೊಂದಿದ ಎಷ್ಟೋ ಜನ ವಿಧವೆಯರು ನೀತಿಭ್ರಷ್ಟರಾಗುತ್ತಾರಲ್ಲ? ಇದಕ್ಕೆ ಸಮಾಧಾನವೇನು? ಹ್ಯಾಗಿದ್ದರೂ ಅವರ ದುರ್ವ್ಯವಹಾರಗಳು ಸಾಗತಕ್ಕವೆಂದ ಬಳಿಕ ಧರ್ಮಶಾಸ್ತ್ರಕಾರರು ಹೀಗೆ ನಿಯಮ ಮಾಡುವ ಹುಚ್ಚುತನಕ್ಕೆ ಯಾಕೆ ಹೋದರು?

ಶಾಮರಾಯ—ತಮ್ಮಾ, ಧರ್ಮಶಾಸ್ತ್ರಕಾರರು ಹುಚ್ಚುತನಕ್ಕೆ ಹೋಗಿಲ್ಲ; ಹೀಗೆ ಪ್ರಶ್ನ ಮಾಡುವ ನಾವು ಮಾತ್ರ ಹುಚ್ಚುತನಕ್ಕೆ ಹೋಗುತ್ತೇವೆ. ಸಜ್ಜನರಿಗೋಸ್ಕರವಾಗಿ ಧರ್ಮವಿರುತ್ತದೆ. ದುರ್ಜನರಿಗೋಸ್ಕರವಾಗಿ ಅಧರ್ಮವಿರುತ್ತದೆ. ಅಂದಬಳಿಕ ಕೆಲವು ಜನ ನೀಚರು ದುರ್ವ್ಯವಹಾರ ಮಗ್ನರಾದರೆ ಇದರಲ್ಲಿ ಧರ್ಮಶಾಸ್ತ್ರಕಾರರ ದೋಷವೇನು? ಸಮಾಜವು ಕೆಡಬಾರದು ಅದರ ಸುಸ್ಥಿತಿಯು ಚಿರಕಾಲವಿರಬೇಕೆಂಬದು ಅವರ ಇಚ್ಛೆಯು. ಅವರ ಈ ಇಚ್ಛೆಯನ್ನು ಕೆಲ ಜನ ಲಂಡರು ಮುರಿದರೆ ಚಲೋ ಜನರಿಗಾದರೂ ನಿಯಮವು ಬೇಡವೆಂದರೆ ಹ್ಯಾಗೆ? ಮೂಲತಃ ನಿಯಮ ನಿರ್ಬಂಧಗಳೇ ಇಲ್ಲದೆ ಹೋದರೆ ಜನರು ಧರ್ಮಾಂಧರಾಗಿ ಹುಟ್ಟುಗುರುಡರಾಗಬೇಕಾದೀತು? ಅವರಿಗೆ ಹ್ಯಾಗೆ ಆಚರಿಸಬೇಕೆಂಬದರ ದಾರಿಯೇ ಸಿಗಲಿಕ್ಕಿಲ್ಲ. ಸರಕಾರದವರು ಕಾಯಿದೆಗಳನ್ನು ಮಾಡುವರು. ದುರ್ಜ

ನರು ಅದನ್ನು ಲೆಕ್ಕಿಸದೆ ಅನ್ಯಾಯಗಳನ್ನು ಮಾಡುವರು. ಹೀಗೆ ದುರ್ಜನರು ಅನ್ಯಾಯಗಳನ್ನು ಮಾಡಿಯೇ ಮಾಡುವರೆಂದು ಕಾಯಿದೆಗಳನ್ನೇ ಮಾಡಲಾಗದೇ ಹ್ಯಾಗೆ? ಧರ್ಮಶಾಸ್ತ್ರವಾಗಲಿ-ಕಾಯಿದೆಯಾಗಲಿ ದುಷ್ಟರಿಗೆ ದಂಡವನ್ನು ವಿಧಿಸಿಯೇ ವಿಧಿಸಿರುತ್ತದೆ.

ಸುಧಾರಕ—ಸರಿ! ಸರಿ! ರಾಯರೇ, ನಿಮ್ಮ ಮಾತಿನ ರಹಸ್ಯವು ತಿಳಿಯಿತು. ನಾನು ಕೇಳಿದ ಪ್ರಶ್ನೆಗಳಲ್ಲಿ ವಿಧವೆಯರಾದ ಸಕೇಶಿಗಳ ವಿಷಯಕ್ಕೆ ಉತ್ತರ ಸಿಕ್ಕಹಾಗಾಯಿತು. ಇದು ನೈತಿಕ ವಿಷಯವಿರುವದರಿಂದ ನಾನು ಸುಮ್ಮನಾಗಬೇಕಾಯಿತು, ಸ್ಪರ್ಶಾಸ್ಪರ್ಶತೆಯ ವಿಷಯವಾಗಿಯೂ ಮಡಿ-ಮೈಲಿಗೆಗಳನ್ನು ಪಾಲಿಸುವ ವಿಷಯವಾಗಿಯೂ ಅಲ್ಪಸ್ವಲ್ಪ ಭೌತಿಕಶಾಸ್ತ್ರಾಧಾರವನ್ನು ಹಚ್ಚಿ ಹ್ಯಾಗಾದರೂ ಮಾಡಿ ಮಾತನ್ನು ಮುಗಿಸಿದಿರಿ. ಇದರಿಂದ ನನಗೆ ಅಲ್ಪ ಸ್ವಲ್ಪ ಸಮಾಧಾನವಾಯಿತು; ಇದಲ್ಲದೆ ರಜಸ್ವತಿಯ ಸ್ತ್ರೀಯರ ಸ್ಪರ್ಶತೆಯ ವಿಷಯವಾಗಿ ಕೆಲವು ಕಾರಣಗಳನ್ನು ಹೇಳಿದಿರಿ. ಅದನ್ನು ಒಪ್ಪುತ್ತೇನೆ. ಆದರೆ ಅಂತ್ಯಜರನ್ನು ಯಾಕೆ ಮುಟ್ಟಿಸಿಕೊಳ್ಳಬಾರದು?

ಶಾಮರಾಯ—ಹುಡುಗಾ, ಈ ವಿಷಯದಲ್ಲಿ ಶಾರೀರಿಕ ಹಾಗು ಮಾನಸಿಕ ಉನ್ನತಿಯ ದೃಷ್ಟಿಯಿಂದ ವಿಚಾರಮಾಡಬೇಕಾಗುತ್ತದೆ. ಇದರಲ್ಲಿ ಶಾರೀರಿಕ ಉನ್ನತಿಯ ದೃಷ್ಟಿಗಿಂತ ಮಾನಸಿಕ ಉನ್ನತಿಯ ಕಡೆಗೆ ಹೆಚ್ಚು ಲಕ್ಷ್ಯಗೊಡುವದಿರುತ್ತದೆ. ಈ ಮಾನಸಿಕ ಉನ್ನತಿಯ ಭಾಗವನ್ನು ನಿನಗೆ ಸ್ವತಂತ್ರವಾಗಿ ಹೇಳುತ್ತೇನೆ. ಈಗ ಶಾರೀರಿಕ ದೃಷ್ಟಿಯಿಂದ ತೋರಿಬರುವ ಕೆಲವು ವಿಚಾರಗಳನ್ನು ನಿನ್ನ ಮುಂದೆ ಇಡುತ್ತೇನೆ. ಇತ್ತ ಲಕ್ಷ್ಯಗೊಡು.

ಅಂತ್ಯಜರ ವ್ಯವಹಾರ ಎಷ್ಟು ಕೀಳುತರದ್ದೆಂಬದನ್ನು ಬೇರೆ ಹೇಳುವ ಕಾರಣವಿಲ್ಲವಷ್ಟೇ; ಹುಟ್ಟಿದಂದಿನಿಂದ ಸಾಯುವ ವರೆಗೆ ಅದೇ ವ್ಯವಹಾರದಲ್ಲಿರುವದರಿಂದ ಆ ಜನರ ಶರೀರದ ಮೇಲೆ ಅನಿಷ್ಟ ಪರಿಣಾಮಗಳುಂಟಾಗದಿದ್ದರೂ ಆ ವ್ಯವಹಾರದಲ್ಲಿದ್ದ ಜನರ ಶರೀರದ ಮೇಲೆ ಅವರ ಸಂಸರ್ಗದ ಪರಿಣಾಮವು ಬೇಗನೆ ಆಗುವದು. ಆದ್ದರಿಂದ ಊರ ಹೊರಗೆ ಅವರನ್ನು ಇರಿಸುವದು ಪ್ರಚಾರದಲ್ಲಿರುತ್ತದೆ. ಮೇಲಿನ ವರ್ಣದವರಷ್ಟು ನಿರ್ಮಲತೆಯನ್ನು ಕಾಯ್ದುಕೊಳ್ಳಲಿಕ್ಕೆ ಇಡೀ ಅಂತ್ಯಜ ಸಮಾಜದವರಿಂದ ಆಗುವದಿಲ್ಲ. ಸರ್ವದಾ ಹೀನ ಸ್ಥಿತಿಯಲ್ಲಿರುವವರ ಸಂಗಡ ಬಳಿಕೆ ಮಾಡುವದು ಯಾರಿಗೆ ತಾನೇ ಶಕ್ಯವಾದೀತು? ಒಂದು ವೇಳೆ ನೀನು ಹೀಗೆ ಪ್ರಶ್ನೆ ಮಾಡಬಹುದು; ಅದೇನಂದರೆ,—"ಅವರು ಹೀನ ಕರ್ಮಗಳನ್ನು ಬಿಟ್ಟು ನಿರ್ಮಲರಾದರೆ ಅವರೊಡನೆ ವ್ಯವಹಾರ ಮಾಡಲಿಕ್ಕೆ ಅಡ್ಡಿಯೇನು?" ಇದಕ್ಕೆ ಮಾನಸೀಕೊನ್ನತಿಯ ಬಗ್ಗೆ ವಿಚಾರ ಮಾಡಬೇಕಾಗುವದು; ಸ್ಥೂಲ ಶರೀರದ ದೃಷ್ಟಿಯಿಂದ ಈ ಪ್ರಶ್ನೆಗೆ ಸಮಾಧಾನಕಾರಕ ಉತ್ತರವು ಸಿಗುವದಿಲ್ಲ. ಆದ್ದರಿಂದ ಸೂಕ್ಷ್ಮ ಶರೀರದ ವಿಷಯವಾಗಿಯೇ ವಿಚಾರ ಮಾಡುವಾ.

---

# ಲೇಖಾಂಕ ೪.

ಶಾಮರಾಯ— ಮನುಷ್ಯನ ಅವನತಿ ಹಾಗು ಉನ್ನತಿಗಳಿಗೆ ಮನಸ್ಸೇ ಕಾರಣವು; "ಮನ ಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ" ಎಂದು ಭಗವಂತನು ಕೂಡಾ ಗೀತೆಯ ಮುಖಾಂತರವಾಗಿ ಉಪದೇಶಿಸಿರುತ್ತಾನೆ. ಆದ್ದರಿಂದ ಮನಸ್ಸು ನಿರ್ಮಲವಾಗಿರುವಂತೆ ಯಾವಾಗಲೂ ಎಚ್ಚರಪಡಬೇಕು. ಅದು ಪರಿಶುದ್ಧ ಸ್ಥಿತಿಯಲ್ಲಿರಬೇಕಾದರೆ, ಮನಸ್ಸು ನಿರ್ಮಲವಿಲ್ಲದವರ ಸಹವಾಸ ವನ್ನು ಮಾಡಕೂಡದು. ಅಂದರೆ ತಮೋಗುಣಿಗಳ ನೆರಳಿಗೆ ಸಹ ಹೋಗಬಾರದು. ಶೈಶವಾವಸ್ಥೆಯಲ್ಲಿ ಮನಸ್ಸು ನಿರ್ವಿಕಾರವಾಗಿರುವದು. ಆದರೆ ವಿಕಾರದ ಬೀ ಜಗಳು ಮಾತ್ರ ಆಗ ಅದರಲ್ಲಿ ಬಹು ಸೂಕ್ಷ್ಮವಾಗಿರುವವು; ಮುಂದೆ ಅವು ಸಂಗದಿಂದ ಪರಿಪುಷ್ಟವಾಗಿ ಯಾವ ಬಗೆಯ ಸಂಗವು ಘಟಿಸುವದೋ ಆ ಬಗೆಯ ವಿಕಾರಕ್ಕೆ ಗುರಿಮಾಡುವವು. ಮುಖ್ಯವಾಗಿ ಯಾವ ಗತಿಯು ಮನಸ್ಸಿಗೆ ತಗ ಲುವದೋ ಅದೇ ಗತಿಯನ್ನು ಅದು ಅಂಟಿಕೊಳ್ಳುವದು. ಆದ್ದರಿಂದ ಬ್ರಹ್ಮ-ಕ್ಷತ್ರಿಯ-ವೈಶ್ಯ-ಶೂದ್ರರೆಂಬ ನಾಲ್ಕು ವರ್ಗಗಳು ಉತ್ಪನ್ನವಾಗಿರುವವು. "ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮ ವಿಭಾಗಶಃ" ಎಂದು ಗೀತೆಯ ಲ್ಲಿ ಭಗವಂತನು ಹೇಳಿದ ಮರ್ಮವಾದರೂ ಇದೇ ಇರುವದು. ಸತ್ವ ವೃತ್ತಿಯು ಳ್ಳವನಿಂದ ಹಿಂಸಾಪರವಾದ ಕಾರ್ಯವು ಆಗದು. ಹಿಂಸಾಪರನಾದ ವನಿಂದ ಸಾತ್ವಿಕ ವೃತ್ತಿಯನ್ನು ತಾಳಲಿಕ್ಕಾಗದು. ಅಂದರೆ ಯಾವದಕ್ಕಾದ ರೂ ಜನ್ಮಸಿದ್ಧವಾದ ಗುಣವು ಬೇಕಾಗುತ್ತದೆ.

ಅಂತ್ಯಜರಿಗೆ ಹಿಂಸಾ ಕ್ರಿಯೆಗಳು ಇಲ್ಲವೆ ತಾಮಸ ಅಥವಾ ಹೀನಕರ್ಮ ಗಳು ಜನ್ಮಸಿದ್ಧವಾದವುಗಳಾಗಿವೆ. ಅವರ ಸಹವಾಸದಿಂದ ಈಶ್ವರೋಪಾಸಕನ-ಮನಸ್ಸನ್ನು ನಿರ್ಮಲವಾಗಿಟ್ಟುಕೊಂಡವನ- ಸತ್ವವೃತ್ತಿಗೆ ಭಂಗವುಂಟಾಗುತ್ತದೆ. ಯಾಕಂದರೆ, ಸ್ಪರ್ಶ ಕ್ರಿಯೆಯಿಂದ ಏನು ಹೆಚ್ಚು ಕಡಿಮೆಯಾಗುತ್ತದೆಂಬದನ್ನು ಹಿಂದೆಯೇ ಹೇಳಿದೆ. ಮನಸ್ಸಿನ ಮೇಲೆ ಜಡಪದಾರ್ಥ ಹಾಗು ಚೈತನ್ಯಗಳ ಪರಿ ಣಾಮವು ಆಗುತ್ತಿರುವದರಿಂದ ನಮ್ಮ ಮನಸ್ಸಿನ ವಿವಕ್ಷಿತ ಗತಿಯನ್ನು ಭದ್ರ ವಾಗಿ ಕಾಯ್ದುಕೊಳ್ಳಬೇಕಾಗುತ್ತದೆ. ಹೀಗೆ ಮನಸ್ಸನ್ನು ಸಿದ್ಧಪಡಿಸಿಕೊಳ್ಳದಿದ್ದರೆ ನಮ್ಮ ಉನ್ನತಿಯು ಕುಂಠಿತವಾಗುವದು.

ಸುಧಾರಕ(ನಡುವೇ ಬಾಯಿ ಹಾಕಿ)—ರಾಯರೇ ಉನ್ನತಿಯನ್ನುವದು ಮನುಷ್ಯಮಾತ್ರರೆಲ್ಲರಿಗೂ ಒಂದೇ ಆಗಿರುವದಷ್ಟೇ; ಹೀಗಿದ್ದು ಅಂತ್ಯಜರನ್ನು ಏನೊಂದು ಕಾರಣದಿಂದ ಸಮಾಜದಿಂದ ಹೊರಗಿಟ್ಟರೆ ಅವರ ಉನ್ನತಿಯು ಹ್ಯಾಗಾಗಬೇಕು?

ಶಾಮರಾಯ—ತಮ್ಮಾ ಸುಧಾರಕಾ, ನೀನು ಉನ್ನತಿಯೆಂದು ಯಾತಕ್ಕೆ ಅನ್ನುತ್ತೀ? ಮೊದಲು ಉನ್ನತಿಯ ವ್ಯಾಖ್ಯೆಯನ್ನಾದರೂ ಹೇಳು.

ಸುಧಾರಕ—ಉನ್ನತಿಯೆಂದರೆ, ಸಮಾಜದಲ್ಲಿ ಪ್ರತಿಷ್ಠೆಯನ್ನು ಸಂಪಾದಿಸುವದು. ನಮ್ಮ ಅಂತ್ಯಜರನ್ನು ನಾವು ಮುಟ್ಟಿಸಿಕೊಳ್ಳದಿದ್ದರೆ, ಅವರೊಡನೆ ಬಳಿಕೆ ಮಾಡದಿದ್ದರೆ, ಅವರಿಗೆ ವಿದ್ಯಾ-ಬುದ್ಧಿಗಳನ್ನು ಕಲಿಸದಿದ್ದರೆ ಅವರಿಗೆ ಇಂಥ ಪ್ರತಿಷ್ಠೆಯು ಹ್ಯಾಗೆ ಪ್ರಾಪ್ತವಾಗುವದು?

ಶಾಮರಾಯ—ತಮ್ಮಾ, ಆತ್ಮೋನ್ನತಿಯ ಈ ಮಹಾ ವ್ಯಾಖ್ಯೆಯನ್ನು ಬಹು ಚನ್ನಾಗಿ ಹೇಳಿದೆ. ಸರಿ! ಸರಿ! ನೀನು ಹೇಳಿದ್ದೇ ಪರಮ ಶ್ರೇಷ್ಠವಾದ ಉನ್ನತಿಯಾಗಿದ್ದರೆ ಅದಕ್ಕೆ ಇಷ್ಟೊಂದು ಆಯಾಸವಾದರೂ ಯಾಕೆ ಬೇಕಾಗುತ್ತಿತ್ತು? ನೀನು ಹೇಳಿದ್ದು ಆತ್ಮೋನ್ನತಿಯಲ್ಲ; ಇಂಥ ವ್ಯಾಖ್ಯೆಗಳಿಂದಲೇ ನೀವು ಹಿಂದುಳಿದ ಜನಾಂಗ-ಹಿಂದುಳಿದ ಜನಾಂಗ ಎಂದು ಕಂಠ ಶೋಷಣ ಮಾಡಿಕೊಳ್ಳುತ್ತೀರಿ. ಇದು ಶುದ್ಧ ತಪ್ಪು; ಯಾಕಂದರೆ, ಪ್ರತಿಯೊಂದು ಜನಾಂಗವು ಲೌಕಿಕದಲ್ಲಿ ತನ್ನಷ್ಟಕ್ಕೆ ತಾನು ಪ್ರತಿಷ್ಠೆಯುಳ್ಳದ್ದೇ ಇರುತ್ತದೆ. ಇದಕ್ಕೂ ಆಧ್ಯಾತ್ಮ ವಿಷಯಕ್ಕೂ ಸಂಬಂಧವೇ ಇರುವದಿಲ್ಲ. ಪ್ರತಿಯೊಂದು ಜಾತಿಗೂ ಒಂದೊಂದು ಕುಲವಿದ್ಯೆಯಿರುವದರಿಂದ ಆಯಾವಿದ್ಯೆಗಳಲ್ಲಿ ಅವರು ನಿಪುಣರಿರುತ್ತಾರೆ. ಈಗಿನ ಕಾಲದಲ್ಲಿ ಇಂಗ್ಲಿಷ ವಿದ್ಯೆಯೇ ವಿದ್ಯೆಯು; ಅದರ ವ್ಯತಿರಿಕ್ತವಾದದ್ದು ವಿದ್ಯೆಯಲ್ಲವೆಂಬ ಸಂಜ್ಞೆಯು ಪ್ರಾಪ್ತವಾಗುತ್ತ ನಡೆದದೆ. ಇದು ಮೌಢ್ಯ ವಿಚಾರವೆಂದು ಯಾರು ತಾನೆ ಒಪ್ಪಲಾರರು? ಅರವತ್ತು ನಾಲ್ಕು ಕಲೆಗಳೂ ಹದಿನಾಲ್ಕು ವಿದ್ಯೆಗಳೂ ಜನಾಂಗದ ಪ್ರತಿಷ್ಠೆಗೋಸ್ಕರ ಸಿದ್ಧವಿರುವಾಗ, ಇವುಗಳಲ್ಲಾವುದೊಂದರ ಅವಲಂಬನ ಮಾಡಿದ ಜನಾಂಗವು ಅಶಿಕ್ಷಿತವೆಂದೂ, ಹಿಂದುಳಿದದ್ದೆಂದೂ ಹ್ಯಾಗೆ ಅನ್ನಲಿಕ್ಕೆ ಬರುವದು? ಕಲಾ ಶೂನ್ಯವಾದ ಮತ್ತು ವಿದ್ಯಾವಿರಹಿತವಾದ ಜನಾಂಗವು ಮಾತ್ರ ಹಿಂದುಳಿದದ್ದೆಂದು ಹೇಳಬಹುದು. ಇರಲಿ; ಪರಸ್ಪರರ ಸ್ಪರ್ಶನ-ಬಳಿಕೆಮಾಡೋಣ ಇವೇ ಈಗಿನ ಕಾಲದಲ್ಲಿ ಸಮಾಜ ಪ್ರೇಮವೃದ್ಧಿಗೆ ಕಾರಣಗಳೆಂದು ತಿಳವಳಿಕೆಯಾಗಿದೆ. ಆದರೆ ಇವು ನಿಜವಾದ

ಪ್ರೇಮವೃದ್ಧಿಯ ಕಾರಣಗಳಲ್ಲ. ಪರಸ್ಪರರು ತಮ್ಮ ಕುಲವಿದ್ಯೆಗಳಲ್ಲಿ ನಿಪುಣರಾಗಿ ತಮ್ಮ ವಿದ್ಯೆಯನ್ನು ಪರಸ್ಪರರಲ್ಲಿ ವಿನಿಮಯಿಸುತ್ತ ಹೋಗುವದೇ ಜಾತಿ ಜಾತಿಗಳ ಸ್ನೇಹಾಭಿವೃದ್ಧಿಗೆ ಕಾರಣವಾಗಿದೆ. ಸುವ್ಯವಸ್ಥೆಯ ಸಮಾಜ ರಚನೆಯಲ್ಲಿ ಒಂದು ಘಟಕವಾದ ಅಂತ್ಯಜ ವರ್ಗವು ಸರ್ವರಿಗೂ ಪ್ರಿಯವೂ, ಅವಶ್ಯವೂ ಆಗಿದೆ. ಈ ವ್ಯಾವಹಾರಿಕ ವಿಷಯವನ್ನು ಆಧ್ಯಾತ್ಮಿಕದಲ್ಲಿ ಬೆರೆಯಿಸಿ, ಅದಕ್ಕೆ ಪಾತ್ರವಾದ ಸಮಾಜವನ್ನು ಹಾಳು ಮಾಡುವದು ವಿಹಿತವಲ್ಲ.

ಸುಧಾರಕ—ರಾಯರೇ, ಈ ದಿನ ಈ ವಿಷಯವನ್ನು ಇಲ್ಲಿಗೇ ನಿಲ್ಲಿಸಿ ಬೇರೆ ವಿಷಯವನ್ನು ವಿವೇಚಿಸಿರಿ. ಈ ವಿಷಯವಾಗಿ ಕೊನೆಗೆ ಮಾತಾಡೋಣವಂತೆ!

ಶಾಮರಾಯ—ಹಾಗಾದರೆ ಈಗ ನಿನಗೆ ಯಾವ ವಿಷಯವನ್ನು ಹೇಳಬೇಕು?

ಸುಧಾರಕ—ಯಾವ ವಿಷಯವೆಂದು ಕೇಳುವದೇನು? ನಿಮ್ಮ ಕಡೆಗೆ ನಾವು ಯಾವ ವಿಷಯವನ್ನು ಕೇಳಬೇಕೆಂದು ಬಂದಿರುವೆವೋ ಅದೇ ವಿಷಯವನ್ನೇ ಮುಂದೆ ಸಾಗಿಸಬೇಕು.

ಶಾಮರಾಯ—ಹಾಗಲ್ಲಪ್ಪಾ, ಅಂತ್ಯಜ ಸಂಪರ್ಕವು ಇದೇ ವಿಷಯದೊಳಗಿನದೊಂದು ಭಾಗವಿದ್ದು, ಅದನ್ನು ನೀನು ಈಗ ಬೇಡವೆಂದು ಹೇಳಿದ್ದರಿಂದ ಮತ್ತಾವ ಭಾಗದಲ್ಲಿ ಪ್ರಶ್ನ ಮಾಡುತ್ತೀ ಎಂದು ಕೇಳಿದೆನು. ನೀನು ಬಾಯಿಬಿಚ್ಚಿ ಪ್ರಶ್ನ ಮಾಡಿದ ಹೊರತು ನಿನಗೆ ಇಂಥ ವಿಷಯವನ್ನೇ ಹೇಳಬೇಕೆಂಬುವದು ನನಗೆ ಹ್ಯಾಗೆ ತಿಳಿಯಬೇಕು?

ಸುಧಾರಕ(ಮನಸ್ಸಿನಲ್ಲಿ)—ಈಗ ಇವರನ್ನು ಯಾವ ವಿಷಯವಾಗಿ ಕೇಳಬೇಕಾಯಿತು? ಹ! ತಿಳಿಯಿತು. ಮೊದಲು ಮನಸಿನ ವಿಷಯವಾಗಿ ಕೇಳುವಾ. (ಪ್ರಕಟವಾಗಿ)ರಾಯರೇ, ಮಾನಸಿಕ ಉನ್ನತಿಯು ಶ್ರೇಷ್ಠವಾದದ್ದು, ಸ್ಥೂಲ-ಸೂಕ್ಷ್ಮಗಳೆರಡರಿಂದಲೂ ಮನಸ್ಸಿನ ಮೇಲೆ ಪರಿಣಾಮವಾಗುವದು; ಮನಸ್ಸೇ ಎಲ್ಲಕ್ಕೂ ಮೂಲ ಕಾರಣ; ಎಂಬ ವಿಷಯಗಳನ್ನು ಹೇಳಿದಿರಷ್ಟೇ; ಆದರೆ ಮನಸ್ಸೆಂದರೆ ಯಾವದು? ಅದರ ಸ್ವರೂಪವೇನು? ಎಂಬದರ ವಿಷಯವಾಗಿಯೇ ಮೊದಲು ಹೇಳಿರಿ.

ಶಾಮರಾಯ—ಯೋಗ್ಯ ಪ್ರಶ್ನ ಮಾಡಿದೆ; ಈ ಮನಸ್ಸಿನ ವಿಚಾರದಿಂದ ನಿನ್ನಲ್ಲಿ ಯೋಗ್ಯ ವಿವೇಕವು ಅಂಕುರಿಸಬಹುದಾಗಿದೆ. ಈ ವಿಷಯವು ಸ್ವಲ್ಪ ಗಡಚಾಗಿದೆ. ಅದರೂ ನಿನ್ನ ಪ್ರಶ್ನಗೆ ಉತ್ತರ ಹೇಳುವೆನು ಕೇಳು. ವಾಸ್ತವ

ವಾಗಿ ವಿಚಾರಿಸಿದರೆ ಮನಸ್ಸೆಂಬದು ಬಹು ಗೂಢವಿರುತ್ತದೆ. ಕೆಲವರು "ಮನಸ್ಸೆಂದರೆ ಬೇರೆ ಏನೂ ಇಲ್ಲ; ಕೇವಲ ಕಲ್ಪನೆಗಳಿಗೆ ಮನಸ್ಸೆಂಬ ಸಂಜ್ಞೆಯಿರುತ್ತದೆ''ಂದು ಹೇಳುತ್ತಾರೆ; ಕೆಲವರು ''ಇಂದ್ರಿಯ ಸಮುಚ್ಚಯಗಳಿಂದ ಕ್ರಿಯಾರೂಪವನ್ನು ಉತ್ಪನ್ನ ಮಾಡುವ ಶಕ್ತಿಯೇ ಮನಸ್ಸೆಂದು ಕರೆಯುತ್ತಾರೆ.'' ಅಧ್ಯಾತ್ಮ ವಿಚಾರದವರು ಮನಸ್ಸಿಗೆ—ಸ್ವತಂತ್ರ ಶಕ್ತಿ ರೂಪ ಸೂಕ್ಷ್ಮ ದೇಹದೊಳಗಿನ ಇಂದ್ರಿಯವೆಂದು ಭಾವಿಸುತ್ತಾರೆ. ಅದು ಹ್ಯಾಗೇ ಇರಲಿ; ಮನಸ್ಸಿನ ಶುದ್ಧ ಸ್ವರೂಪವು ಹ್ಯಾಗಿರುವದೆಂಬದು ಆದನ್ನೇ ಅಭ್ಯಾಸಿಸಿದ ಹೊರತು ತಿಳಿಯದು! ಆದರೂ ಮನಸ್ಸಿನ ವಿಕೃತ ಸ್ಥಿತಿಯ ಅನುಭವವು ಸಮಸ್ತರಿಗೂ ಇದ್ದೇ ಇರುವದು. ಪ್ರತಿಯೊಬ್ಬನಿಗೆ ಮನಸ್ಸಿನದೆಂದು ಯಾವದೊಂದು ಕ್ರಿಯೆಯ ಭಾಸವಾಗಿಯೇ ಆಗುವದು. ಆ ಕ್ರಿಯೆಯ ಮೇಲಿಂದ ಮನಸ್ಸಿನ ಬೋಧವು ಸಹಜವಾಗುತ್ತದೆ.

ಎಲ್ಲ ಕಡೆಗೂ ಹವೆಯು ತುಂಬಿಕೊಂಡಿರುತ್ತದೆ; ಆದರೆ ಅದು ಕಣ್ಣಿಗೆ ಕಾಣುವದಿಲ್ಲ; ಕೋಣೆಯಲ್ಲಿ ಸ್ವಸ್ಥವಾಗಿ ಕುಳಿತಿರುವಾಗಲೂ ತ್ವಗಿಂದ್ರಿಯಕ್ಕೆ ಗೋಚರಿಸುವದಿಲ್ಲ. ಆದರೆ ಆ ಹವೆಯಲ್ಲಿ ಯಾವಾಗ್ಗೆ ಗತಿಯುತ್ಪನ್ನವಾಗುವದೋ ಆಗ್ಗೆ ಅದರ ಸ್ಪಷ್ಟ ಅನುಭವವು ಬರಹತ್ತುತ್ತದೆ. ಆಕಾಶದಲ್ಲಿ ಭ್ರಮಿಸುವ ಧೂಳಿಯಿಂದ ಹವೆಯು ಚಕ್ರಾಕಾರವಾಗಿ ತಿರುಗುತ್ತದೆಂಬದು ಭಾಸವಾಗುತ್ತದೆ. ಝುಂಝಾವಾತದಿಂದ ವೃಕ್ಷಾದಿಗಳು ನೆಲಕ್ಕುರುಳಲು ಹವೆಯಲ್ಲಿ ಸಾಮರ್ಥ್ಯವಿದೆಯೆಂಬದು ಅನುಭವಕ್ಕೆ ಬರುತ್ತದೆ; ಮತ್ತು ಶ್ವಾಸೋಚ್ಛ್ವಾಸದಿಂದ ಹವೆಯು ಸರ್ವತ್ರವ್ಯಾಪಿಸಿರುವದೆಂಬದು ತಿಳಿಯುತ್ತದೆ.

ಈ ಮೇರೆಗೆ ಸೂಕ್ಷ್ಮ ದ್ರವ್ಯರೂಪದಲ್ಲಿರುವ ಶಕ್ತಿಯು ಅದರ ಗತಿಯ ಮೇಲ್ಲಿಂದಲೇ ನಮ್ಮ ಅನುಭವಕ್ಕೆ ಬರುತ್ತದೆ. ಗತಿಯ ಹೊರತು ಆ ಶಕ್ತಿಯನ್ನು ಕಂಡು ಹಿಡಿಯುವದಕ್ಕೆ ಬೇರೆ ಮಾರ್ಗವಿಲ್ಲ. ಎಲ್ಲಿಯ ವರೆಗೆ ಆ ಶಕ್ತಿಯಲ್ಲಿ ಗತಿಯು ಉತ್ಪನ್ನವಾಗಿಲ್ಲವೋ ಮತ್ತು ಅದು ಎಲ್ಲಿಯ ವರೆಗೆ ಸ್ತಬ್ಧವಾಗಿರುವದೋ ಅಲ್ಲಿಯ ವರೆಗೆ ಆ ಶಕ್ತಿಯು ಅಸ್ತಿತ್ವದಲ್ಲಿದ್ದರೂ ಅದರ ಭಾಸವು ನಮಗಾಗುವದಿಲ್ಲ. ಶಕ್ತಿಯು ಇರುವದೇನೋ ನಿಜ; ಆಗ ಶಕ್ತಿಯು ಯಾವ ಸ್ವರೂಪದಲ್ಲಿರುವದೋ ಆ ಸ್ವರೂಪವೇ ಅದರ ಮೂಲ ರೂಪವು. ಅದಕ್ಕೆ ಅವಿಕೃತ ರೂಪವೆಂದು ಕರೆಯಬಹುದು. ಈ ಸೂಕ್ಷ್ಮ ಶಕ್ತಿಯ ಸ್ಥಿತಿಯು ಹ್ಯಾಗೋ ಹಾಗೆ ಮನಸ್ಸಿನ ಸ್ಥಿತಿಯೂ ಇರುತ್ತದೆ. ಈ ಮೇಲಿನ ವಿವೇಚನೆಯು ಮನಸ್ಸಿ

ನ ಸ್ಥಿತಿಗೆ ಅನುರೂಪವಾಗಿರುತ್ತದೆ. ಅದನ್ನು ಸ್ಪಷ್ಟೀಕರಿಸುವದಕ್ಕೇ ಈ ಉದಾಹರಣೆಯನ್ನು ತಕ್ಕೊಂಡಿರುತ್ತೇವೆ. ಇರಲಿ;

ಮನಸಿನಲ್ಲಿ ಯಾವಾಗ್ಗೆ ಗತಿಯುತ್ಪನ್ನವಾಗಿಲ್ಲವೋ, ಅಂದರೆ ಯಾವಾಗ್ಗೆ ಅದರಲ್ಲಿ ಕ್ರಿಯೆಗಳು ನಡೆದಿಲ್ಲವೋ ಆಗ್ಗೆ ಅದರ ಜ್ಞಾನವು ನಮಗೆ ಆಗುವದಿಲ್ಲೆಂಬದು ಸಹಜವಷ್ಟೇ; ಇದೇ ಮನಸ್ಸಿನ ಮೂಲಸ್ಥಿತಿಯು; ಇದಕ್ಕೆ ಸ್ಥೂಲ ಮಾನದಿಂದ ಅವಿಕೃತ ಅಥವಾ ಮೂಲ ಸ್ವರೂಪವೆಂದು ಅನ್ನುವರು. ಈ ಮೂಲ ಸ್ವರೂಪದ ಜ್ಞಾನವು ನಮಗೆ ಆಗದ್ದರಿಂದ ನಾವು ಯಾವಾಗಲೂ ಅದರ ಕ್ರಿಯೆಗಳ ಸಮುಚ್ಚಯಕ್ಕೇ ಮನಸ್ಸೆಂಬ ಸಂಜ್ಞೆಯನ್ನು ಕೊಡುತ್ತೇವೆ. ಈ ಕ್ರಿಯಾನುಭವದ ಸ್ವರೂಪವಂತೆ ಬೇರೆ ಬೇರೆ ರೀತಿಯಾಗಿ ಅದರ ಸ್ಥಿತಿಯಿರುತ್ತದೆ. ಮನಸ್ಸಿನ ಮೂಲಸ್ವರೂಪದಲ್ಲಿ ಯಾವ ಪ್ರಥಮ ಗತಿಯು ಉತ್ಪನ್ನವಾಗುತ್ತದೆಯೋ ಅದಕ್ಕೆ ನಿರ್ವಿಕಲ್ಪ ಸ್ಫುರಣವೆಂಬ ಸಂಜ್ಞೆಯು; ಇದರಲ್ಲಿ ಕಳನಾ, ಸಂವೇದನಾ, ಭಾಸನಾ, ಭಾವನಾ, ಮತ್ತು ಕಲ್ಪನಾ ಎಂಬ ಭೇದಗಳಿರುತ್ತವೆ. ಈ ಮನಸಿನ ಸ್ವರೂಪಕ್ಕೆ ಅಂತಃಕರಣವೆಂಬ ಪಾರಿಭಾಷಿಕ ಸಂಜ್ಞೆಯಿರುತ್ತದೆ. ಈ ಅಂತಃಕರಣ ಕ್ರಿಯೆಯ ಸ್ಮರಣ ಅಥವಾ ವಿಸ್ಮರಣ ರೂಪೀ ಕ್ರಿಯೆಯುಂಟಾಗುವದಕ್ಕೆ ಚಿತ್ತವೆಂಬ ಹೆಸರು; ಈ ಚಿತ್ತಕ್ರಿಯೆಯಲ್ಲಿ ಸಂಕಲ್ಪ-ವಿಕಲ್ಪ ರೂಪೀ ಕ್ರಿಯೆಯ ಸ್ವರೂಪವುಂಟಾಗುತ್ತದೆ. ಅದಕ್ಕೇ ಮನಸ್ಸೆಂದು ಕರೆಯುವರು. ಸಂಕಲ್ಪ-ವಿಕಲ್ಪಕ ಸ್ಥಿತಿಯು ಲಯ ಹೊಂದಿ ಅವುಗಳಲ್ಲಿ ಒಂದೇ ನಿಶ್ಚಿತ ಸ್ಥಿತಿಯುಂಟಾಗುತ್ತದೆ. ಈ ನಿಶ್ಚಿತ ಸ್ವರೂಪಕ್ಕೆ ಬುದ್ಧಿಯನ್ನುತ್ತಾರೆ. ಈ ನಿಶ್ಚಯದ ಕರ್ತೃತ್ವದ ಸಂಬಂಧದ ಸಂಕುಚಿತ ರೂಪೀ ಸಂಸ್ಕಾರವೇ ಅಹಂಕಾರವು.

ಈ ಮೇರೆಗೆ (೧) ಅಂತಃಕರಣ, (೨) ಚಿತ್ತ, (೩) ಮನಸ್ಸು, (೪) ಬುದ್ಧಿ, (೫) ಅಹಂಕಾರಗಳೆಂಬ ಐದು ಬಗೆಯ ಕ್ರಿಯಾ ರೂಪಗಳಿಂದ ನಮಗೆ ಮನಸ್ಸಿನ ಬೋಧೆಯಾಗುತ್ತದೆ. ಅಂದರೆ ಐದು ಗತಿಗಳಿಂದ ಅದು ನಮ್ಮ ಪ್ರತ್ಯಯಕ್ಕೆ ಬರುತ್ತದೆ. ಆದ್ದರಿಂದ ಈ ಗತಿ ಸಮುಚ್ಚಯಕ್ಕೇ ನಾವು ಮನಸ್ಸೆಂದು ಅನ್ನುತ್ತೇವೆ. ಮನಸ್ಸಿನ ಅಂತಃಕರಣ ಪಂಚಕವೆಂದರೆ, ಬೇರೆ ಬೇರೆ ಬಗೆಯ ಗತಿ ಅಥವಾ ತರಂಗಗಳಿರುತ್ತವೆ. ಯಾವ ಕಾಲಕ್ಕೆ ಈ ಮೇಲೆ ವಿವರಿಸಿದಂತೆ ಮನಸ್ಸಿನ ಯಾವದೊಂದು ಗತಿಯು ಉದ್ಭವಿಸುತ್ತದೆಯೋ ಆ ಕಾಲಕ್ಕೆ ಅಂತಃಪ್ರಕಾಶವನ್ನು ನಿರ್ಮಿಸುವಂಥ ಸೂಕ್ಷ್ಮ ದ್ರವ್ಯಗಳಲ್ಲಿ ಗತಿಯ ಸಂಸ್ಕಾರವಾಗಿ ಆ ಆ ವಿಚಾರರೂಪೀ ಆಕೃತಿಗಳು ಉತ್ಪನ್ನವಾಗುತ್ತಿರುತ್ತವೆ.

ಸುಧಾರಕ, ಈ ಪ್ರಕಾರ ಮನಸ್ಸಿನ ವಿವೇಚನೆಯಿರುತ್ತದೆ. ಇದರಿಂದ ನಿನಗೆ ಮನಸ್ಸೆಂದು ಯಾತಕ್ಕೆ ಅನ್ನಬೇಕೆಂದು ಗೊತ್ತಾಗಿರಬಹುದು. ಇನ್ನು ಈ ಮನೋಧರ್ಮದ ವಿಷಯವಾಗಿ ಕೆಲವು ಸಂಗತಿಗಳನ್ನು ಹೇಳುತ್ತೇನೆ ಕೇಳು. ಯಾವದೊಂದು ಗತಿಯು ನಮ್ಮ ಮನಸಿನಲ್ಲಿ ಉತ್ಪನ್ನವಾದಾಗ ಎಷ್ಟೋ ಪ್ರಸಂಗಗಳಲ್ಲಿ ಆದರಲ್ಲಿ ಅನ್ಯಗತಿಯು ಪ್ರವೇಶ ಮಾಡಲಿಕ್ಕೆ ಸ್ವಲ್ಪವೂ ಅವಕಾಶ ಸಿಕ್ಕುವದಿಲ್ಲ, ಎಂಬದು ನಮ್ಮ ಅನುಭವಕ್ಕೆ ಬರುತ್ತದೆ. ಇದರ ಕಾರಣವೇನಂದರೆ— ನಮ್ಮ ಮನಸಿಗೂ ಮತ್ತು ಆ ಗತಿ ವಿಶಿಷ್ಟಕ್ಕೂ ಇರುವ ಸಂಬಂಧವು ಸ್ಥೂಲ ರೂಪದಿಂದ ಇಂದ್ರಿಯ ದ್ವಾರಾ ಇಲ್ಲವೆ ಸೂಕ್ಷ್ಮ ರೂಪದಿಂದ ಪ್ರತ್ಯಕ್ಷ ಮನಸ್ಸಿನವರೆಗೆ ತಲುಪಿ ಗತಿ ಉತ್ಪನ್ನ ಮಾಡುವ ಶಕ್ತಿಯು ಮೇಲೆ ತನ್ನ ಸಂಸ್ಕಾರದ ಕಸುವನ್ನು ಹೆಚ್ಚಿಸುತ್ತದೆ. ಇದು ಹ್ಯಾಗಂದರೆ ಇದಕ್ಕೆ ಒಂದು ಸ್ಥೂಲ ಉದಾಹರಣೆಯನ್ನು ತಕ್ಕೊಳ್ಳೋಣ.

ಯಾವದಾದರೊಂದು ಧಾತುಮಯ ಪಾತ್ರೆಯ ಬಳಿಯಲ್ಲಿ ಉರಿಯುತ್ತಿರುವ ಅಗ್ಗಿಷ್ಟಿಗೆಯನ್ನು ಇಟ್ಟಿದೆಯೆಂದು ತಿಳಿಯುವಾ; ಆ ಅಗ್ಗಿಷ್ಟಿಗೆಯೊಳಗಿನ ಬೆಂಕಿಯಿಂದ ಮೊದಲು ಆ ಪಾತ್ರೆಯಲ್ಲಿ ಅಗ್ಗಿಷ್ಟಿಗೆಯ ಕಡೆಗಿದ್ದ ಭಾಗವು ಮಾತ್ರ ಕಾಯುವದು. ಪಾತ್ರೆಯ ಉಳಿದ ತಣ್ಣನ್ನ ಭಾಗವು ಅದನ್ನು ತಣ್ಣಗೆ ಮಾಡಲಿಕ್ಕೆ ಪ್ರಯತ್ನಿಸುತ್ತಿದ್ದರೂ ಅದು ಕಾಯುವದು. ಆ ಭಾಗವು ಕಾಯ್ದದ್ದು ನಮಗೆ ಸ್ಪರ್ಶದಿಂದ ಗೊತ್ತಾಗುತ್ತದೆ. ಇಲ್ಲಿ ಪಾತ್ರೆಗೆ ಪ್ರತ್ಯಕ್ಷ ಬೆಂಕಿಯು ತಗಲದಿದ್ದರೂ ಅದು ಕಾಯುತ್ತದಷ್ಟೇ; ಅಂದರೆ ಇಲ್ಲಿ ಯಾವ ಯಾವ ಕ್ರಿಯೆಗಳು ನಡೆಯುತ್ತವೆಂಬದನ್ನು ನಿರೀಕ್ಷಿಸುವಾ;

ಮೊದಲು ಇದ್ದಲಿಯ ಪರಮಾಣುಗಳಲ್ಲಿ ಬೇರೆ ಯಾವದೊಂದು ಸುಡುವ ಪದಾರ್ಥದಿಂದ ವಿವಕ್ಷಿತ ಗತಿಯುಂಟಾಗುತ್ತದೆ. ಮತ್ತು ಅವರಿಂದ ಇದ್ದಲಿಯ ಯಾವದೊಂದು ಭಾಗದ ಪರಮಾಣುಗಳು ವಿವಕ್ಷಿತ ಗತಿಯಿಂದ ಚಲನವಲನ ಕ್ರಿಯೆಯನ್ನು ನಡೆಸುತ್ತವೆ. ಆಗ ನಾವು ಬೆಂಕಿ ಹೊತ್ತಿತೆಂದು ಅನ್ನುವೆವು. ಆದರ ಈ ಗತಿಯು ಹಾಗೆಯೇ ಸಾಗಲಿಕ್ಕೆ ಆಕ್ಸಿಜನವು ಸಹಾಯಕಾರಿಯಾಗುತ್ತದೆ. ಇದು ಆ ಪರಮಾಣಗಳೊಳಗಿನ ಗತಿಪ್ರವಾಹ ವಾಯುವಿಗೆ ಕೂಡಿತೆಂದರೆ, ಕೆಲವು ಪರಮಾಣುಗಳ ತರಂಗವು ಏಳುವದು. ಆದರಿಂದ ನಮಗೆ ಪ್ರಕಾಶವು ಗೋಚರಿಸುವದು.

ಬೆಂಕಿಯೆಂದರೆ, ಇದ್ದಲಿಯ ಪರಮಾಣುಗಳ ಗತಿಯು ತೀರಾ ಪರಿಣಾವ

ಧಿಯೆಂದು ಹೇಳಬಹುದು. ಈ ಮರ್ಯಾದೆಗಿಂತ ಗತಿಯು ಹೆಚ್ಚಾದರೆ ಇದ್ದಲಿಯ ಪರಮಾಣುಗಳು ಲಯವಾಗುತ್ತವೆ. ಅಂದರೆ ಅವು ಸೂಕ್ಷ್ಮ ರೂಪದಲ್ಲಿ ರೂಪಾಂತರವನ್ನು ಹೊಂದಿ ಈ ಗತಿ ಪರಮಾಣುವಿನಿಂದ ಸ್ವತಂತ್ರವಾಗುತ್ತವೆ. ಆಗ ನಾವು ಇದ್ದಲಿಯ ಆ ಭಾಗವು ಭಸ್ಮೀಭೂತವಾಯಿತೆಂದು ಅನ್ನುತ್ತೇವೆ. ಪದಾರ್ಥದಲ್ಲಿ ಒಂದೇ ಬಗೆಯ ಗತಿಯು ಎಲ್ಲಿಯ ವರೆಗೆ ಇರುವದೋ ಅಲ್ಲಿಯ ವರೆಗೆ ಆ ಪದಾರ್ಥವು ಒಂದೇ ಸ್ವರೂಪದಲ್ಲಿರುತ್ತದೆ. ಗತಿಯಲ್ಲಿ ಹೆಚ್ಚು ಕಡಿಮೆಯುಂಟಾಗಲು ಪದಾರ್ಥದ ಸ್ಥಿತಿಯಲ್ಲಿಯೂ ಹೆಚ್ಚು ಕಡಿಮೆಯಾಗುವದು. ಇದ್ದಲಿಯ ಪರಮಾಣುಗಳ ಮೂಲ ಗತಿಯಲ್ಲಿ ಚಾಂಚಲ್ಯವುಂಟಾಗಿ ಅದಕ್ಕೆ ಬೆಂಕಿಯ ಸ್ವರೂಪವು ಪ್ರಾಪ್ತವಾದಾಗ ಅದು ತನ್ನ ಗತಿಗೆ ಹೊಂದಿ ಇರುವ ವಾಯುವಿಗೆ ಗತಿಯನ್ನು ಕೊಟ್ಟು ಅದರಲ್ಲಿ ಹೆಚ್ಚು ಕಡಿಮೆಯನ್ನುಂಟು ಮಾಡುವದು. ಆದ್ದರಿಂದ ಆ ಧಾತುಮಯ ಪಾತ್ರೆಯ ಆ ಭಾಗದೊಳಗಿನ ಪರಮಾಣುಗಳು ವಿವಕ್ಷಿತ ಗತಿಯಿಂದ ಚಲನ ವಲನ ಕ್ರಿಯೆಯನ್ನು ತಾಳುವವು. ಈ ಕ್ರಿಯೆಯ ಧಾರಣಕ್ಕೇ ನಾವು ಪಾತ್ರೆಯು ಬಿಸಿಯಾಯಿತೆಂದು ಅನ್ನುವೆವು. ಇದ್ದಲಿಯ ಬೆಂಕಿಗೆ ಬೆರಳು ಹಿಡಿದರೆ ಬರುವ ಅನುಭವವು ಅದೇ ಗತಿಯಿಂದ ಸುಡುವ ಪಾತ್ರೆಯ ಮೇಲೆ ಹಿಡಿದರೆ ಬರುವದು. ಇದೇ ಉಷ್ಣತೆಯು. ಈ ಉಷ್ಣತೆಯ ಪರಮಾಣುಗಳ ಗತಿಯ ವೇಗ ಹಾಗು ಸ್ಥಲಾವಕಾಶಗಳು ವೃದ್ಧಿಂಗತವಾಗುತ್ತವೆ. ನಮ ಚರ್ಮ ಚಕ್ಷುವಿಗೆ ತೋರುವ ಈ ವಿಚಾರವು ಕೂಡಾ ಆ ಶಾಸ್ತ್ರದಲ್ಲಿ ತಜ್ಞರಾದವರ ಹೊರತು ಅನ್ಯರಿಗೆ ತಿಳಿಯು[illegible] [illegible]ಣವಿರುತ್ತದೆ.

ಈ ಸ್ಥೂಲ ವ್ಯಾಪಾರಗಳ ಸ್ಥಿತಿಯೇ ಹೀಗಿರಲು, ಮನೋವ್ಯಾಪಾರಗಳ ವಿಚಾರವು ಸುಲಭವಾಗಿ ತಿಳಿಯುವ ಬಗೆ ಹೇಗೆ? ಈ ಗತಿಯುಕ್ತ ಸ್ಥೂಲ ಪದಾರ್ಥಗಳು ಸ್ಥೂಲ ಪದಾರ್ಥಗಳ ಮೇಲೆ ಪರಿಣಾಮವನ್ನುಂಟು ಮಾಡುವಂತೆ ಸ್ಥೂಲ ಪದಾರ್ಥಗಳಲ್ಲುಂಟಾದ ಸ್ಥೂಲ ಮತ್ತು ಸೂಕ್ಷ್ಮ ಗತಿಯ ಪರಿಣಾಮವು ಮನಸಿನ ಮೇಲೆ ಸ್ಥೂಲ-ಸೂಕ್ಷ್ಮಮಾರ್ಗಗಳಿಂದಲೇ ಆಗಿ ಅದರಲ್ಲಿ ಚಾಂಚಲ್ಯವನ್ನುಂಟು ಮಾಡುತ್ತದೆ. ಈ ಚಾಂಚಲ್ಯವೇ ಮನೋವ್ಯಾಪಾರವು ಅನಂತ ಬಗೆಯಾಗುವದಕ್ಕೆ ಕಾರಣವಾಗುತ್ತದೆ.

ಈ ಮೇಲಿನ ಉದಾಹರಣೆಯಲ್ಲಿ ಅಗ್ಗಿಷ್ಟಿಗೆಯೊಳಗಿನ ಉಷ್ಣತೆಯು ನಮಗೆ ಗೋಚರಿಸದ ಹಾಗೆ ಪಾತ್ರೆಯಲ್ಲಿ ಸೇರಿಕೊಂಡಂತೆ ಸ್ಥೂಲ ಪದಾರ್ಥಗಳಲ್ಲಿ ಉಂಟಾಗುವ ಗತಿಯು ಮನಸಿನ ಮೇಲೆ ಬಲವಾದ ಪರಿಣಾಮವನ್ನುಂಟು ಮಾಡು

ತ್ತದೆ. ಅಂತೇ ತಮ್ಮ ಪ್ರಗತಿಗೆ ವಿರುದ್ಧ ಗತಿಯುಳ್ಳವರ ಸಂಗವನ್ನು ಮಾಡಲಾಗದೆಂದು ಕಟ್ಟು ಮಾಡಲ್ಪಟ್ಟಿದೆ. ಮತ್ತು ಉನ್ನತಿಗೆ ಸಹಾಯ ಮಾಡುವ ಗತಿಗೆ ಮಡಿಯೆಂತಲೂ ವಿರೋಧವಾದದ್ದಕ್ಕೆ ಮೈಲಿಗೆಯೆಂತಲೂ ಗೊತ್ತುಪಡಿಸಲ್ಪಟ್ಟಿದೆ.

ಸುಧಾರಕ—ರಾಯರೇ, ಮನಸಿನ ವಿವೇಚನೆಯನ್ನು ಕೇಳಿ ಸಂತೋಷವಾಯಿತು. ಮನಸ್ಸು ಸ್ಥಿರವಾಗುವದಕ್ಕೆ ಮಡಿ-ಮೈಲಿಗೆಯ ಸಾಧನಗಳು ರೂಢಿಯಲ್ಲಿ ಬಂದವೆಯೆಂಬಂತಾಯಿತು. ಇದು ನಿಜವೆಂದು ನನಗೆ ತೋರುತ್ತದೆ. ಯಾಕಂದರೆ, ಮಡಿ-ಮೈಲಿಗೆಗಳನ್ನು ಪಾಲಿಸದಿದ್ದ ನಮಗೆ ಅಂದರೆ ಯಾವ ಕಟ್ಟಿನಲ್ಲಿಯೂ ಇರದೆ ಇದ್ದ ನಮಗೆ ಮನಸ್ಸನ್ನು ಬಿಗಿ ಹಿಡಿಯಲಿಕ್ಕೆ ಬರುವದಿಲ್ಲ. ನಾವು ಎಷ್ಟು ಪ್ರಯತ್ನಪಟ್ಟರೂ ಅದು ಪಾದರಸದಂತೆ ನಮಗೆ ಸಿಕ್ಕದೆ ಹೋಗುವದು. ಆದ್ದರಿಂದ ಮನಸ್ಸಿನಲ್ಲಿ ಯಾವಾಗಲೂ ಸಮಾಧಾನವಿಲ್ಲದೆ ತೊಂದರೆಪಡುತ್ತಿರುವೆವು. ಮನಸ್ಸನ್ನು ನಿಯಮನ ಮಾಡುವ ಶಕ್ತಿಯುಂಟಾಗಬೇಕಾದರೆ ಯಾವದೊಂದು ವಿಶಿಷ್ಟ ಪದ್ಧತಿಯ ನಿಯಮವನ್ನು ಪಾಲಿಸಬೇಕೆಂಬದು ನನ್ನ ಮನಸ್ಸಿಗೆ ಹೊಳೆಯಹತ್ತಿದೆ. ನಮ್ಮ ಪ್ರಾಚೀನರು ಬಹು ಅನುಭವದಿಂದ ಕಂಡು ಹಿಡಿದ ಈ ನಿಯಮಗಳು ನಮಗೆ ಪ್ರಗತಿಪರವಾಗಿವೆಯೆಂಬದಕ್ಕೆ ಸಂದೇಹವಿಲ್ಲ.

ಶಾಮರಾಯ—ವಿದ್ಯಾವಂತರಾದವರು ತಮ್ಮ ಬುದ್ಧಿಯನ್ನು ಖರ್ಚು ಮಾಡಿ ಒಳ್ಳೇ ಮಾರ್ಗವಾವುದು; ಕೆಟ್ಟ ಮಾರ್ಗವಾವುದು ಎಂಬದನ್ನು ಗೊತ್ತು ಮಾಡಿಕೊಳ್ಳಬೇಕು. ನಮ್ಮ ಜನರು ಬರಿಯ ಅನುಕರಣ ಪ್ರಿಯರಿದ್ದದರಿಂದ ವಿದ್ಯಾವಂತರಾದವರು ಅಂದರೆ ಪಾಶ್ಚಾತ್ಯ ಸಂಸ್ಕೃತಿಯನ್ನು ಹೊಂದಿದವರೆಲ್ಲರು ಪರಧರ್ಮೀಯರ ನಡಾವಳಿಗೆ ಮರುಳಾಗಿ ಸ್ವಧರ್ಮವನ್ನು ಮರೆತುಬಿಟ್ಟರು. ಆರ್ಯಸಂಸ್ಕೃತಿಯುಳ್ಳವರು ಹೆಚ್ಚಿನ ವಿಚಾರ ಮಾಡದೆ ಸಮಂಜಸ ಹಾಗು ಅಸಮಂಜಸ ಆಚರಣೆಗಳನ್ನು ಮೌನದಿಂದ ಆಚರಿಸಹತ್ತಿದರು. ಇದಲ್ಲದೆ ಅಧ್ಯಾತ್ಮಿಕ ವಿಚಾರಕ್ಕೆ ಪ್ರಾಶಸ್ತ್ಯವಿಲ್ಲದ ಪಾಶ್ಚಾತ್ಯ ಸಂಸ್ಕೃತಿಯಿಂದ ಸಿದ್ಧವಾದ ಪುರುಷರು ಸ್ವಧರ್ಮ ನಿಬಂಧನಗಳನ್ನು ಮುರಿದದ್ದರಿಂದ ಅವರ ಅನುಕರಣವನ್ನು ಬಹು ಜನರು ಮಾಡಿದರು. ಶಾಸ್ತ್ರ ವಿಚಾರವಿಲ್ಲದ ಬರಿಯ ಹೆಣ್ಣು ಮಕ್ಕಳಲ್ಲಿಯೇ ಮಡಿ-ಮೈಲಿಗೆಯ ವಿಚಾರವು ಈಗ ಉಳಿದಂತಾಗಿದೆ. ಆದ್ದರಿಂದ ಈಗಿನ ಕಾಲದಲ್ಲಿ ಬಳಕೆಯಲ್ಲಿರುವ ಮಡಿ-ಮೈಲಿಗೆಯ ವಿಷಯವಾಗಿ ಕೆಲವು ಸಂದರ್ಭಗಳಲ್ಲಿ ನಮ್ಮ ಜನರಿಂದ ಕೆಲವು ತಪ್ಪುಗಳಾಗುತ್ತವೆ. ಅವನ್ನು ಸರಿಪಡಿಸಿಕೊಂಡು ಆತ್ಮೋನ್ನತಿಯನ್ನು ಅಂದರೆ ಮನೋಬಲವನ್ನು ಹೊಂದಬೇಕೆನ್ನುವವರು ಮಡಿ-ಮೈಲಿಗೆಗಳ ನಿಬಂಧನವನ್ನು ಪಾಲಿಸಲೇಬೇಕು.

## ಲೇಖಾಂಕ ೫.

ಸುಧಾರಕ—ರಾಯರೇ, ಮಡಿ-ಮೈಲಿಗೆಯ ವಿಚಾರದಲ್ಲಿ ನಮ್ಮ ಜನರಿಂದ ಆಗುವ ತಪ್ಪುಗಳು ಯಾವವು?

ಶಾಮರಾಯ—ನಮ್ಮ ಜನರಲ್ಲಿ ಆಗತಕ್ಕ ಮುಖ್ಯ ತಪ್ಪೆಂದರೆ ರಹಸ್ಯವನ್ನು ತಿಳಿದು ಆಚರಿಸದೆ ಇರುವದು. ಕೆಲವರು ಬರಿಯ ಪ್ರತಿಷ್ಠೆಗೋಸ್ಕರ ಈ ನಿಯಮವನ್ನು ಪಾಲಿಸುವರು. ಒಂದುವೇಳೆ ಪ್ರತಿಷ್ಠೆಗಾಗಿಯೇ ಆಗಲೊಲ್ಲದೇಕೆ, ಯಾವಾಗಲೂ ಈ ನಿಯಮವನ್ನು ಪಾಲಿಸಿದರೆ ಅದೊಂದು ಸಾರ್ಥಕವಾದರೂ ಆಗುವದು. ಹಾಗೆಮಾಡದೆ ಮಂದಿಕಂಡರೆ ಮಡಿ; ಇಲ್ಲದಿದ್ದರೆ ಮಡಿಯ ಸುದ್ದಿಯೇ ಇಲ್ಲ; ಎಂಬ ರೀತಿಯಾಗಿ ವರ್ತಿಸುವರು. ''ಮನಃಪೂತಂ ಸಮಾಚರೇತ್'' ಎಂಬ ಉಕ್ತಿಯು ಅವರ ಲಕ್ಷ್ಯದಲ್ಲಿಯೇ ಬರುವದಿಲ್ಲ. ಈ ವಿಷಯದಲ್ಲಿ ಕೆಳಗೆ ಉದಹರಿಸಿದಂತೆ ತಪ್ಪುಮಾಡುವ ಜನರ ಪ್ರಥಃಕರಣವನ್ನು ಮಾಡಬಹುದು:—

೧ ಕೆಲವರು ಬಹಿರಾಡಂಬರವನ್ನು ಒಡ್ಡಿ ಕೇವಲ ದೊಡ್ಡಸ್ತನಕ್ಕಾಗಿ ಮಡಿ-ಮೈಲಿಗೆಗಳನ್ನು ಪಾಲಿಸುವರು.

೨ ಕೆಲವರು ತಮ್ಮ ಶ್ರೇಷ್ಠತೆಯನ್ನು ವ್ಯಕ್ತಪಡಿಸುವದಕ್ಕಾಗಿ ಅನ್ಯರನ್ನು ತುಚ್ಛರೆಂದು ಭಾವಿಸುವರು.

೩ ಕೆಲವರು ತಾವು ಅನೀತಿಮಯ ಆಚರಣೆಯಿಂದ ಪಾಪದ ಮೂರ್ತಿಗಳಾಗಿದ್ದರೂ ಸದಾಚಾರಿಗಳಾದ ಜನರಸ್ಪರ್ಶದಿಂದ ಮೈಲಿಗೆಯಾಯಿತೆಂದು ಭಾವಿಸುವರು.

೪ ಕೆಲವರು ಅಪಾಯಕಾರಕವಾದ ನಿಜವಾದ ಮೈಲಿಗೆಯನ್ನು ಲೆಕ್ಕಿಸದೆ ಸುಮ್ಮಸುಮ್ಮನೆ ಮಡಿ-ಮೈಲಿಗೆಯ ಜಂಬವನ್ನು ಮೆರೆಯಿಸುವರು.

ಈ ರೀತಿಯಾಗಿ ಮಡಿ-ಮೈಲಿಗೆಗಳನ್ನು ಪಾಲಿಸುವ ಎಷ್ಟೋ ಜನರ ಉದ್ದೇಶಗಳು ಮುಖ್ಯ ಉದ್ದೇಶಕ್ಕೆ ತೀರ ವಿರೋಧವಾಗಿರುತ್ತವೆ. ಈ ತಪ್ಪುಗಳಲ್ಲದೆ ಇನ್ನೂ ಎಷ್ಟೋ ತಪ್ಪುಗಳು ನಮ್ಮ ಜನರಲ್ಲುಂಟು. ಅವನ್ನು ವರ್ಣಿಸುತ್ತೇನೆ, ಶ್ರವಣಮಾಡು. ಉಣ್ಣೆ, ನಾರು, ರೇಶ್ಮೆಯ ಬಟ್ಟೆಗಳು ಪರಿಶುದ್ಧವಷ್ಟೇ; ಆದ್ದರಿಂದ ಉಣ್ಣೆಯಿಂದ ಧಾಬಳಿ ಎಂಬ ಹೆಸರಿನ ಬಟ್ಟೆಯನ್ನೂ ನಾರು-ರೇಶ್ಮೆಗಳಿಂದ 'ಮಡಿ' ಎಂಬ ಹೆಸರಿನ ಬಟ್ಟೆಗಳನ್ನೂ ಮಾಡಿಕೊಂಡು ಅವನ್ನು ಉಪಯೋಗಿಸುವರು. ಬಹುತರ ಅವುಗಳನ್ನು ಶುದ್ಧವಾದ ಒಗೆದ ನೂಲಿನ ಬಟ್ಟೆಗಳ ಅಭಾವದಲ್ಲಿ

ಉಪಯೋಗಿಸುವ ಪದ್ಧತಿಯುಂಟು. ಆದ್ದರಿಂದ ಅವುಗಳ ಉಪಯೋಗವು ಸ್ವಚ್ಛತ್ವಾಗಿ ಮಾಡಲ್ಪಡುವದೆಂದು ಒಡೆದು ಹೇಳುವ ಕಾರಣವಿಲ್ಲ. ರೇಶ್ಮಿಯ ಬಟ್ಟೆಗಳಿಗೆ ಬೆಲೆ ಬಹಳಿರುವದರಿಂದ ಅವನ್ನೇನೋ ಒಳ್ಳೇ ಜತನದಿಂದಿಡುವರು. ಆದರೆ ಉಣ್ಣೆಯ ಹಾಗು ನಾರಬಟ್ಟೆಗಳಿಗೆ ಬೆಲೆ ಕಡಿಮೆಯಿರುವದರಿಂದ ಅವುಗಳ ಜತನದ ವಿಷಯವಾಗಿ ಅಷ್ಟೊಂದು ಲಕ್ಷ್ಯಗೊಡುವದಿಲ್ಲ. ಕೆಲಕೆಲವರಂತೂ ಧಾಬಳಿ ಹಾಗು ನಾರಮಡಿಗಳಿಗೆ ತ್ರಿಪೀಢಿಗಳಿಂದ ನೀರಿನ ದರ್ಶನವನ್ನು ಮಾಡಿಸಿರುವದಿಲ್ಲ. ದಿನಾಲು ಧೂಲಿ ಹಾಗು ಹೊಗೆಗಳನ್ನು ತಿಂದು ಅವು ಬಣ್ಣಾದಿರುಗಿರುತ್ತವೆ. ಜೇಡ ಮೊದಲಾದ ಸಣ್ಣಪ್ರಾಣಿಗಳು ಅವುಗಳಲ್ಲಿ ಮನೆಕಟ್ಟಿಕೊಂಡು ಕುಟುಂಬ ಸಮೇತವಾಗಿ ವಾಸವಾಗಿರುತ್ತವೆ. ಇಂಥ ಆ ಬಟ್ಟೆಗಳು ಬರಿಯಕೈಯಿಂದ ಮುಟ್ಟುವದಕ್ಕೂ ಅಯೋಗ್ಯವಾಗಿರುವಾಗ, ಅವು ಮಡಿಬಟ್ಟೆಗಳೆಂಬ ಭಾವನೆಯಿಂದ ಆ ಮನೆಯವರು ಅವನ್ನು ನಿಶ್ಶಂಕೆಯಿಂದ ಉಪಯೋಗಿಸಿಕೊಳ್ಳುವರು. ಅವುಗಳನ್ನು ಉಟ್ಟುಕೊಂಡು ಮಡಿನೀರು ತರುವರು, ಊಟಮಾಡುವರು. ಇಂಥ ಕಶ್ಮಲ ಬಟ್ಟೆಗಳನ್ನು ಹೀಗೆ ಉಪಯೋಗಿಸಬಹುದೇ ಎಂದು ಯಾರಾದರೂ ಕೇಳಿದರೆ "ಇವಕ್ಕೇನು ಚಿಂತೆ?" ಎಂದು ಆಢ್ಯತೆಯಿಂದ ಉತ್ತರಕೊಡುವರು. ಹಾಯ್, ಹಾಯ್! ಇಂಥ ಜನರ ಸಂಖ್ಯಾಬಾಹುಲ್ಯದಿಂದ ಮಡಿ-ಮೈಲಿಗೆಗಳ ಸದುದ್ದೇಶವು ಎಲ್ಲಿ ರಸಾತಲವನ್ನು ಹೊಂದುವದೋ ಎಂಬ ಅಂಜಿಕೆಯು ನನ್ನನ್ನು ಬಾಧಿಸುತ್ತಲಿದೆ. ಅಪ್ಪಾ ಸುಧಾರಕಾ, ನೀವೆಲ್ಲರು ಸುಧಾರಕರಾಗಿ ಮಡಿ-ಮೈಲಿಗೆಗಳ ಪರವಿಯನ್ನು ಬಿಟ್ಟದ್ದೇ ಇದಕ್ಕೆ ಕಾರಣವು. ಪಾಶ್ಚಾತ್ಯ ಶಿಕ್ಷಣದಿಂದ ಮಹಾಮಹೋಪಾಧ್ಯಾಯರಿಗಿಂತಲೂ ಪಂಡಿತರೆನಿಸಿಕೊಳ್ಳುವ ನೀವು, ಹೀಗೆ ಮಡಿ-ಮೈಲಿಗೆಯ ವಿಷಯವನ್ನು ನಿರಾಕರಣ ಮಾಡಿದ್ದರಿಂದ ಸಾಮಾನ್ಯರು ನಿಮ್ಮ ಅನುಕರಣಮಾಡಿದರು. ಗಂಡಸರೆನ್ನುವವರ ಹಾಡು ಹೀಗೆ ಆದಬಳಿಕ ಹೆಣ್ಣುಮಕ್ಕಳು ತಿಳಿದಾಗಲಿ, ತಿಳಿಯದಾಗಲಿ ಮಡಿ-ಮೈಲಿಗೆಗಳನ್ನು ಈ ವರೆಗೂ ಪಾಲಿಸುತ್ತ ಬಂದಿರುವರು. ಅವರಿಗೆ ಮಡಿ-ಮೈಲಿಗೆಯ, ಸ್ಪರ್ಶಾಸ್ಪರ್ಶತೆಯ ನಿಜವಾದ ಕಾರಣವು ತಿಳಿಯದು. ನೀರುಕುಡಿಯಬೇಕಾದರೂ ಕೂಡ ಧಾಬಳಿಯನ್ನು ಉಟ್ಟುಕೊಳ್ಳಬೇಕೆಂಬದನ್ನು ಮಾತ್ರ ಅವರು ಬಲ್ಲರು. ಇಲ್ಲಿ ಒಂದು ಸಂಗತಿಯು ನೆನಪಾಯಿತು, ಹೇಳುತ್ತೇನೆ ಕೇಳು.—ನಾನು ಒಂದುಸಲ ರೇಲ್ವೆ ಬಂಡಿಯಲ್ಲಿ ಪ್ರವಾಸಕ್ಕೆ ಹೊರಟಿದ್ದೆನು. ಆ ದಿವಸ ಬಂಡಿಯಲ್ಲಿ ತುಂಬಾಗದ್ದಲವಿತ್ತು. ಸ್ಪರ್ಶರೂ ಅಸ್ಪರ್ಶರೂ ಸಮಸ್ತರೂ ಸೇರಿದ್ದರು. ಹೀಗಿರಲು ಒಂದು ದೊಡ್ಡ ಸ್ಟೇಶನ್ನವು ಬಂದಿತು. ಅಲ್ಲಿ ಹತ್ತುವ

ಮತ್ತು ಇಳಿಯುವ ಜನರ ಗೊಂದಲಕ್ಕೆ ಸೀಮೆಯೇ ಉಳಿಯಲಿಲ್ಲ, ಅಂಥ ಗದ್ದಲಲ್ಲಿ ಎಪ್ಪತ್ತು ವರುಷದ ಒಬ್ಬ ಮುದುಕೆಯು ಸುಸುಳಿ ನಾನು ಕುಳಿತ ಸ್ಥಳದ ಹತ್ತಿರವೇ ಬಂದಳು. ಆಕೆಯ ಬಗಲಲ್ಲಿ ಒಂದು ದೊಡ್ಡದಾದ ಮೊಟ್ಟೆಯಿತ್ತು. ಅದರಲ್ಲಿ ಏನೇನಿತ್ತೆಂಬದು ಅವಳಿಗೇ ಗೊತ್ತು. ಆಕೆಯು ಬ್ರಾಹ್ಮಣವಿಧವೆ ಎಂದು ನೋಡುವವರಿಗೆ ಸ್ಪಷ್ಟವಾಗಿ ತಿಳಿಯುವಂತಿತ್ತು. ಬಂಡಿಯಲ್ಲಿ ಗದ್ದಲವಿದ್ದದರಿಂದ ಆ ಮುದುಕೆಯು ಅಲ್ಲಿಯೇ ಕೆಳಕ್ಕೆ ಮೂಟೆಯನ್ನಿರಿಸಿ ಕುಳಿತುಕೊಂಡಳು. ಬಂಡಿಯು ಮುಂದಕ್ಕೆ ಸಾಗಿತು. ಮುಂದೆ ಕೆಲಹೊತ್ತಿನ ಮೇಲೆ ನಮ್ಮ ಬಂಡಿಯೊಳಗಿನ ಎಷ್ಟೋ ಜನರು ಇಳಿದು ಹೋದರು. ಆಗ ಆ ಮುದುಕೆಯು ಬೆಂಚಿನಮೇಲೆ ಕುಳಿತು ತನ್ನ ಗಂಟನ್ನು ಮೇಲಕ್ಕೆ ತಕ್ಕೊಂಡಳು. ಅಷ್ಟರಲ್ಲಿ ಸಂಧ್ಯಾಕಾಲವು ಸಮೀಪಿಸುತ್ತ ಬಂದಿತು. ಸೂರ್ಯನು ಕ್ಷಿತಿಜದ ತೀರ ಹತ್ತಿರಕ್ಕೆ ಬಂದನು. ಆಗ ನನ್ನ ಎದುರಿಗೆ ಬೆಂಚಿನಮೇಲೆ ಕುಳಿತಿದ್ದ ಆ ಮುದುಕೆಯು ಮೆಲ್ಲಗೆ ತನ್ನ ಮೂಟೆಯನ್ನು ಬಿಚ್ಚಿ ಒಂದು ಧಾಬಳಿಯನ್ನು ಹೊರಕ್ಕೆ ತೆಗೆದಳು; ಹಾಗು ಚಿಕ್ಕದಾದ ಒಂದು ಡಬ್ಬಿಯನ್ನು ತೆಗೆದಳು. ನಾನು ಸುಮ್ಮನೆ ಆ ಮುದುಕೆಯನ್ನು ನೋಡುತ್ತ ಕುಳಿತಿದ್ದೆನು. ಮುದುಕೆಯು ಉಟ್ಟಸೀರೆಯನ್ನು ಕಳೆದು ಧಾಬಳಿಯನ್ನು ಹಚ್ಚಿಕೊಂಡಳು; ಮತ್ತು ಆ ಡಬ್ಬಿಯನ್ನು ತಕ್ಕೊಂಡು ಕಿಟಕಿಯ ಕಡೆಗೆ ಮೋರೆ ಮಾಡಿ ಕುಳಿತು ಫಲಾಹಾರಮಾಡಲಾರಂಭಿಸಿದಳು. ಆ ಮುದುಕೆಯ ಈ ಕೃತಿಯನ್ನು ನೋಡಿ ನನಗೆ ಹುಚ್ಚುನಗೆ ಬಂದಿತು. ಆಗ ಆ ಮುದುಕೆಯು ನನ್ನ ಕಡೆಗೆ ಹೊರಳಿ—ಯಾಕೆ ನಗುತ್ತೀರಿ? ಎಂದು ಕೇಳಿದಳು. ಆದಕ್ಕೆ ನಾನು ಏನೂ ಉತ್ತರ ಕೊಡಲಿಲ್ಲ. ಅದರೂ ಅವಳು ಅಷ್ಟಕ್ಕೇ ಸುಮ್ಮನಾಗದೆ ಪುನಃಪುನಃ ಕೇಳತೊಡಗಿದಳು. ಆಗ ನಾನು ನಗೆಯನ್ನು ಹತ್ತಿಕ್ಕಿಕೊಂಡು—ನೀವು ಧಾಬಳಿಯನ್ನೇಕೆ ಉಟ್ಟುಕೊಂಡಿರಿ? ಎಂದು ಪ್ರಶ್ನಮಾಡಿದೆನು. ಆ ಮುದುಕೆಯು—ಇದಕ್ಕಾಗಿ ಇಷ್ಟು ನಕ್ಕಿರೇನು? ನಾವು ಬ್ರಾಹ್ಮಣರು; ಮೈಲಿಗೆಯಿಂದ ಫಲಾಹಾರ ಮಾಡಲಿಕ್ಕೆ ಬರುವದಿಲ್ಲ. ವಿಧವೆಯರಾದ ನಮ್ಮಂಥವರಂತೂ ಸರ್ವಥಾ ತಿನ್ನಕೂಡದು. ಆದ್ದರಿಂದ ಧಾಬಳಿಯನ್ನುಟ್ಟುಕೊಂಡಿದ್ದೇನೆ. ಇದರಿಂದ ನಿಮಗೆ ನಗೆಬರಲಿಕ್ಕೆ ಕಾರಣವೇನು? ಎಂದು ನುಡಿದಳು. ಸುಧಾರಕರಾ, ಆ ಮುದುಕೆಯ ಈ ಮಾತಿಗೆ ಏನೆನ್ನಬೇಕು? ಇಂಥ ಮಡಿಮಾಡುವ ದಡ್ಡ ಜನರು ನಮ್ಮಲ್ಲಿ ಹೇರಳವಾಗಿರುವರು. ಮಡಿಯ ನಿಜವಾದ ಕಾರಣವು ಗೊತ್ತಿರದ್ದರಿಂದಲೇ ಇಂಥ ಜನರು ಹೀಗೆ ಅಪಹಾಸ್ಯಕ್ಕೆ ಕಾರಣರಾಗುವರು!

ಸುಧಾರಕ—ರಾಯರೇ, ಈ ಮಡಿ-ಮೈಲಿಗೆಯ ನಿಯಮವನ್ನು ಬರಿಯ ಬ್ರಾಹ್ಮಣರಷ್ಟೇ ಯಾಕೆ ಪಾಲಿಸಬೇಕು? ಮಿಕ್ಕ ವರ್ಣದವರು ಯಾಕೆ ಪಾಲಿಸಬಾರದು?

ಶಾಮರಾಯ—ಈ ನಿಯಮವನ್ನು ಸರ್ವರೂ ಪಾಲಿಸಬಹುದು; ಆದರೆ ಅವರವರ ಅಧಿಕಾರಾನುಗುಣವಾಗಿ ಈ ಪದ್ಧತಿಯು ಬಳಿಕೆಯಲ್ಲಿ ಬಂದಿರುತ್ತದೆ. ಮನುಷ್ಯರಲ್ಲಿ ಎಲ್ಲರೂ ಸಮನಾದ ಯೋಗ್ಯತೆಯವರಿರುವದಿಲ್ಲವಷ್ಟೇ; ಕೆಲವರು ಶಕ್ತಿವಂತರಿರುವರು; ಕೆಲವರು ಅಶಕ್ತರಿರುವರು; ಕೆಲವರು ಮಧ್ಯಮಸ್ಥಿತಿಯವರಿರುವರು; ಸ್ಥೂಲಶಕ್ತಿಯಲ್ಲಿ ಹೀಗೆ ಹೆಚ್ಚು-ಕಡಿಮೆಯಿರುವಂತೆ ಮನುಷ್ಯರಲ್ಲಿ ಸೂಕ್ಷ್ಮ ಶಕ್ತಿಯಲ್ಲಿಯೂ ಹೆಚ್ಚು-ಕಡಿಮೆಯಿರುತ್ತದೆ. ಎಲ್ಲರ ಮನಸ್ಸೂ ಒಂದೇ ಪ್ರಕಾರದ್ದಿರುವದಿಲ್ಲ. ಕೆಲವರು ಉದಾತ್ತ ಮನಸ್ಸಿನವರೂ ಕೆಲವರು ಸಂಕುಚಿತ ಮನಸ್ಸಿನವರೂ ಇರುವರು. ಈ ಮನೋಧರ್ಮಕ್ಕನುಸರಿಸಿ ಪ್ರತಿಯೊಬ್ಬರಲ್ಲಿ ಮಡಿ-ಮೈಲಿಗೆಯ ವಿಚಾರವು ರೂಢಿಗೊಂಡಿರುವದು. ಅದುಹ್ಯಾಗಂದರೆ:—

ಯಾರಿಗೆ ತಮ್ಮ ದೇಹದ ಮಟ್ಟಿಗಷ್ಟೇ ವಿಚಾರವುಂಟಾಯಿತೋ ಅವರಿಗೆ ಹೆಚ್ಚಿನ ವಿಚಾರಕ್ಕೆ ಆಸ್ಪದವು ಸಿಕ್ಕಲಿಲ್ಲ. ಆದ್ದರಿಂದ ಅವರು ಸೃಷ್ಟಿನಿಯಮದಂತೆ ಒದಗಿಬರುವ ಶಾರೀರಿಕ ಅಪಾಯುಗಳ ಮಟ್ಟಿಗೇ ಸ್ಪರ್ಶಾಸ್ಪರ್ಶತೆಯು ಅಂದರೆ ಮಡಿ-ಮೈಲಿಗೆಯ ನಿರ್ಬಂಧವನ್ನಿಟ್ಟುಕೊಂಡರು.

ಯಾರು ಶಾರೀರಿಕ ಹಾಗು ಮಾನಸಿಕ ಉನ್ನತಿಯ ಕಡೆಗೆ ದೃಷ್ಟಿಯನ್ನಿಟ್ಟರೋ ಅವರು ಅವೆರಡೂ ಸಾಧಿಸುವಷ್ಟು ಧೂರ್ತ ವಿಚಾರದಿಂದ ಮಡಿ-ಮೈಲಿಗೆಗಳ ನಿಯಮವನ್ನು ಪಾಲಿಸಹತ್ತಿದರು.

ಬರಿಯ ಅಧ್ಯಾತ್ಮ ವಿಚಾರದವರು ಮಡಿ-ಮೈಲಿಗೆಯ ಸಂಪೂರ್ಣ ನಿಯಮಗಳನ್ನು ಪಾಲಿಸಬೇಕಾಗುವದು. ನಿಷೇಧ ಪದಾರ್ಥಗಳಷ್ಟೇ ಯಾಕೆ ಮನೋಗಮ್ಯವಾದ ದುಷ್ಟ ವಿಚಾರಗಳನ್ನೂ ಕೂಡಾ ಅಧ್ಯಾತ್ಮ ವಿಚಾರಪರನಾದವನು ಮನಸ್ಸಿನಿಂದ ಮುಟ್ಟಕೂಡದು. ಬ್ರಾಹ್ಮಣ ವರ್ಣವು ಅಧ್ಯಾತ್ಮವಿಚಾರ ಪರವರ್ಣವಾದ್ದರಿಂದ ಆ ವರ್ಣದವರು ಮಾತ್ರ ಎಲ್ಲ ನಿಯಮಗಳನ್ನು ಪಾಲಿಸುತ್ತ ಬಂದಿದ್ದರು. ಅವರು ಈಗ ಅಧ್ಯಾತ್ಮ ಮಾರ್ಗವನ್ನು ಕಳಕೊಂಡದ್ದರಿಂದ ಅವರಿಗೂ ಈ ನಿಯಮಗಳು ಈಗ ನಿರರ್ಥಕವಾಗಿ ತೋರತೊಡಗಿವೆ.

ಸುಧಾರಕಾ, ಈ ಮಡಿ-ಮೈಲಿಗೆಯ ನಿಯಮಗಳನ್ನು ಪಾಲಿಸುವದು ಸುಮ್ಮನೆ ಚೇಷ್ಟೆಯ ಮಾತಲ್ಲ. ಅದನ್ನು ಅನುಸರಿಸುವವರ ಮನಸ್ಸು ಬಹು ಉದಾತ್ತವಾಗಿರಬೇಕು. ಯಾಕಂದರೆ ಈ ನಿಯಮಗಳಿಂದ ಬದ್ಧನಾದವನು ಬಹುಮ

ಟ್ಟಿಗೆ ಇಂದ್ರಿಯ ದಮನವನ್ನು ಮಾಡಬೇಕಾಗುತ್ತದೆ. ಸಿಕ್ಕ ಪದಾರ್ಥಗಳನ್ನು ಸಿಕ್ಕ ಹೊತ್ತಿನಲ್ಲಿ ತಿನ್ನುವದೇ ಮೊದಲಾದ ಸ್ವೇಚ್ಛಾಚಾರಗಳಿಂದ ಅಲಿಪ್ತನಿರಬೇಕಾಗುತ್ತದೆ. ಒಂದುರೀತಿಯಿಂದ ಅವನು ಶಾರೀರಿಕ ಸುಖದ ವಿಷಯವಾಗಿ ಮನಸ್ಸನ್ನು ಕಲ್ಲುಮಾಡಿ, ನಿಃಸ್ವಾರ್ಥನಾಗಬೇಕಾಗುತ್ತದೆ. ಈ ಮಡಿ-ಮೈಲಿಗೆಯ ನಿಯಮವು ಇಂದ್ರಿಯಗಳಿಗೂ-ವಿಷಯಕ್ಕೂ ಇರುವ ಸಂಬಂಧವನ್ನು ಕಡಿಮೆ ಮಾಡುತ್ತದೆ; ಮತ್ತು ದೇಹಾಭಿಮಾನವನ್ನು ಮರೆಯಿಸಿ, ಶರೀರ ಹಾಗು ಮನಸ್ಸುಗಳು ಜಗತ್ತಿನ ಉಪಯೋಗಕ್ಕೆ ಬೀಳುವ ಹಾಗೆ ಅವುಗಳಲ್ಲಿ ಪವಿತ್ರತೆಯನ್ನೂ ಸಾಮರ್ಥ್ಯವನ್ನೂ ಉಂಟುಮಾಡುತ್ತದೆ. ಆದ್ದರಿಂದ ಇಂಥ ಕಠಿಣ ನಿಯಮಗಳನ್ನು ಪಾಲಿಸುವದಕ್ಕೆ ಯಾರು ತಾನೇ ಒಪ್ಪಿಕೊಳ್ಳುವರು? ೮೪ ಲಕ್ಷ ಯೋನಿಗಳಲ್ಲಿ ಪರಿಭ್ರಮಣ ಮಾಡಿ ಮಾಡಿ ಭವಚಕ್ರಕ್ಕೆಬೇಸತ್ತು ಪುಣ್ಯವಶಾತ್ ಮನುಷ್ಯಯೋನಿಯಲ್ಲಿ ಜನ್ಮ ತಾಳಿದ ಜೀವನು ಮಾತ್ರ ಭವಚಕ್ರವನ್ನು ನೀಗಲಾಡುವ ಅಧ್ಯಾತ್ಮವಿಚಾರವನ್ನು ಮಾಡಿದರೆ ಮಾಡಬೇಕು. ಈ ಮನುಷ್ಯರಲ್ಲಿಯೂ ಸತ್ವಪ್ರಧಾನವಾದ ಬ್ರಾಹ್ಮಣ ವರ್ಣವು ಅಧ್ಯಾತ್ಮವಿಚಾರಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟಿತು. ಅಂತೇ ಆ ವರ್ಣವು ಈ ನಿಯಮಗಳನ್ನು ಪಾಲಿಸುವ ಗುತ್ತಿಗೆಯನ್ನು ಹೊತ್ತಿತು. ವಸ್ತುಸ್ಥಿತಿಯು ಹೀಗಿದ್ದದರಿಂದ ಎಲ್ಲ ನಿಯಮಗಳು ಬ್ರಾಹ್ಮಣರಲ್ಲಿಯೇ ಯಾಕೆ ಉಳಿದವೆಂದು ಅವರ ಮೇಲೆ ವಕ್ರದೃಷ್ಟಿಯನ್ನು ಚಲ್ಲುವ ಕಾರಣವಿಲ್ಲ.

ಸುಧಾರಕ—ರಾಯರೆ, ಬ್ರಾಹ್ಮಣರು ಈಗ ಮಡಿ-ಮೈಲಿಗೆಯ ನಿಯಮವನ್ನು ಬಿಟ್ಟದ್ದರಿಂದ ಆಗಿರುವ ಹೆಚ್ಚು-ಕಡಿಮೆಯೇನು?

ಶಾಮರಾಯ—ಏನು ಹೆಚ್ಚು-ಕಡಿಮೆಯಾಗಿರುವದೆಂಬದು ನಿನ್ನ ಲಕ್ಷ್ಯದಲ್ಲಿ ಬರುವದಿಲ್ಲವೇನು? ಯಾವದೊಂದು ಹೊರೆಯ ಕಟ್ಟು ಸಡಿಲಿದರೆ ಅಥವಾ ಹರಿದರೆ ಅದರಲ್ಲಿದ್ದ ಕಾಷ್ಠತುಂಡುಗಳು ಅವ್ಯವಸ್ಥ ಸ್ಥಿತಿಯನ್ನು ಹೊಂದುವಂತೆ ಬ್ರಾಹ್ಮಣರಲ್ಲಿಯ ವ್ಯಕ್ತಿಗಳು ಈ ಬಂಧನ ತಪ್ಪಿದ್ದರಿಂದ ಮನಬಂದಂತೆ ಆಚರಿಸಹತ್ತಿವೆ. ಈ ಮನಸೋಕ್ತ ಆಚರಣೆಯಿಂದ ಆ ವ್ಯಕ್ತಿಗಳಲ್ಲಿಯ ವಿಷಯವ್ಯಾಮೋಹವು ಬೆಳೆದಿದೆ. ನಿಃಸ್ವಾರ್ಥಬುದ್ಧಿಯು ನಾಮಶೇಷವಾಗಿದೆ. ಜಗತ್ತಿನ ಹಿತವನ್ನುಸಾಧಿಸುವಂಥ ಪವಿತ್ರತೆಯು ನಷ್ಟವಾಗಿದೆ. ಇದಕ್ಕೂಹೆಚ್ಚಿನ ಅನರ್ಥವು ಇನ್ನೇನಾಗಬೇಕು?

ಸುಧಾರಕಾ, ಹಿಂದೂಜನರ ಉದಾತ್ತ ವಿಚಾರಗಳ ಮಾದರಿಯನ್ನು ನಿನಗೆ ಇನ್ನಿಷ್ಟು ಹೇಳುತ್ತೇನೆ ಕೇಳು. ಸ್ಪರ್ಶಾಸ್ಪರ್ಶತೆಯಲ್ಲಿ ನಮ್ಮವರಷ್ಟು ಸೂಕ್ಷ್ಮ

ವಿಚಾರವನ್ನು ಮಿಕ್ಕರಾಷ್ಟ್ರದವರಾರೂ ಮಾಡಿರಲಿಲ್ಲ. ನಮ್ಮ ದೇಶದಲ್ಲಿ ನಮ ಸ್ಕಾರ ಪದ್ಧತಿಯದೆಯಷ್ಟೆ? ಅನ್ಯದೇಶಗಳಲ್ಲಿಯೂ ಈ ಪದ್ಧತಿಯುಂಟು. ಆದರೆ ಕೆಲಕೆಲವು ದೇಶಗಳಲ್ಲಿಯ ಪದ್ಧತಿಯನ್ನು ಕೇಳಿದರೆ, ಹುಚ್ಚುನಗೆ ಬರುವ ಹಾಗಿದೆ. ನಮ್ಮವರು ಅನ್ಯರ ಸನ್ಮಾನಕ್ಕೋಸ್ಕರ ದೂರಿನಿಂದಲೇ ಕರಗಳನ್ನು ಜೋಡಿಸುವ ರೂಢಿಯಲ್ಲಿ ಬಹಳ ಮಹತ್ವವುಂಟು. ಈ ನಮಸ್ಕಾರದ ಶಿಷ್ಟಾಚಾರದಲ್ಲಿ ತಾತ್ವಿಕ ದೃಷ್ಟಿಯಿಂದ ಮಹತ್ವವಿದ್ದಷ್ಟು ಲೌಕಿಕದೃಷ್ಟಿಯಿಂದಲೂ ಇರುತ್ತದೆ. ಆದರೆ ಅನ್ಯದೇಶದ ಪದ್ಧತಿಗಳನ್ನು ನೋಡು; ಅವು ಎಷ್ಟು ಅಸಹ್ಯಕರಗಳಾಗಿವೆ. ಪಾಶ್ಚಾತ್ಯರು ಅನ್ಯರನ್ನು ಸ್ವಾಗತ ಮಾಡುವಾಗ ಷೆಕಹ್ಯಾಂಡ ಕೊಡುವರಷ್ಟೇ; ಇದು ಪಾಶ್ಚಾತ್ಯರಲ್ಲಿಯ ಬಹುಮಾನದ ಪದ್ಧತಿಯಿದ್ದಂತೆ ಚೀನೀಜನರಲ್ಲಿ ಪರಸ್ಪರರ ಸಂದರ್ಶನವಾದಾಗ ಒಬ್ಬರ ಮೋರೆಗೆ ಮತ್ತೊಬ್ಬರು ಮೋರೆಯನ್ನು ತಿಕ್ಕುವದು ಬಹುಮಾನದ ಪದ್ಧತಿಯಾಗಿದೆ. ಇದೇ ಅವರ ನಮಸ್ಕಾರ-ಚಮತ್ಕಾರವು. ಇನ್ನೂ ಕೆಲವೆಡೆಗಳಲ್ಲಿ ಇದಕ್ಕೂ ಹೆಚ್ಚಿನ ವಿಲಕ್ಷಣ ಪದ್ಧತಿಗಳುಂಟು. ಅವನ್ನೆಲ್ಲ ಹೇಳುತ್ತ ಕುಳಿತರೆ, ಅದೇ ಒಂದು ಗ್ರಂಥವಾಗಬಹುದು. ಇರಲಿ. ಪರಸ್ಪರರು ಮೋರೆಗೆ ಮೋರೆ ತಿಕ್ಕುವದು ಎಷ್ಟು ಅಸಹ್ಯವು. ಸನ್ಮಾನಮಾಡಿಸಿಕೊಳ್ಳತಕ್ಕ ಮನುಷ್ಯನಾಗಲಿ, ಅಥವಾ ಮಾಡತಕ್ಕ ಮನುಷ್ಯನಾಗಲಿ,-ರೋಗಿಯಿರಲಿ ಮಹಾರೋಗಿಯಿರಲಿ ಹ್ಯಾಗಿದ್ದರೂ ಅವನ ಸ್ಪರ್ಶವನ್ನು ಮಾಡಲೇಬೇಕು. ಇಲ್ಲದಿದ್ದರೆ ಸನ್ಮಾನದ ಕಾರ್ಯವೇ ಜರಗುವಂತಿಲ್ಲ. ಆದ್ದರಿಂದ ಹಸ್ತಾಂದೋಲನವನ್ನು ಮಾಡಿಯಾಗಲಿ, ಮೋರೆಗೆಮೋರೆ ತಿಕ್ಕಿಯಾಗಲಿ ಪರರನ್ನು ಸನ್ಮಾನಗೊಳಿಸುವ ಪದ್ಧತಿಯು ಯೋಗ್ಯವಾದದ್ದಲ್ಲವೆಂದು ಈಚೀಚೆಗೆ ಜರ್ಮನ ಪಂಡಿತರು ಸಹ ಒಪ್ಪಿಕೊಂಡು, ಹಿಂದೂ ಜನರ ನಮಸ್ಕಾರ ಪದ್ಧತಿಯನ್ನು ಹೊಗಳಿರುವರು. ಹೀಗೆ ಪಾಶ್ಚಾತ್ಯರೇ ನಮ್ಮ ಪದ್ಧತಿಗಳನ್ನು ಕಂಠೋಕ್ತವಾಗಿ ಹೊಗಳುತ್ತಿರಲು, ನಮ್ಮಲ್ಲಿಯ ಕೆಲವರು-ಪಾಶ್ಚಾತ್ಯ ಸಂಸ್ಕೃತಿಯು ತಲೆಗೇರಿದವರು-ಹಿಂದೂಜನರ ನಮಸ್ಕಾರ ಪದ್ಧತಿಯನ್ನು ಬಿಟ್ಟು, ಹಸ್ತಾಂದೋಲನದ ಪದ್ಧತಿಯನ್ನು ಬಳಿಕೆಯಲ್ಲಿ ತರಹತ್ತಿರುವರು. ಇದು ನಮ್ಮ ಜನರ ಮರುಳತನವೆಂದು ಬಿಚ್ಚಿಹೇಳುವ ಕಾರಣವೇನು?

ಸುಧಾರಕ (ಸಣ್ಣ ಮೋರೆಮಾಡಿ)—ರಾಯರೇ, ನಮ್ಮ ಜನರು ಬರಿಯ ಅನುಕರಣ ಪ್ರಿಯರೆಂಬದು ಸುಳ್ಳಲ್ಲ. ಗುಣಾವಗುಣಗಳ ಪರೀಕ್ಷೆಯಿಲ್ಲದೆ ಕಂಡದ್ದನ್ನು ಮಾಡಿಯೇ ತೀರಬೇಕೆಂದು ಕುಣಿಯ ಹತ್ತುವರು. ಇದಲ್ಲದೆ ಇದಕ್ಕೆ ಇನ್ನೂ ಒಂದು ಕಾರಣವುಂಟು; ಅದನ್ನು ಹೇಳಿದರೆ ನಮ್ಮದೇ ಮಾನನಷ್ಟ; ನೀವು

ಹಿರಿಯರು, ಅನುಭವಿಕರು. ನಾನು ಹೇಳುವ ಸಂಗತಿಯು ನಿಮಗೆ ತಿಳಿಯದೆ ಇರ ತಕ್ಕ ಸಂಗತಿಯಲ್ಲ. ಆದರೂ ಸದ್ಯಕ್ಕೆ ಮಾತಾಡುವ ಪ್ರಸಂಗಬಂದದ್ದರಿಂದ ನಿಮ್ಮ ಮುಂದೆ ಎರಡು ಮಾತುಗಳನ್ನು ಹೇಳುತ್ತೇನೆ. ರಾಯರೇ, ನಾನು ಸಹ ಆ ಪಂಗಡಕ್ಕೆ ಸೇರಿದವನೇ; ಆದರೆ ಈಗ ನಿಮ್ಮ ಸಹವಾಸದಿಂದ ನನಗೆ ನಮ್ಮ ಪಂಗಡದವರ ಆಚರಣೆಯನ್ನು ಸ್ಮರಿಸಿದರೆ ಅಸಹ್ಯವಾಗುತ್ತದೆ. ನಮ್ಮವರು ಇಂಗ್ಲಿಷ ಕಲಿತು ಗ್ರ್ಯಾಜುಏಟ ಪದವಿಗೆ ಬಂದರೆಂದರೆ ದೊಡ್ಡನವಕರಿಯನ್ನು ಸಂಪಾದಿಸುವ ಹುಚ್ಚು ಅವರಿಗೆ ಗಂಟುಬೀಳುವದು. ಆದ್ದರಿಂದ ಅವರು ಯುರೋಪಿಯನ್ನರ ಪ್ರೀತಿಯನ್ನು ಪಡೆಯುವದಕ್ಕಾಗಿ ಅವರಂತೆ ಆಚರಿಸಹತ್ತುವರು. ಅವರು ಬಿಸಿ ಬಿಸಿಯಾದ ಚಹವನ್ನು (ಟೀ) ಕುಡಿದರೆ ಅದಕ್ಕೂ ಹೆಚ್ಚು ಬಿಸಿಯಾದದ್ದನ್ನು ನಮ್ಮವರು ಕುಡಿಯುವರು. ಅವರು ಬೂಟು-ಪಾಟ್ಲನ್ನುಗಳನ್ನು ಹಾಕಿಕೊಂಡರೆ ಇವರೂ ಹಾಕಿಕೊಳ್ಳುವರು. ಒಟ್ಟಿಗೆ ಇಂಗ್ಲಿಷರೊಡನೆ ಸಾರೂಪ್ಯತಾಮುಕ್ತಿಯನ್ನು ಪಡೆದರೇ ತಾವು ಹುಟ್ಟಿದ್ದಕ್ಕೆ ಸಾರ್ಥಕವೆಂದು ಭಾವಿಸುವರು. ಇದಕ್ಕೆಲ್ಲ ಯುರೋಪಿಯನ್ನರ ಅನುಗ್ರಹಕ್ಕೆ ಪಾತ್ರವಾಗಬೇಕೆಂಬ ನಮ್ಮ ಬಯಕೆಯೇ ಕಾರಣವು; ಮೊದಲು ನಮ್ಮವರು ಹೀಗೆ ಆಚರಿಸಿ ತಮ್ಮ ಮುಂದಿನ ಸಂತತಿಗೆ ಮಾರ್ಗತೋರಿಸಿಕೊಟ್ಟರು. ಈಗ ನಾವುಗಳೆಲ್ಲ ಯಾವ ಉದ್ದೇಶವೂ ಇಲ್ಲದೆ, ಬರಿಯ ಚಂದಕ್ಕಾಗಿ ಯುರೋಪಿಯನ್ನರ ಅನುಕರಣ ಮಾಡಹತ್ತಿರುತ್ತೇವೆ. ಮೂವತ್ತೆರಡುಕೋಟಿ ಪ್ರಜೆಗಳು ಕ್ರಾಫುಬಿಟ್ಟರೆ ಅವರಿಗೆ ತಾನೇ ಯಾವ ಯುರೋಪಿಯನ್ನನು ನೌಕರಿಯನ್ನು ಕೊಡಿಸುವನು? ಕ್ರಾಫುಬಿಡುವದೂ, ಹ್ಯಾಟ್ ಹಾಕುವದೂ ಈಗ ನಮಗೊಂದು ಫ್ಯಾಶನ್ನಾಗಿ ಕುಳಿತದೆ. ರಾಯರೇ, ಈಗ ನನಗೆ ಬಹಳಪಶ್ಚಾತ್ತಾಪವಾಗತೊಡಗಿದೆ. ನಾಳೆಗೇ ಈ ಕ್ರಾಫನ್ನು ತೆಗೆಯಿಸಿಬಿಡುತ್ತೇನೆ. ಯಾವಾಗ ಬೆಳಗಾದೀತೋ ಎಂದು ನನಗೆ ಚಡಪಡಿಕೆಯಾಗಿದೆ. ನಾಳೆಗೆ ನಿಮ್ಮ ಬಳಿಗೆ ಬರಬೇಕಾದರೆ ಈ [illegible] ಅಸಹ್ಯ ರೂಪದಿಂದ ಬರಲಿಕ್ಕಿಲ್ಲ. ನನ್ನಂತೆ ನಮ್ಮ ಸುಧಾರಕರೆಲ್ಲರಿಗೂ ಪಶ್ಚಾತ್ತಾಪವಾದರೆ ಬಹಳ ಒಳಿತಾಗುವದು. ಮುಸಲ್ಮಾನ ಅರಸರ ಕಾಲದಲ್ಲಿ ದೊಡ್ಡ ದೊಡ್ಡ ಜಾಹಗೀರುಗಳೂ, ಮನಸಬದಾರಿಯೂ ಮೊದಲಾದವುಗಳಿಂದ ಹೇರಳವಾಗಿ ಐಶ್ವರ್ಯವು ದೊರೆಯುತ್ತಿದ್ದರೂ ನಮ್ಮ ಜನರು ಧರ್ಮಾಂತರ ಮಾಡುತ್ತಿರಲಿಲ್ಲ. ಇದಲ್ಲದೆ ಆಗ ನಮ್ಮವರಿಗೆ ಪ್ರಾಣಭಯವೂ ಇತ್ತು. ಈಗ ಅದರ ವಿರುದ್ಧಸ್ಥಿತಿಯಿರುತ್ತದೆ. ನಮಗೆ ಪ್ರಾಣಭಯವೂ ಇಲ್ಲ. ಐಶ್ವರ್ಯಾದಿಗಳು ದೊರೆಯುವ ಸಂಭವವೂ ಇಲ್ಲ. ಹೀಗಿದ್ದು, ನಾವು ಧರ್ಮಾಂ

ತರಕ್ಕೆ ಮನಸ್ಸುಕೊಡುವದನ್ನು ನೋಡಿದರೆ ಈಗ ನನಗೇ ಆಶ್ಚರ್ಯವಾಗುತ್ತದೆ! ಹಾಯ್! ಹಾಯ್! ನಾವೆಷ್ಟು ಮೂರ್ಖತನಕ್ಕೆ ಹೋದೆವಲ್ಲ? ಶಿವ! ಶಿವ! ರಾಯರೇ, ನಿಮ್ಮ ಸಂಗತಿಯು ಸಿಕ್ಕದ್ದು ಬಹಳ ಒಳಿತಾಯಿತು. ನಿಮ್ಮಿಂದ ನನ್ನ ಅಜ್ಞಾನವಾದರೂ ದೂರವಾಯಿತು. ಇದಕ್ಕಾಗಿ ನಾನು ನಿಮ್ಮ ಉಪಕಾರವನ್ನು ಎಷ್ಟು ಸ್ಮರಿಸಿದರೂ ತೀರದು.

ಶಾಮರಾಯ—ಶಾಬಾಸ್? ಇಂಥ ಸದ್ಬುದ್ಧಿಯು ನಿನಗೆ ಹುಟ್ಟಿದ್ದಕ್ಕಾಗಿ ನನಗೆ ತುಂಬಾ ಸಂತೋಷವಾಗುತ್ತದೆ. ಇದರಿಂದ ನಮ್ಮ ಋಷಿಗಳ ಪುಣ್ಯವು ಬಲವಂತವಾಗಿರುತ್ತದೆಂದು ಅನ್ನಬೇಕಾಗುತ್ತದೆ. ಯಾಕಂದರೆ, ನಿನ್ನಂಥ ಪಕ್ಕಾ ಸುಧಾರಕನು ಇಷ್ಟು ಬೇಗನೆ ಹಾದಿಗೆ ಬಂದೀಯೆಂದು ನಾನು ಸ್ವಪ್ನದಲ್ಲಿ ಕೂಡಾ ಭಾವಿಸಿರಲಿಲ್ಲ.

ಸುಧಾರಕ—ಛೀ, ಛೀ ರಾಯರೇ, ನನ್ನಿಂದ ಬಹಳ ತಪ್ಪಾಯಿತು. ಇಷ್ಟು ದಿವಸ ನಮ್ಮ ಧರ್ಮದ ವಿಷಯವಾಗಿ ನನ್ನಿಂದಅಪರಾಧವಾದದ್ದು ಆಗಿಹೋಯಿತು. ಇನ್ನುಮುಂದೆ ನನ್ನಿಂದ ಅಂಥ ಅಪರಾಧಗಳು ಖಂಡಿತ ಆಗಲಿಕ್ಕಿಲ್ಲ. ಆದ್ದರಿಂದ ತಾವು ಇನ್ನು ಮುಂದೆ ನನಗೆ ಸುಧಾರಕನೆಂದು ಕರೆಯಬಾರದೆಂದು ನನ್ನ ಪ್ರಾರ್ಥನೆಯುಂಟು.

ಶಾಮರಾಯ(ನಕ್ಕು)—ಇಷ್ಟು ದಿವಸ ನಿಜವಾಗಿ ನೀನು ಸುಧಾರಕನೇ ಇದ್ದದರಿಂದ ಆಗ ಬಿದ್ದ ಹೆಸರನ್ನು ಈಗ ಯಾಕೆ ತಪ್ಪಿಸಬೇಕು? ಆದರೆ ಈಗ ಆ ಹೆಸರನ್ನು ವಿನೋದಪರವಾಗಿ ಕರೆಯೋಣ.

ಸುಧಾರಕ—ನಿಮ್ಮ ಇಷ್ಟ; ರಾಯರೇ, ಇನ್ನುಮುಂದೆ ನನ್ನ ನಿಮ್ಮ ಧರ್ಮವು ಒಂದೇ ಆಯಿತಲ್ಲವೇ? ಹಾಗಾದರೆ ನನಗೆ ತಿಳಿಯದ ವಿಷಯಗಳನ್ನು ಕೇಳಿಕೊಳ್ಳಲಿಯಾ?

ಶಾಮರಾಯ—ನೀನು ಬೇಕಾದ ವಿಷಯವನ್ನು ಕೇಳಬಹುದು. ಆ ಬಗ್ಗೆ ನೀನು ಸಂಕೋಚಪಡುವ ಕಾರಣವಿಲ್ಲ. ನೀನು ಮೊದಲು ಕೇಳಿದ ಪ್ರಶ್ನೆಗಳಲ್ಲಿ ಇನ್ನೂ ಕೆಲವುಗಳಿಗೆ ನಾನು ಉತ್ತರ ಕೊಡಬೇಕಾಗಿದೆ. ಒಳ್ಳೇದು ಈಗ ಮತ್ತಾವ ಪ್ರಶ್ನಮಾಡುತ್ತೀ?

ಆಚಾರ್ಯ(ನಡುವೇ ಬಾಯಿಹಾಕಿ)—ಸರಿ! ಸರಿ! ರಾಯರೇ, ಇಪ್ಪತ್ತನೇ ಶತಮಾನದ ಸುಧಾರಕರು ಸಹ ನಿಮ್ಮ ಮಾತಿಗೆ ಒಡಂಬಟ್ಟ ಬಳಿಕ ನಿಮ್ಮ ಜಿಂಹ್ವಾಗ್ರದಲ್ಲಿ ಪ್ರತ್ಯಕ್ಷ ಶಾರದೆಯೇ ವಾಸಮಾಡಿದ ಹಾಗೆ ಕಾಣುತ್ತದೆ!

ಶಾಮರಾಯ(ನಕ್ಕು)—ಆಚಾರ್ಯರೇ, ಇದೇನು? ಬೃಹತ್‌ಸ್ತೋತ್ರವನ್ನೇ ಪ್ರಾರಂಭಿಸಿದಿರಿ? ದೇಶಾವರಿಗೆ ಹೋದಾಗ ಗೃಹಸ್ಥರನ್ನು ವೃಥಾಸ್ತುತಿಸಿ-ಸ್ತುತಿಸಿ ನಿಮಗೆ ಚಾಳಿಬಿದ್ದು ಹೋಗಿರುತ್ತದೆ. ದೊಡ್ಡ ದೊಡ್ಡ ಶಬ್ದಗಳೂ ಉಪಮಾನ-ಉಪಮೇಯುಗಳೂ ನಿಮ್ಮ ನಾಲಿಗೆಯ ಮೇಲೆ ಕುಣಿಯುತ್ತಿರುತ್ತವಲ್ಲವೇ?

ಸುಧಾರಕ—ಬಿಡಿರಿ; ರಾಯರೇ, ಆಚಾರ್ಯರದೇನು ಯಾವಾಗಲೂ ವಿನೋದ ನಡದೇ ಇರುತ್ತದೆ. ನಾವು ನಮ್ಮ ಪ್ರಕೃತ ವಿಷಯವನ್ನನುಸರಿಸೋಣ; ಬ್ರಾಹ್ಮಣರಾದ ನಮ್ಮಲ್ಲಿ ಊಟಕ್ಕೆ ಕೂಡ್ರಬೇಕಾದರೆ ಪ್ರತಿಯೊಬ್ಬರು ದೂರ ದೂರ ಯಾಕೆ ಕುಳಿತುಕೊಳ್ಳುವರು? ಒಬ್ಬೊಬ್ಬರ ನಡುವೆ ಹಾಗೆ ಅಂತರ ಬಿಡುವದರ ಉದ್ದೇಶವೇನು?

ಶಾಮರಾಯ—ಇದಕ್ಕೆ ಧರ್ಮಶಾಸ್ತ್ರದಲ್ಲಿ ಆಧಾರವುಂಟು. ಅದೇನಂದರೆ—ಪ್ರತಿಯೊಂದು ಪ್ರಾಣಿಗೂ ಪ್ರಾಣತೇಜದ ಆವರಣವುಂಟು. ಅದರಲ್ಲಿ ಮನುಷ್ಯಮಾತ್ರರ ಪ್ರಾಣತೇಜದ ಆವರಣವು ಪ್ರತಿಯೊಬ್ಬ ಮನುಷ್ಯನ ಮಸ್ತಕದ ಸುತ್ತುವರೆದು ಒಂದು ಒಂದೂವರೆ ಮೊಳದ ವರೆಗೆ ಪಸರಿಸಿರುತ್ತದೆ. ಈ ತೇಜಾವರಣವು ಸುಷ್ಟ ಅಥವಾ ದುಷ್ಟ ವಿಚಾರಗಳಲ್ಲಿ ಮಗ್ನನಾದವನ ಅಥವಾ ಆ ಬಗೆಯ ಕಾರ್ಯಮಾಡುವವನ ಏಕಾಗ್ರತೆಯ ಪ್ರಮಾಣದಿಂದ ಹೆಚ್ಚು ವಿಸ್ತೃತವಾಗಿಯಾಗಲಿ, ಆಕುಂಚಿತವಾಗಿಯಾಗಲಿ ಆಗಿರುತ್ತದೆ. ಆದ್ದರಿಂದ ಬ್ರಾಹ್ಮಣರಲ್ಲಿ ಪರಸ್ಪರರ ತೇಜಾವರಣದ ಮಂಡಲಗಳು ಕೂಡಬಾರದೆಂದು ನಡುವೆ ತಕ್ಕಷ್ಟು ಅಂತರಬಿಟ್ಟು ಊಟಕ್ಕೆ ಕೂಡ್ರುವ ಕಟ್ಟುಮಾಡಲ್ಪಟ್ಟಿರುತ್ತದೆ; ಮತ್ತು ಕ್ರೂರ ವೃತ್ತಿಯವರ ನೆರಳು ಸಹ ಬೀಳಲಾಗದೆಂದು ಪ್ರತಿಬಂಧಕವಿರುತ್ತದೆ. ಮನುಷ್ಯನಿಗೆ ಅನ್ನಸೇವನೆಯ ಕಾಲವು ಆತನ ಆಯುಷ್ಯದಲ್ಲಿ ಬಹು ಮಹತ್ವದ್ದಿರುತ್ತದೆ. ಯಾಕಂದರೆ ಆತನು ತಿಂದ ಅನ್ನದಿಂದ ರಕ್ತವುಂಟಾಗಿ ಅದರಿಂದ ಆತನ ದೇಹಯಂತ್ರವು ನಡೆಯಬೇಕಾಗುತ್ತದೆ. ದೇಹಚಾಲಕವಾದ ಆ ರಕ್ತವು ಶುದ್ಧವೂ ಪವಿತ್ರವೂ ಆಗಿದ್ದರೆ ಅದರಿಂದ ಸುಬುದ್ಧಿ-ಶುದ್ಧಮನಸ್ಸುಗಳುಂಟಾಗುತ್ತವೆ. ಅಶುದ್ಧಮನಸ್ಸಿನಿಂದ-ಅಶುಚಿಸ್ಥಿತಿಯಿಂದ ಸೇವಿಸಿದ ಅನ್ನವು ಶುದ್ಧರಕ್ತವನ್ನು ಎಂದಿಗೂ ಕೊಡಲಾರದು. ಅಷ್ಟು ದೂರವೇಕೆ? ಕೆಟ್ಟಕಣ್ಣಿನ ಜನರು ನೋಡಿದ ಆಹಾರವನ್ನು ತಿಂದರೆ ಅದರಿಂದ ಏನುಪರಿಣಾಮವಾಗುತ್ತದೆಂಬುದು ಅನುಭವ ಸಿದ್ಧವಷ್ಟೇ? ಆ ದೃಷ್ಟಿಯಿಂದ ಅನ್ನದಲ್ಲಿ ಹ್ಯಾಗೆ ದೋಷವುಂಟಾಗುತ್ತದೋ ಹಾಗೆಯೇ ಅಶುಚಿಸ್ಥಿತಿಯಿಂದ ಅನ್ನದಲ್ಲಿ ದೋಷವುತ್ಪನ್ನವಾಗುತ್ತದೆ. ಊಟಕ್ಕೆ ಕುಳಿತಾಗ ಪರಸ್ಪರರನ್ನು ಮುಟ್ಟಿದರೆ

ಯಾವ ದೋಷವುತ್ಪನ್ನವಾಗುವದೋ ಅಷ್ಟೇ ದೋಷವು ಪರಸ್ಪರರ ಪ್ರಾಣತೇಜಾವರಣಗಳು ಕೂಡಿದರೆ ಉಂಟಾಗುತ್ತದೆ.

---

## ಲೇಖಾಂಕ ೬.

ಸುಧಾರಕ—ರಾಯರೇ, ಈ ಮಡಿ-ಮೈಲಿಗೆಯ ವಿಷಯವು ಬಹುಸೂಕ್ಷ್ಮ ವಿಚಾರದಿಂದ ಒಳಗೊಂಡಿರುವದು. ಇದನ್ನು ತಿಳಿಯುವ ಬಗ್ಗೆ ನಿಮಗೆ ಇಷ್ಟು ತೊಂದರೆ ಕೊಡಬೇಕಾಯಿತು. ಕ್ಷಮೆಯಿರಲಿ.

ಶಾಮರಾಯ—ಇದರಿಂದ ನನಗೇತರ ತೊಂದರೆ? ಬಿಲವಾಗುತ್ತಿರುವ ಆರ್ಯಧರ್ಮದ ವಿಷಯವಾಗಿ ಸದಾಯೋಚನೆಯಲ್ಲಿರುವ ನನಗೆ ಈಗ ನಾಲ್ಕೈದು ದಿನಗಳಿಂದ ನಿನ್ನೊಡನೆ ಧರ್ಮದ ವಿಷಯವಾಗಿ ಮಾತಾಡುವ ಪ್ರಸಂಗಬಂದದ್ದರಿಂದ ನನಗೆ ಒಂದುಬಗೆಯಿಂದ ಸಂತೋಷವೇ ಆಗಿರುತ್ತದೆ. ಅದರಲ್ಲಿಯೂ ನಿನ್ನಂಥ ಸುಧಾರಕನು ಹಾದಿಗೆ ಹತ್ತಿದ್ದರಿಂದ ನನಗೆ ಹೇಳಕೂಡದಷ್ಟು ಆನಂದವಾಗಿದೆ. ಮತ್ತೇನಾದರೂ ಸಂಶಯವಿದ್ದರೆ ಈಗ್ಗೇ ಕೇಳಿಕೊಂಡುಬಿಡು.

ಸುಧಾರಕ—ರಾಯರೇ, ಈ ವಿಷಯದಲ್ಲಿ ಮತ್ತೇನು ಕೇಳುವದದೆ? ಕೇಳತಕ್ಕ ವಿಷಯವನ್ನೆಲ್ಲ ಕೇಳಿದಹಾಗಾಯಿತು. ಒಂದು ವೇಳೆ ಏನಾದರೂ ತಿಳಿಯತಕ್ಕ ವಿಷಯವಿದ್ದರೆ ನೀವೇ ವಿಚಾರಮಾಡಿ ಹೇಳಿರಿ.

ಶಾಮರಾಯ—ಅಸ್ಪೃಶ್ಯಜನರ ವಿಷಯವಾಗಿ ಹಿಂದುಗಡೆ ಮಾತಾಡೋಣವೆಂದು ಹೇಳಿದ್ದಿಯಷ್ಟೆ? ಅದರಲ್ಲೇನಾದರೂ ತಿಳಿಯತಕ್ಕ ಅಂಶವಿದ್ದರೆ ಕೇಳು.

ಸುಧಾರಕ—ಈಗಾಗಿದ್ದ ವಿವೇಚನೆಯಿಂದ ಆ ವಿಷಯದಲ್ಲಿದ್ದ ನನ್ನ ಸಂಶಯವು ಛಿನ್ನವಿಚ್ಛಿನ್ನವಾಗಿರುವದು. ಸುಧಾರಕರ ಈ ಕೂಗಾಟದಲ್ಲಿ ಏನೂ ಅರ್ಥವಿಲ್ಲೆಂದು ಖಂಡಿತತಿಳಿದಿರುವೆನು. ಅವರು ಸಮಾಜದ ಸುಧಾರಣೆಮಾಡುತ್ತೇವೆಂದು ಹೇಳಿ ಅಂತ್ಯಜೋದ್ಧಾರ-ಪುನರ್ವಿವಾಹಗಳನ್ನುಮುಂದೆ ಮಾಡುತ್ತಿರುವದರ ಜೀವಾಳವು ಏನಿರುತ್ತದೆಂಬದು ನನಗೆ ಹೊಳೆದಿರುವದು. ಇಷ್ಟುದಿನ ನಾನು ಅವರ ಗುಂಪಿನಲ್ಲಿಯೇನಿಂತು ವಿಚಾರಮಾಡುತ್ತಿದ್ದೆನಾದ್ದರಿಂದ ನನಗೆ ನಮ್ಮ ತಪ್ಪುಗಳು ತಿಳಿಯುತ್ತಿದ್ದಿಲ್ಲ. ಈಗ ನಾನು ಅವರಿಂದ ಹೊರಗೆ ಬಂದದ್ದರಿಂದ ಅವರ ಹುಳುಕುಗಳು ನನಗೆ ಸ್ಪಷ್ಟವಾಗಿ ಕಾಣಿಸಹತ್ತಿರುವವು. ಪುನರ್ವಿವಾಹದ ನಿಮಿತ್ಯದಿಂದ ಅನಾಥ

ಸ್ತ್ರೀಯರಮೇಲೆ ದಯದೋರುತ್ತಿದ್ದ ಸುಧಾರಕರಲ್ಲಿ ಇಂದಿನವರೆಗೆ ಒಬ್ಬನಾದರೂ ಕುರುಡ-ಕುಂಟ ಅಥವಾ ಕುರೂಪವುಳ್ಳ ವಿಧವೆಯರನ್ನು ಲಗ್ನವಾಗಿರುವದಿಲ್ಲ. ಗೌರಾಂಗದ ಸುಂದರಿಯರನ್ನು ನೋಡಿಯೇ ಅವರೊಡನೆ ಒಡನಾಡುತ್ತಿರುವರು. ಇದರಿಂದ ವಿಧವೆಯರ ವಿಷಯವಾಗಿದ್ದ ಅವರ ಕನಿಕರವು ಎಂಥದೆಂಬದು ಮೇಲೆಯೇ ಸಿದ್ಧವಾಗುತ್ತದೆ. ಇದರಂತೆ ಅಸ್ಪೃಶ್ಯರನ್ನು ಕೂಡಿಕೊಳ್ಳುವದರಲ್ಲಾದರೂ ಅವರ ಮನೋದೌರ್ಬಲ್ಯವಿರುತ್ತದೆ. ಅಂದಮೇಲೆ ಆ ವಿಷಯದಲ್ಲಿ ಚರ್ಚೆ ಸಾಕು. ಸದ್ಯಕ್ಕೆ ಪ್ರಚಾರದಲ್ಲಿರುವ ಆಚರಣೆಯಲ್ಲಿ ತಪ್ಪು-ಒಪ್ಪುಗಳಿದ್ದರೆ ಹೇಳಿರಿ.

ಶಾಮರಾಯ—ದೇಶಕಾಲಮಾನದಂತೆ ಈ ಮಡಿ-ಮೈಲಿಗೆಯ ವಿಚಾರದಲ್ಲಿ ಜನರು ಬಹಳ ಅಭ್ಯಂತರಮಾಡಿಕೊಂಡಿರುವರು. ದಾಕ್ಷಿಣಾತ್ಯರಲ್ಲಿ ಮಡಿ-ಮೈಲಿಗೆಯ ನಿರ್ಬಂಧವು ಸ್ವಲ್ಪ ಶಿಥಿಲವೆಂದೇ ಹೇಳಬೇಕಾಗುವದು. ಈಗ ಶಿಥಿಲವಾಗಿ ತೋರುವದರಿಂದ ಪೂರ್ವದಿಂದಲೂ ಅವರು ಇದೇ ರೀತಿಯಾಗಿ ಆಚರಿಸುತ್ತ ಬಂದಿರುವರೆಂದು ಮಾತ್ರ ಹೇಳಲಿಕ್ಕಾಗದು. ಯಾಕೆಂದರೆ ನಮ್ಮ ದೇಶದಲ್ಲಾದರೂ ಈಗ ಎಷ್ಟೋ ಕಡಿಮೆಯಾಗಿದೆ. ಅಷ್ಟು ಕಠಿಣತರವಾದ ನಿರ್ಬಂಧವನ್ನು ಯಾರೂ ಪಾಲಿಸುವಂತೆ ತೋರುವದಿಲ್ಲ; ಇದ್ದರೆ ಅಪವಾದ ರೂಪವಾಗಿಯಾರಾದರೂ ಮಹಾತ್ಮರು ಇರಬಹುದು. ಇರಲಿ; ಒಟ್ಟಿಗೆ ಹೇಳತಕ್ಕದ್ದೇನಂದರೆ ಈಗ ಬಹುಶಃ ಜನರು ಧರ್ಮಶಾಸ್ತ್ರಾಜ್ಞೆಯಂತೆ ಈ ನಿಯಮವನ್ನು ಪಾಲಿಸುವದಿಲ್ಲ. ಅವರಿಗೆ ಅದು ಬೇಕಾಗಿರುವದೂ ಇಲ್ಲ. ಯಾಕೆಂದರೆ ಮನಸ್ಸು ವಿಷಯಾಸಕ್ತವಾಗಿರುವದರಿಂದ ಈಗಿನವರಿಗೆ ಅಧ್ಯಾತ್ಮದ ಕಡೆಗೆ ಲಕ್ಷ್ಯವಿರುವದಿಲ್ಲ. ಸಾಧ್ಯವಾದಮಟ್ಟಿಗೆ ಈ ನಿರ್ಬಂಧವನ್ನು ಪಾಲಿಸುವದು ಪ್ರತಿಯೊಬ್ಬನ ಕರ್ತವ್ಯವಿರುವದು. ಪರಿಸ್ಥಿತಿಯು ಕೆಟ್ಟಿರುವದೆಂದು ಮನಬಂದಂತೆ ಕುಣಿದಾಡುವದು ಮತ್ತಿಷ್ಟು ಅಕಲ್ಯಾಣಕ್ಕೆ ಕಾರಣವು. ಆದ್ದರಿಂದ ಅನಾಚಾರಗಳನ್ನು ಸಂಪೂರ್ಣವಾಗಿ ಬಿಡಬೇಕು. ತೀರ ನಿಷಿದ್ಧ ಸಂಗತಿಗಳನ್ನು ಅಂದರೆ ಯಾವದನ್ನು ಮಾಡುವದರಿಂದ ನಮ್ಮ ಆರ್ಯಸಮಾಜಸಂಸ್ಕೃತಿಗೆ ಬಾಧೆಬರುವದೋ ಅಂಥವುಗಳನ್ನು ವರ್ಜಿಸುವದು ವಿಹಿತವು. ಉಗಿಬಂಡಿಯಲ್ಲಿ ಕುಳಿತು ಊಟಮಾಡುವದು, ಖಾನಾವಳಿಯಲ್ಲಿ ಇಲ್ಲವೆ ಮನೆಯಲ್ಲಿ ಬೂಟು-ಕೋಟುಗಳನ್ನು ಹಾಕಿಕೊಂಡು ಊಟಮಾಡುವದೂ ಆರ್ಯಸಂಸ್ಕೃತಿಗೆ ನೀರುಹಿಡಿಯುವ ಸಾಧನಗಳಾಗಿವೆ. ಆದ್ದರಿಂದ ಪೂರ್ವಜರು ಹಾಕಿದ ವಿಶಿಷ್ಟ ಪದ್ಧತಿಯಂತೆ ನಡೆಯುವದು, ನಮಗೆ ಶಾರೀರಿಕ ಹಾಗು ಮಾನಸಿಕಉನ್ನತಿಗಳ ದೃಷ್ಟಿಯಿಂದಬಹು ಹಿತಕರವಿರುತ್ತದೆ. ಸುಧಾರಕಾ, ನೀನೇ ವಿಚಾರಮಾಡು; ಈಗ ನಮ್ಮ ದೇಶದಲ್ಲಿ

ಎಷ್ಟೋ ಜನ ಪದವೀಧರರೂ ವಿದ್ವಾಂಸರೂ ಇರುವರಷ್ಟೇ; ಇಷ್ಟು ಜನ ವಿದ್ಯಾಸಂಪನ್ನರಿದ್ದರೂ ಅವರಲ್ಲಿ ಒಬ್ಬರಲ್ಲಾದರೂ ಮನಸ್ಸಿನತೃಪ್ತಿ ಅಥವಾ ಮನಸ್ಸಮಾಧಾನವು ಇರುತ್ತದೇನೆಂಬದನ್ನು ವಿಚಾರಮಾಡು. ನಾನು ನನ್ನ ಅನುಭವದಿಂದ ಹೇಳುವದೇನಂದರೆ—ಚಿಕ್ಕಂದಿನಲ್ಲಿ ತಂದೆಯ ಶಿಕ್ಷಣದಲ್ಲಿದ್ದಾಗ ನಾನು ಸದಾಚಾರಿಯಾಗಿದ್ದೆನು. ಆಗ ನನ್ನಿಂದ ಮಡಿ-ಮೈಲಿಗೆಯ ನಿಯಮಗಳು ಚನ್ನಾಗಿ ಪಾಲಿಸಲ್ಪಡುತ್ತಿದ್ದವು. ಆದರಿಂದ ಚಿಕ್ಕತನದಲ್ಲಿ ನನ್ನಲ್ಲಿ ಸಮಾಧಾನವೂ ಮನಃಪ್ರಸನ್ನತೆಯೂ ವಿಶೇಷವಾಗಿತ್ತು. ಮುಂದೆ ನಾನು ಮನೆಯಿಂದ ಹೊರಬಿದ್ದು ಹೆಚ್ಚಿನ ಅಭ್ಯಾಸಕ್ಕಾಗಿ ಯಾವಾಗ ಶಹರವನ್ನು ಹಿಡಿದೆನೋ ಆಗ ನನ್ನ ಪರಿಸ್ಥಿತಿಯು ಬದಲಿಸಿಹೋಯಿತು. ಸರಿಕರ ಅನುಕರಣದಿಂದ ನಾನು ದುರಾಚಾರಿಯಾದೆನು. ಮಡಿ-ಮೈಲಿಗೆ-ವಿಧಿ-ನಿಷೇಧಗಳ ವಿಚಾರವು ಕೈಬಿಟ್ಟಿತು. ಈ ಸ್ಥಿತಿಯಲ್ಲಿ ನನ್ನ ಮನಸ್ಸಿನ ಪ್ರಸನ್ನತೆಯೂ-ಸಮಾಧಾನವೂ ಹೇಳಹೆಸರಿಲ್ಲದೆ ಹೋದವು. ನಾನು ಎಮ್. ಎ. ಪರೀಕ್ಷೆಯಲ್ಲಿ ತೀರ್ಗಡೆಹೊಂದಿ ಪ್ರೊಫೇಸರನೆಂಬ ಬಿರುದಿಗೆ ಪಾತ್ರನಾದರೂ ನನ್ನ ಮನಸ್ಸು ನನ್ನ ಕೈಯಲ್ಲಿ ಇಲ್ಲದೆಹೋಯಿತು. ಇದು ನನ್ನ ಪೂರ್ಣ ಅನುಭವಕ್ಕೆ ಬಂದಮಾತು. ಬಳಿಕ ನಾನು ಪುನಃ ಮನೆಗೆಬಂದು ನನ್ನ ಕೃತಕರ್ಮಕ್ಕೆ ಪಶ್ಚಾತ್ತಾಪಪಟ್ಟು ಯಾವಾಗ ಆರ್ಯಸಂಸ್ಕೃತಿಯಂತೆ ನಡೆಯಹತ್ತಿದೆನೋ ಆಗ ನನಗೆ ಶಾಂತಿಯು ದೊರಕಿತು. ಆಗ ನಾನು ಮಡಿ-ಮೈಲಿಗೆಯ ವಿಷಯವನ್ನು ಕುರಿತು ಅನೇಕ ಧರ್ಮಗ್ರಂಥಗಳನ್ನು ಪರಿಶೀಲಿಸಿ ನಾನು ನಿರ್ಧರಿಸಿದ ಸಂಗತಿಯ ಸಾರವನ್ನು ನಿನಗೆ ಹೇಳುತ್ತೇನೆ. ನನ್ನಂತೆ ನನ್ನ ಹಲವು ವ್ಯವಸಾಯ ಬಂಧುಗಳು ಆಗ ಮನಸ್ಸಮಾಧಾನವಿಲ್ಲದೆ ಪೇಚಾಡುತ್ತಿದ್ದರೆಂಬದನ್ನಾದರೂ ನಾನು ಬಲ್ಲೆನು. ಅಪ್ಪಾ ಸುಧಾರಕಾ, ಇದರಿಂದ ಸಿದ್ಧವಾಗುವದೇನಂದರೆ—ಮನಸ್ಸು ಸೂಕ್ಷ್ಮದರ್ಶಕಯಂತ್ರಕ್ಕೆ ಗೋಚರಿಸದ್ದರಿಂದ ಅದರಮೇಲಾಗುವ ಪರಿಣಾಮಗಳು ಅದಕ್ಕೆಗೋಚರಿಸುವದಿಲ್ಲ. ಮನಸ್ಸಿನ ಮೇಲಾಗುವ ಪರಿಣಾಮವು ಅನುಭವದಿಂದಲೇ ಗೊತ್ತಾಗತಕ್ಕದ್ದು. ಮಡಿ-ಮೈಲಿಗೆಯ ವಿಷಯವು ಹೀಗಿದ್ದು ನೀನು ಮೊದಲನೇದಿನ ನಮ್ಮ ಕಡೆಗೆ ಬಂದಾಗ ಮಡಿ-ಮೈಲಿಗೆಯ ಆಚಾರಧರ್ಮವನ್ನು ತಿರಸ್ಕರಿಸಹತ್ತಿ, ಒಬ್ಬ ಅತಿ ಶೂದ್ರನ ದೋಶರದ ತುಣುಕು, ನೂರಾರುಜನ ಬ್ರಾಹ್ಮಣರನ್ನು ಮೈಲಿಗೆ ಮಾಡುವದನ್ನು ಯಾವ ಬ್ರಾಹ್ಮಣನು ಸೂಕ್ಷ್ಮದರ್ಶಕಯಂತ್ರದಲ್ಲಿ ತೋರಿಸುವನೆಂದು ಕೇಳಿದ್ದಿಯಷ್ಟೇ; ಆ ಶಂಕೆಯು ನಿನ್ನಲ್ಲಿ ಈಗ ಉಳಿದಿರಬಹುದೇನು?

ಸುಧಾರಕ—ಛೇ; ರಾಯರೇ, ಈಗ ಶಂಕೆಯ ಮಾತನ್ನೇ ಆಡುವಹಾಗಿಲ್ಲ.

ನೀವು ಹೇಳುವ ವಿಷಯುಗಳನ್ನು ನಾನು ಚನ್ನಾಗಿ ಮನನ ಮಾಡಿಕೊಂಡಿದ್ದೇನೆ. ಅದರಲ್ಲಿ ನನಗೆ ಸಂಶಯವುಂಟಾಗಿದ್ದರೆ ನಾನು ಸುಧಾರಕರ ಪಂಥವನ್ನು ಬಿಡುತ್ತಿದ್ದಿಲ್ಲ.

ಆಚಾರ್ಯ—ರಾಯರೇ, ನಮ್ಮ ಸುಧಾರಕರು ನಿಜವಾಗಿಯೇ ಮಡಿ-ಮೈಲಿಗೆಯ ಗುಟ್ಟನ್ನು ತಿಳಿದರೆಂಬಂತೆ ತೋರುತ್ತದೆ. ಈಗ ಅವರ ವೇಷವನ್ನು ನೋಡಿರಿ! ಶುದ್ಧ ಹಿಂದುಗಳಂತೆ ಕಾಣುವರು. ಬ್ರಾಹ್ಮಣನ ಬಾಹ್ಯಲಕ್ಷಣವು ಒಡೆದು ಕಾಣುವದು. ಶಾಬಾಸ್ ಸುಧಾರಕಮಹಾಶಯ! ಮೊದಲಿನಿಂದ ನೀವು ಹೀಗಿದ್ದರೆ ನಿಮಗೆ ಎಷ್ಟು ಭೂಷಣವೆನಿಸುತ್ತಿತ್ತಲ್ಲ?

ಸುಧಾರಕ—ಆಚಾರ್ಯರೇ, ದುಷ್ಕಾಳದಲ್ಲಿಯೇ ಅನ್ನದ ಮಹತ್ವವಿದ್ದಂತೆ ಜನರು ಧರ್ಮಶೂನ್ಯರಾದ ಕಾಲದಲ್ಲಿಯೇ ಧರ್ಮಕ್ಕೆ ಮಹತ್ವವು ಬರುವದು. ಸುಧಾರಕರು ಧರ್ಮವನ್ನು ನಿರಾಕರಿಸುವರಷ್ಟೇ; ಧರ್ಮದ ವಿಷಯವಾಗಿರುವ ಅವರ ಈ ಅಜ್ಞಾನವೇ ಒಮ್ಮಿಲ್ಲೊಮ್ಮೆ ಪ್ರಸಂಗಬಂದಾಗ ಅವರನ್ನು ಒಳ್ಳೇ ಧರ್ಮಾಭಿಮಾನಿಗಳನ್ನಾಗಿಮಾಡುವದು. ಇದಕ್ಕೆ ಈಗ ನನ್ನಲ್ಲುಂಟಾಗಿರುವ ಧರ್ಮಬುದ್ಧಿಯೇ ಸಾಕ್ಷಿಯಾಗಿರುವದು.

ಶಾಮರಾಯ—ಆಚಾರ್ಯರೇ, ನಮ್ಮ ಸುಧಾರಕರ ಬುದ್ಧಿಯಲ್ಲಿ ಎಷ್ಟು ಅಭ್ಯಂತರವಾಯಿತು ನೋಡಿರಿ! ಸದ್ವಿಚಾರಗಳು ಅವರಲ್ಲಿ ತಮ್ಮಿಂದ ತಾವೇ ಉತ್ಪನ್ನವಾಗಹತ್ತಿವೆ. ಧರ್ಮದ ವಿಷಯುವಾಗಿ ಇಷ್ಟುದಿವಸ ಬೀಳುಬಿದ್ದಿಷ್ಟ ಅವರ ಮನೋಭೂಮಿಕೆಯಲ್ಲಿ ಇನ್ನುಮುಂದೆ ಧರ್ಮದಬೆಳೆಯು ಒಳ್ಳೇಭರದಿಂದಬರುವದು.

ಆಚಾರ್ಯ(ನಕ್ಕು)—ರಾಯರೇ, ನಿಮ್ಮ ಮಾತು ನಿಜ.

ಶಾಮರಾಯ—ಆಚಾರ್ಯರೇ, ನಾನು ಈ ಮಾತನ್ನು ಯಾಕೆ ಆಡಿದೆನೆಂಬದರ ರಹಸ್ಯವು ನಿಮಗೆ ತಿಳಿಯಿತೇನು? ಸ್ಪಷ್ಟವಾಗಿಯೇ ಹೇಳುತ್ತೇನೆಕೇಳಿರಿ. ನಮ್ಮಲ್ಲಿ ಕೆಲವರು ಧಾರ್ಮಿಕರೆನಿಸಿಕೊಳ್ಳುವವರು ಬಹಿರಂಗದಲ್ಲಷ್ಟೇ ಮಡಿಯನ್ನು ಕಾಯ್ದುಕೊಳ್ಳುತ್ತಾರೆ. ಮನಸ್ಸಿನ ನಿರ್ಮಲತೆಯ ವಿಷಯುವಾಗಿ ಎಚ್ಚರಪಡುವದಿಲ್ಲ. ಆದ್ದರಿಂದ ಅವರಿಗೆ ಮಡಿಯ ರಹಸ್ಯವೇ ಗೊತ್ತಾಗಿಲ್ಲವೆಂದು ಹೇಳಬೇಕಾಗುತ್ತದೆ. ಮುಖ್ಯವಾಗಿ ಮಡಿ-ಮೈಲಿಗೆಯ ನಿಯಮದಿಂದ ಮನಸ್ಸಿನ ಶುದ್ಧೀಕರಣವನ್ನು ಮಾಡಿಕೊಳ್ಳುವದಿದ್ದು ಅದನ್ನೇ ಸಾಧಿಸಿಕೊಳ್ಳದಿದ್ದರೆ "ಮೂಲೇ ಕುಠಾರಃ" ಎಂಬಂತಾಗುವದಲ್ಲವೇ? ಆದ್ದರಿಂದ ಧರ್ಮದಲ್ಲಿ ಅಜ್ಞಾನಿಗಳಾದವರಿಗೆ ಒಮ್ಮೆ ಧರ್ಮವು ತಿಳಿಯಿತೆಂದರೆ ಅವರು ಅದರ ಬೆಲೆಯನ್ನರಿತು ಒಳ್ಳೇ ಆತುರದಿಂದ ಅದರ ಉದ್ದೇಶವನ್ನು ಸಾಧಿಸಿಕೊಳ್ಳುವರೆಂದು ಹೇಳಬೇಕಾಯಿತು.

ಸುಧಾರಕ(ನಡುವೇ ಬಾಯಿಹಾಕಿ)—ರಾಯರೇ, ಇಲ್ಲಿ ಇನ್ನೊಂದು ಸಂಗತಿಯನ್ನು ಕೇಳಬೇಕಾಯಿತು. ಅದೇನಂದರೆ—ಮಡಿ-ಮೈಲಿಗೆಯ ನಿರ್ಬಂಧದ ಕೊನೆಯ ಧ್ಯೇಯವು ಮನಸ್ಸು ಶಾಂತತೆಯನ್ನು ಹೊಂದುವದಷ್ಟೇ? ಆದರೆ ಒಮ್ಮೆ ಈ ನಿಯಮಗಳನ್ನು ಪಾಲಿಸಿ ಮನಸ್ಸನ್ನು ನಿರ್ಮಲಮಾಡಿಕೊಂಡ ಬಳಿಕ ಪುನಃ ಆ ನಿಯಮಗಳನ್ನು ಪಾಲಿಸುವ ಕಾರಣವೇನು?

ರಾಮರಾಯ—ಮನಸ್ಸು ಒಮ್ಮೆ ಶುದ್ಧವಾದರೂ ಪುನಃ ಅದಕ್ಕೆ ವಿಷಯ ಸಂಸರ್ಗದಿಂದ ಮಾಲಿನ್ಯವುಂಟಾಗದಂತೆ ಅಂದರೆ ಅದು ಪುನಃ ದುರಾಚಾರಪ್ರವರ್ತಕವಾಗದಂತೆ ಅದನ್ನು ಪರಿಶುದ್ಧಸ್ಥಿತಿಯಿಂದ ಇಡುವದಕ್ಕೆ ಈ ನಿಯಮಗಳನ್ನು ಅವಶ್ಯವಾಗಿ ಪಾಲಿಸಬೇಕು. ಇನ್ನು ಅತ್ಯುಚ್ಚಕೋಟಿಯಲ್ಲಿ ಗಣಿಸಲ್ಪಟ್ಟ ಸತ್ಪುರುಷರು-ಬ್ರಹ್ಮಾನುಭವವನ್ನು ಹೊಂದಿದವರು ಪುನಃ ಮನೋವಿಕಾರಕ್ಕೆ ಒಳಗಾಗದ್ದರಿಂದ ಒಂದು ವೇಳೆ ಅವರು ಈ ನಿಯಮವನ್ನುಲ್ಲಂಘಿಸಿ ನಡೆದರೂ ನಡೆಯಬಹುದು. ಆದರೆ "ಯದ್ಯದಾಚರತಿ ಶ್ರೇಷ್ಠಃ" ಎಂಬ ಗೀತೆಯ ಶ್ಲೋಕದಲ್ಲಿ ಭಗವಂತನು ದೊಡ್ಡವರು ಹ್ಯಾಗೆ ವರ್ತಿಸುವರೋ ಹಾಗೆ ಸಾಮಾನ್ಯರೂ ವರ್ತಿಸುವರೆಂದು ಲೋಕನಡವಳಿಕೆಯನ್ನು ಹೇಳಿರುವದರಿಂದ ಸಜ್ಜನರೂ ಹಾಗೆ ಸ್ವೇಚ್ಛೆಯಾಗಿ ನಡೆಯುವ ಹಾಗಿಲ್ಲ. ಲೋಕಸಂಗ್ರಹಾರ್ಥವಾಗಿ ಅವರೂ ಈ ಮಡಿ-ಮೈಲಿಗೆಯ ನಿರ್ಬಂಧವನ್ನು ಪಾಲಿಸಲೇ ಬೇಕಾಗುತ್ತದೆ. ಒಟ್ಟಿಗೆ ಆರ್ಯಸಂಸ್ಕೃತಿಯನ್ನು ಕಾಯಬೇಕೆಂಬ ಅಭಿಮಾನವುಳ್ಳ ಪ್ರತಿಯೊಬ್ಬನು ಈ ನಿಯಮವನ್ನು ಪಾಲಿಸಲೇ ಬೇಕು. ಅಂದರೇ ಅವನಲ್ಲಿ ಧಾರ್ಮಿಕ ನಿಯಮವುಳಿದು, ಅವನ ಕಲ್ಯಾಣವಾಗುವದು. ಹಾಗು ಅವನು ಹುಟ್ಟಿದ ದೇಶವು ಸುಖಸಮಾಧಾನಗಳಿಂದ ಸಮೃದ್ಧವಾಗುವದು.

ಸುಧಾರಕ—ರಾಯರೇ, ಇಷ್ಟುದಿವಸ ನಿಮ್ಮ ಸಮೀಚೀನವಾದ ಪ್ರವಚನವನ್ನು ಕೇಳಿ ಬಹು ಸಮಾಧಾನವಾಯಿತು. ನನ್ನ ಆಕ್ಷೇಪಣೆಗಳಿಗೆಲ್ಲ ತೃಪ್ತಿಕರವಾದ ಉತ್ತರವು ದೊರೆತಹಾಗಾಯಿತು. ಇನ್ನುಮುಂದೆ ನಾನು ಆರ್ಯಸಂಸ್ಕೃತಿಗೆ ತಕ್ಕಂತೆ ಮಡಿ-ಮೈಲಿಗೆಯ ಸಂಪೂರ್ಣ ನಿಯಮಗಳನ್ನು ಪಾಲಿಸುತ್ತೇನೆ.

ಸಂಪೂರ್ಣ.

ಆನಂದವನ-ಅಗಡಿಯ ಶ್ರೀ ಶೇಷಾಚಲ ಪ್ರಿಂಟಿಂಗ ಪ್ರೆಸ್ಸಿನಲ್ಲಿ
ಭಿ. ಪ. ಕಾಳೆ ಇವರಿಂದ ಮುದ್ರಿಸಲ್ಪಟ್ಟಿತು.